Bennett & Coleman
THE TIMES OF INDIA
ಸೋಮವಾರ,11 ಮೇ 2026 | ಪುಟಗಳು: 12 | ಬೆಲೆ: ₹ 5.00
www.vijaykarnataka.com
ಸಂಪುಟ: 27 | ಸಂಚಿಕೆ: 130
ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA
VK
ವಿಜಯ ಕರ್ನಾಟಕ

ಉಕ್ರೇನ್ ಸಮರ ಮುಗಿಯುತ್ತಿದೆ ಎಂದ ಪುಟಿನ್, ಮಾತುಕತೆ ಸುಳಿವು ನೀಡಿದ ರಷ್ಯಾ ಅಧ್ಯಕ್ಷ

ಪಾಕಿಸ್ತಾನದ ಖೈಬರ್ ಪಂಖ್ತುಂಖ್ವಾ ಪ್ರಾಂತ್ಯದ ಬನ್ನು ಜಿಲ್ಲೆಯ ಪೊಲೀಸ್ ಚೆಕ್‌ಪೋಸ್ಟ್‌ಮೇಲೆ ಉಗ್ರರಿಂದ ಆತ್ಮಾಹುತಿ ದಾಳಿ: 15 ಭದ್ರತಾ ಸಿಬ್ಬಂದಿ ಸಾವು

ಆರ್ಚರಿ ವಿಶ್ವಕಪ್ ಸ್ಟೇಜ್ 2 ಸ್ಪರ್ಧೆ: ದೀಪಿಕಾಕುಮಾರಿ ನೇತೃತ್ವದ ಭಾರತ ತಂಡಕ್ಕೆ ಚಿನ್ನದ ಗರಿ

Bennett & Coleman
THE TIMES OF INDIA

ಸಂಪಾದಕೀಯ EDITORIAL

ಇನ್ನು ವಿಜಯ ದಿವಸ

ಟಿವಿಕೆ ಎದುರಿಗಿದೆ ಸವಾಲುಗಳ ಸಾಗರ

ತಮಿಳುನಾಡಿನ ರಾಜಕೀಯ ತಲೆಯೆತ್ತಿ ನಿಂತಿರುವುದೇ ದ್ರಾವಿಡ ಚಿಂತನೆಗಳ ಬುನಾದಿಯ ಮೇಲೆ. ದಶಕಗಳಿಂದ ಡಿಎಂಕೆ ಮತ್ತು ಎಐಎಡಿಎಂಕೆ ನಡುವೆ ಸುತ್ತುತ್ತಿದ್ದ ರಾಜ್ಯ ರಾಜಕಾರಣಕ್ಕೆ ಈಗ 'ತಮಿಳಗ ವೆಟ್ರಿ ಕಳಗಂ' (ಟಿವಿಕೆ) ಮೂಲಕ ಹೊಸ ಆಯಾಮ ದೊರೆತಿದೆ. ನಟ ಸಿ. ಜೋಸೆಫ್ ವಿಜಯ್ ಬಹುಮತದೊಂದಿಗೆ ಅಧಿಕಾರ ಹಿಡಿದಿರುವುದು ಕೇವಲ ಸಿನಿಮಾ ನಟನೊಬ್ಬನ ವರ್ಚಸ್ಸಿನ ಗೆಲುವಲ್ಲ; ಬದಲಿಗೆ ರಾಜ್ಯದ ಮತದಾರರು ಬಯಸಿದ ಪರ್ಯಾಯ ಶಕ್ತಿಯ ಉದಯ. ಕಾಂಗ್ರೆಸ್ ಮತ್ತು ಎಡಪಕ್ಷಗಳ ಬೆಂಬಲದೊಂದಿಗೆ ವಿಜಯ್ ಸರಕಾರ ರಚನೆಯ ದಡ ತಲುಪಿರುವುದು ಹೌದಾದರೂ, ಆರಂಭಿಕ ಹಂತದಲ್ಲಿ ಕಂಡುಬಂದ ಗೊಂದಲಗಳು ಈ ಪಯಣ ಸುಲಭದ್ದಲ್ಲ ಎಂಬುದನ್ನು ಸಾರಿ ಹೇಳುತ್ತಿವೆ.

ಮಿತ್ರಪಕ್ಷಗಳ ವಿಶ್ವಾಸ ಕಳೆದುಕೊಳ್ಳದೆ, ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಮುನ್ನಡೆದರಷ್ಟೇ ಟಿವಿಕೆ ಪಾಲಿಗೆ ಈ 'ತಂತಿ ಮೇಲಿನ ನಡಿಗೆ'ಯು 'ವಿಜಯ ದಿವಸ'ವಾಗಲಿದೆ.

ಈ ಹಿಂದೆ ಜಯಲಲಿತಾ 43ನೇ ವಯಸ್ಸಿನಲ್ಲಿ ಮುಖ್ಯಮಂತ್ರಿಯಾಗಿ 'ಅತಿ ಕಿರಿಯ ಸಿಎಂ' ಎಂಬ ದಾಖಲೆ ಬರೆದಿದ್ದರು. ಈಗ ಅಧಿಕಾರ ಸಿಎಂ ಆಗಿ ಅಧಿಕಾರ ವಹಿಸಿಕೊಂಡಿರುವ 51 ವರ್ಷದ ವಿಜಯ್ ಕೂಡ 2ನೇ 'ಅತಿ ಕಿರಿಯ ಮುಖ್ಯಮಂತ್ರಿ' ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ವಿಜಯ್ ಅವರ ಗೆಲುವಿನ ಹಿಂದೆ ಒಂದು ಗಮನಾರ್ಹ ಅಂಶವಿದೆ; ಅದು ಯುವಜನತೆ ಮತ್ತು 'ಜೆನ್ ಜಿ' ಮತದಾರರ ಅಚಲ ಬೆಂಬಲ. ಚುನಾವಣಾ ಪ್ರಚಾರದ ವೇಳೆ ಮಕ್ಕಳು ತಮ್ಮ ತಂದೆ-ತಾಯಂದಿರನ್ನು ವಿಜಯ್ ಅವರಿಗೆ ಮತ ಹಾಕುವಂತೆ ಒತ್ತಾಯಿಸಿದ್ದು ಒಂದು ಸಾಮಾಜಿಕ ವಿದ್ಯಮಾನದಂತೆ ಕಂಡುಬಂದಿತ್ತು. ಈ ಯುವ ಸಮೂಹವೇ ತಮಿಳುನಾಡಿನ ನಾಳೆಯ ಪ್ರಜೆಗಳು. ಹೀಗಾಗಿ, ತಮ್ಮ ಮೇಲೆ ನಂಬಿಕೆಯಿಟ್ಟ ಯುವಜನತೆಯ ಆಶೋತ್ತರಗಳನ್ನು ಈಡೇರಿಸುವುದು ಮತ್ತು ಅವರಿಗೆ ಉದ್ಯೋಗ ಹಾಗೂ ಉತ್ತಮ ಭವಿಷ್ಯದ ಭರವಸೆ ನೀಡುವುದು ವಿಜಯ್ ಅವರ ಮೊದಲ ಆದ್ಯತೆಯಾಗಬೇಕಿದೆ.

ಆದರೆ, ರಾಜಕೀಯ ಯಶಸ್ಸಿಗಿಂತ ಆಡಳಿತದ ಯಶಸ್ಸು ಕಠಿಣ. ವಿಜಯ್ ತಮ್ಮ ಪ್ರಣಾಳಿಕೆಯಲ್ಲಿ ಘೋಷಿಸಿರುವ ಭರ್ಜರಿ ಯೋಜನೆಗಳನ್ನು ಜಾರಿಗೆ ತರುವುದು ಸುಲಭದ ಮಾತಲ್ಲ, ಇದಕ್ಕಾಗಿ ರಾಜ್ಯದ ಖಜಾನೆಯನ್ನು ಸಮತೋಲನದಲ್ಲಿಟ್ಟುಕೊಳ್ಳುವ ಅನಿವಾರ್ಯತೆ ಇದೆ. ಬೊಕ್ಕಸಕ್ಕೆ ಹೊರೆಯಾಗದಂತೆ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಲು ಅವರು ಸಮರ್ಥ ಆರ್ಥಿಕ ಸಲಹೆಗಾರರ ಬಳಗವನ್ನು ಜತೆಗಿಟ್ಟುಕೊಳ್ಳಬೇಕಿದೆ. ದಿಲ್ಲಿ, ಪಶ್ಚಿಮ ಬಂಗಾಳದಂಥ ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷಗಳು ಹಿನ್ನಡೆ ಅನುಭವಿಸುತ್ತಿರುವ ಈ ಕಾಲಘಟ್ಟದಲ್ಲಿ, ಜಾರ್ಖಂಡ್ ಮತ್ತು ಜಮ್ಮು- ಕಾಶ್ಮೀರದ ಹೊರತಾಗಿ ದಕ್ಷಿಣ ಭಾರತದ ಭರವಸೆಯ ಕವಲಾಗಿ ಟಿವಿಕೆ ಕಾಣಿಸಿಕೊಳ್ಳುತ್ತಿದೆ.

ದಕ್ಷಿಣದ ರಾಜ್ಯಗಳಿಗೆ ಕೇಂದ್ರದಿಂದ ಅನ್ಯಾಯವಾದಾಗಲೆಲ್ಲ, ಈ ಹಿಂದೆ ಅಧಿಕಾರದಲ್ಲಿದ್ದ ಡಿಎಂಕೆ ಪಕ್ಷವು ದಿಟ್ಟ ದನಿಯಲ್ಲಿ ಪ್ರತಿರೋಧ ತೋರುತ್ತಿತ್ತು. ಈಗ ಅಧಿಕಾರ ಹಿಡಿದಿರುವ ಟಿವಿಕೆಯೂ ಅಷ್ಟೇ ಛಾತಿಯನ್ನು ಪ್ರದರ್ಶಿಸುತ್ತದೆಯೇ ಎಂಬ ಕುತೂಹಲ ಎಲ್ಲರಲ್ಲಿದೆ. ಪ್ರಾದೇಶಿಕ ಅಸ್ಮಿತೆ ಎತ್ತಿ ಹಿಡಿಯುತ್ತಲೇ, ಮಿತ್ರಪಕ್ಷಗಳ ಜತೆಗೂಡಿ ಸಮರ್ಥ ಆಡಳಿತ ನೀಡುವುದು ವಿಜಯ್ ಮುಂದಿರುವ ಅಗ್ನಿಪರೀಕ್ಷೆ. ಸಿನಿಮಾ ಪರದೆಯ ಮೇಲಿನ ಸಾಹಸಗಳಿಗಿಂತ ವಾಸ್ತವ ರಾಜಕಾರಣದ ಈ ಸವಾಲುಗಳು ಭಿನ್ನವಾಗಿವೆ. ತಮಿಳು ನೆಲದ ಮಕ್ಕಳ ನಾಳೆಗಳು ಕಲ್ಯಾಣಗೊಳ್ಳಬೇಕಾದರೆ, ವಿಜಯ್ ಭಾವನಾತ್ಮಕ ಅಲೆಯ ಜತೆಗೆ ಪ್ರಬುದ್ಧ ಆಡಳಿತವನ್ನೂ ನೀಡಬೇಕಿದೆ. ನೆರೆರಾಜ್ಯದ ನೂತನ ಸಾರಥಿಗೆ ಶುಭವಾಗಲಿ.

ಬದಲಾಗುತ್ತಿರುವ ಭಾರತದ ರಾಜಕೀಯ ಸನ್ನಿವೇಶದಲ್ಲಿ ಕಾಂಗ್ರೆಸ್ ಕಾಲಕ್ಕೆ ತಕ್ಕಂತೆ ಬದಲಾಗುತ್ತಿದೆಯೇ? ನಿಜಕ್ಕೂ ಭಾರತದ ರಾಜಕೀಯ ಭೂಪಟದಲ್ಲಿ ಕಾಂಗ್ರೆಸ್ ಎಲ್ಲಿದೆ? 1997ರ ನಂತರ ಜನಿಸಿದ 'ಜೆನ್-ಜಿ' (Gen-Z) ಪೀಳಿಗೆಯ ಯುವಕರ ಆಶೋತ್ತರಗಳು ಬದಲಾಗಿವೆ. ಅವರು ಭಾವನಾತ್ಮಕ ರಾಜಕಾರಣಕ್ಕಿಂತ ಹೆಚ್ಚಾಗಿ ಅರ್ಹತೆ ಮತ್ತು ಉದ್ಯೋಗಾವಕಾಶಗಳನ್ನು ಬಯಸುತ್ತಿದ್ದಾರೆ. ಆದರೆ, ಕಾಂಗ್ರೆಸ್ ಅಂಥಾ ಹೊಸ ತಲೆಮಾರಿನ ಮನ ಗೆಲ್ಲಲು ಹೊಸ ಅಜೆಂಡಾ ರೂಪಿಸುವಲ್ಲಿ ಎಡವುತ್ತಿದೆಯೇ? 2026ರ ಐದು ರಾಜ್ಯಗಳ ಚುನಾವಣಾ ಫಲಿತಾಂಶದ ಬಳಿಕ ಮತ್ತೊಮ್ಮೆ ಈ ಚರ್ಚೆ ಮುನ್ನೆಲೆಗೆ ಬಂದಿದೆ.

ಕಾಂಗ್ರೆಸ್ ಮುಂದೇನು?

ಸತತ ಸೋಲುಗಳಿಂದ ಕಲಿತಿದ್ದೇನು? ಕಲಿಯಬೇಕಾಗಿರುವುದು ಇನ್ನೇನು?

● ಚೇ.ಜ. ರಾಜೀವ

ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಯುನೈಟೆಡ್ ಡೆಮಾಕ್ರಟಿಕ್ ಫ್ರಂಟ್ (ಯುಡಿಎಫ್) 102 ಸ್ಥಾನಗಳನ್ನು ಗೆಲ್ಲುವ ಮೂಲಕ ತನ್ನ ಪುನರಾಗಮನದ ಸಂದೇಶ ನೀಡಿದೆ. ಅಲ್ಲಿ ಅದು 63 ಸ್ಥಾನಗಳನ್ನು ಗೆದ್ದಿದೆ. ಆದರೆ, ಅಸ್ಸಾಂನಲ್ಲಿ ಕೇವಲ 19 ಸ್ಥಾನಗಳಿಗೆ ಕುಸಿದಿದ್ದರೆ, ಪಶ್ಚಿಮ ಬಂಗಾಳದಲ್ಲಿ 2 ಸ್ಥಾನಗಳನ್ನು ಪಡೆಯಲಷ್ಟೇ ಶಕ್ತವಾಗಿದೆ. ತಮಿಳುನಾಡಿನಲ್ಲಿ ಸಂಪಾದಿಸಿದ್ದು 5 ಸ್ಥಾನ. ಅಲ್ಲಿ ವಿಜಯ್ ಅವರ ಟಿವಿಕೆ ಪಕ್ಷವನ್ನು ಬೆಂಬಲಿಸಿ ಕಿರಿಯ ಪಾಲುದಾರನಾಗಿದೆ. ಸದ್ಯ ಹಿಮಾಚಲ ಪ್ರದೇಶ, ಕರ್ನಾಟಕ ಮತ್ತು ತೆಲಂಗಾಣ ಎಂಬ ಮೂರು ರಾಜ್ಯಗಳಲ್ಲಿ ಆಡಳಿತ ನಡೆಸುತ್ತಿದ್ದು, ಜಾರ್ಖಂಡ್ ಮತ್ತು ಜಮ್ಮು ಕಾಶ್ಮೀರದಲ್ಲಿ ಮೈತ್ರಿ ಸರಕಾರಗಳ ಭಾಗವಷ್ಟೆ. ಅಂದರೆ, ಭಾರತದ ಬಹುತೇಕ ಪ್ರಮುಖ ರಾಜ್ಯಗಳಲ್ಲಿ ಕಾಂಗ್ರೆಸ್ ಆಟದಲ್ಲೇ ಇಲ್ಲ!

ಇಂಥಾ ಕಾಂಗ್ರೆಸ್ ಹಿಂದೊಮ್ಮೆ ಲೋಕಸಭೆ ಚುನಾವಣೆಗಳಲ್ಲಿ ಅದೆಂಥಾ ವೈಭವದ ಸ್ಥಿತಿ ಹೊಂದಿತ್ತು ಗೊತ್ತೇ? 1962ರಿಂದ 1984ರವರೆಗೆ ಕಾಂಗ್ರೆಸ್‌ನ 'ಸ್ಟ್ರೈಕ್ ರೇಟ್' ಶೇ.50ಕ್ಕಿಂತ ಹೆಚ್ಚಿತ್ತು. ಅಂದರೆ, ಸ್ಪರ್ಧಿಸಿದ ಸ್ಥಾನಗಳ ಪೈಕಿ ನಿರಾಯಾಸವಾಗಿ ಶೇ.50ರಷ್ಟು ಸ್ಥಾನವನ್ನು ತನ್ನದಾಗಿಸಿಕೊಳ್ಳುತ್ತಿತ್ತು. 1984ರಲ್ಲಿ 491 ಲೋಕಸಭೆ ಸ್ಥಾನಗಳಲ್ಲಿ ಸ್ಪರ್ಧಿಸಿ 404 ಗೆದ್ದು (ಶೇ.82) ದಾಖಲೆ ನಿರ್ಮಿಸಿತ್ತು. ಇದಾದ ಬಳಿಕ ಕಾಂಗ್ರೆಸ್ ಎಂದೂ ಸ್ವಂತ ಬಲದ ಮೇಲೆ ಶೇ.50ರ ಗಡಿ ದಾಟಿಯೇ ಇಲ್ಲ. 2014ರಲ್ಲಿ ಕೇಂದ್ರದಲ್ಲಿ ನರೇಂದ್ರ ಮೋದಿ ಸರಕಾರ ಅಧಿಕಾರಕ್ಕೆ ಬಂದ ನಂತರ, ಅದರ ಪತನ ಶುರುವಾಯಿತು. 2014ರಲ್ಲಿ ಕಾಂಗ್ರೆಸ್‌ನ ಸ್ಟ್ರೈಕ್ ರೇಟ್ ಶೇ.9ಕ್ಕೆ ಕುಸಿಯಿತು. 2019ರಲ್ಲೂ ಇದೇ ಸ್ಥಿತಿ ಮುಂದುವರಿದು, ಶೇ.88ರಷ್ಟು ಅಭ್ಯರ್ಥಿಗಳು ಸೋಲನುಭವಿಸಿದರು. ಇಷ್ಟೆಲ್ಲಾ ಸೋಲುಗಳ ನಡುವೆಯೂ ಕಾಂಗ್ರೆಸ್ ಇಂದಿಗೂ ದೇಶಾದ್ಯಂತ ಸುಮಾರು ಶೇ.25ರಷ್ಟು ಮತಬ್ಯಾಂಕನ್ನು ಉಳಿಸಿಕೊಂಡಿದೆ. ಬಿಜೆಪಿಯನ್ನು ಬಿಟ್ಟರೆ ಅದೇ ಅಖಿಲ ಭಾರತ ಮಟ್ಟದಲ್ಲಿರುವ ಪ್ರಮುಖ ರಾಷ್ಟ್ರೀಯ ಪಕ್ಷ!

ವಿಕ ಫೋಕಸ್

ರಾಹುಲ್ ಗುರಿ ಒಕೆ, ಆದರೆ...

ಬಿಸಿಲು, ಧೂಳು ಮತ್ತು ಮಳೆಯಲ್ಲಿ ರಾಹುಲ್ ನಡೆಸಿದ 'ಭಾರತ್ ಜೋಡೋ' ಯಾತ್ರೆ ಅವರ ವ್ಯಕ್ತಿತ್ವದಲ್ಲಿ ಮಹತ್ತರ ಬದಲಾವಣೆ ಉಂಟು ಮಾಡಿದೆ. ಸಂವಿಧಾನದ ರಕ್ಷಣೆ, ಆದಾಯದ ಅಸಮಾನತೆ, ಜಾತಿ ಗಣತಿ, ರೈತರು-ಕಾರ್ಮಿಕರು-ಅಲ್ಪಸಂಖ್ಯಾತರ ಹಕ್ಕುಗಳ ಬಗ್ಗೆ ಗಟ್ಟಿಯಾಗಿ ಧ್ವನಿ ಎತ್ತುತ್ತಿದ್ದಾರೆ. ಆದರೆ, ಇದ್ಯಾವುದೂ ಶ್ರೀಸಾಮಾನ್ಯರಿಗೆ ಕನೆಕ್ಟ್ ಆಗುತ್ತಿಲ್ಲ. ಅವರು ಏನೋ ಒಂದು ಗಹನವಾದ ವಿಷಯ ಹೇಳಲು ಪ್ರಯತ್ನಿಸುತ್ತಿದ್ದಾರೆ ಎಂಬುದಷ್ಟೇ ಜನರಿಗೆ ಅರ್ಥವಾಗುತ್ತಿದೆ. ನಿಖರವಾಗಿ ಏನು ಹೇಳುತ್ತಿದ್ದಾರೆ ಎಂಬುದನ್ನು ಗ್ರಹಿಸಲು ಜನರಿಗೆ ಸಾಧ್ಯವಾಗುತ್ತಿಲ್ಲ ಇಲ್ಲವೇ ಅವರಿಗೆ ಅರ್ಥವಾಗುವಂತೆ ರಾಹುಲ್ ಪರಿವಾರ ಜನರ ಮುಂದಿಡುತ್ತಿಲ್ಲ!

ಇದರ ಜತೆಗೆ, ರಾಹುಲ್ ಅವರು ಕಾಂಗ್ರೆಸ್ ಕಾರ್ಯಕರ್ತರಿಗೆ ಅಲಭ್ಯ ಎಂಬುದು ಅವರ ಮೇಲಿನ ಮತ್ತೊಂದು ಆರೋಪ. ಪಕ್ಷದ ಹಿರಿಯ ನಾಯಕರು ಮತ್ತು ನಿಷ್ಠಾವಂತ ಕಾರ್ಯಕರ್ತರಿಗೆ ತಮ್ಮ ನಾಯಕನನ್ನು ಭೇಟಿಯಾಗಲು ಸಾಧ್ಯವಾಗದಿದ್ದರೆ, ಪಕ್ಷದ ಆಂತರಿಕ ಶಕ್ತಿ ಕುಸಿಯುತ್ತದೆ ಎಂಬುದು ಕಟು ಸತ್ಯ. ಅಸ್ಸಾಂನ ಹಿಮಂತ ಬಿಸ್ವಾ ಶರ್ಮ ಸೇರಿದಂತೆ ಅನೇಕ ಪ್ರಾದೇಶಿಕ ನಾಯಕರನ್ನು ಇಂಥಾ ಕಾರಣಗಳಿಂದಲೇ ಪಕ್ಷ ಕಳೆದುಕೊಂಡಿದೆ.

ಈ ದೇಶಕ್ಕೆ ಸಮರ್ಥ ಆಡಳಿತದಷ್ಟೇ ಪ್ರಬಲ ಪ್ರತಿಪಕ್ಷದ ಅಗತ್ಯವೂ ಇದೆ. ಕಾಂಗ್ರೆಸ್ ತನ್ನ ಕೊರತೆಗಳನ್ನು ನೀಗಿಸಿಕೊಂಡು, ಸಂಘಟನಾತ್ಮಕವಾಗಿ ಮರುಜನ್ಮ ಪಡೆದು, ಪ್ರತಿಪಕ್ಷಗಳ ಹಿರಿಯಣ್ಣನಂತೆ ವರ್ತಿಸಬೇಕಿದೆ. ಆಗ ಮಾತ್ರ 'ಭಾರತದ ಹಳೆಯ ಪಕ್ಷ'ಕ್ಕೆ ಹೊಸ ಭವಿಷ್ಯ ಲಭ್ಯ. ಬಿಜೆಪಿಯೇ ಬಯಸಿದಂತೆ ಈ ದೇಶಕ್ಕೆ ಒಂದು ಪ್ರಬಲ ಪ್ರತಿಪಕ್ಷ, ಪರ್ಯಾಯ ಬೇಕಿದೆ. ಅದಕ್ಕಾಗಿ ಪುರಾತನ ಪಕ್ಷ ಕಾಂಗ್ರೆಸ್ ಶ್ರಮಿಸಲಿ!

ಕಾಂಗ್ರೆಸ್ ವೈಫಲ್ಯಕ್ಕೆ ಕಾರಣಗಳೇನು?

1 ಬೇರುಮಟ್ಟದ ಸಂಘಟನೆಯ ಕೊರತೆ

ಬಿಜೆಪಿಗೆ ಆರ್‌ಎಸ್‌ಎಸ್ ಎಂಬ ಬಲಿಷ್ಠ ಕೇಡರ್‌ಶಕ್ತಿ ಇದೆ. ಆದರೆ ಕಾಂಗ್ರೆಸ್ 'ಸೇವಾದಳ' ಎಂಬ ಮಾತೃಸಂಸ್ಥೆಯನ್ನು ಹೊಂದಿದ್ದರೂ ಅದು ಸಾಂಕೇತಿಕವಾಗಿ ಉಳಿದಿದೆ. ಸ್ವಾತಂತ್ರ್ಯ ಹೋರಾಟದ ಹಳೆಯ ಹೆಗ್ಗಳಿಕೆ ಹಾಗೂ ಅದು ತಂದುಕೊಟ್ಟ ಅಧಿಕಾರವನ್ನು ನಂಬಿದ್ದ ಕಾಂಗ್ರೆಸ್, ಪಕ್ಷ ಸಂಘಟನೆಗಾಗಿ ಪರಿಶ್ರಮ ಪಡುತ್ತಲೇ ಇಲ್ಲ. ಬದಲಾದ ಕಾಲಘಟ್ಟದ ಬೂತ್ ಮಟ್ಟದ ನಿರ್ವಹಣೆಯಲ್ಲೂ ಎಡವುತ್ತಿದೆ.

2 ಸೈದ್ಧಾಂತಿಕ ನಿರೂಪಣೆಯ ಅಸ್ಪಷ್ಟತೆ

ಬಿಜೆಪಿ ಎಂದರೆ 'ಹಿಂದುತ್ವ ಮತ್ತು ರಾಷ್ಟ್ರೀಯತೆ' ಎಂಬ ಸ್ಪಷ್ಟ ಬಿಂಬವಿದೆ. ಆದರೆ, 'ಕಾಂಗ್ರೆಸ್ ಎಂದರೆ ಏನು?' ಎಂದು ಹೊಸ ತಲೆಮಾರಿನ ಮತದಾರರು ಪ್ರಶ್ನಿಸಿದರೆ, ಆ ಪಕ್ಷದ ಬಳಿ ಸ್ಪಷ್ಟ ಉತ್ತರವಿಲ್ಲ. ಪಕ್ಷವು ತನ್ನ ಸಿದ್ಧಾಂತವನ್ನು ಸಮಕಾಲೀನಗೊಳಿಸುವಲ್ಲಿ ವಿಫಲವಾಗಿದೆ. ಬಿಜೆಪಿಯ ಹಿಂದುತ್ವ ರಾಜಕಾರಣ ಶುರುವಾದ ಬಳಿಕ ಕಾಂಗ್ರೆಸ್ ಬೆಂಬಲಿಸುತ್ತಿದ್ದ 'ಮಧ್ಯಮ ಮಾರ್ಗ'ದ ಸಮುದಾಯವೂ ಕೇಸರಿ ಪಕ್ಷದ ಪರ ವಾಲಿದೆ. ಅತ್ತ ಎಡವೂ ಇಲ್ಲದ, ಇತ್ತ ಬಲವೂ ಒಲ್ಲದ ಪಕ್ಷದ ಸಿದ್ಧಾಂತ ಇನ್ನೂ ಗೊಂದಲಕಾರಿಯಾಗಿಯೇ ಮುಂದುವರಿದಿದೆ. ಸಾಮಾಜಿಕ ಜಾಲತಾಣವನ್ನು ಬಳಸುತ್ತಿರುವ ಹೊಸ ಪೀಳಿಗೆ ಬಯಸುವ ಭಾಷೆಯೂ ಕಾಂಗ್ರೆಸ್‌ಗೆ ಇನ್ನೂ ಪರಿಪೂರ್ಣವಾಗಿ ಅರ್ಥವಾಗಿಲ್ಲ!

3 ಪ್ರತಿಪಕ್ಷಗಳ ಮತ ವಿಭಜನೆ

ರಾಜಕೀಯ ವಿಶ್ಲೇಷಕರು ಹೇಳುವಂತೆ, ಬಿಜೆಪಿ ವಿರೋಧಿ ಮತದಾರರರ ಮುಂದೆ ಕಾಂಗ್ರೆಸ್, ಸಿಪಿಎಂ, ಎಸ್‌ಪಿ, ಬಿಎಸ್‌ಪಿ, ಟಿಎಂಸಿ, ಡಿಎಂಕೆ- ಹೀಗೆ ಹತ್ತಾರು ಆಯ್ಕೆಗಳಿವೆ. ಇದರಿಂದ ಬಿಜೆಪಿ ವಿರೋಧಿ ಮತಗಳು ಹಂಚಿಹೋಗುತ್ತಿವೆ. ಆದರೆ, ಬಿಜೆಪಿಯಂಥ ಪಕ್ಷಗಳನ್ನು ಇಷ್ಟಪಡುವ ಮತದಾರರ ಮುಂದೆ ಆಯ್ಕೆಗಳಿಲ್ಲ, ಇದ್ದ ಶಿವಸೇನೆ, ಆಮ್ ಆದ್ಮಿ ಪಕ್ಷಗಳೂ ಸೋತಿವೆ. ಇದರ ಪ್ರಯೋಜನ ಪಡೆಯುತ್ತಿರುವ ಏಕೈಕ ಪಕ್ಷ ಬಿಜೆಪಿ.

ಗ್ಯಾರಂಟಿ ಕೊಟ್ಟ ಭರವಸೆ

ಕಳೆದ ಒಂದು ದಶಕದಲ್ಲಿ, ದೊಡ್ಡ ಮೂಲಸೌಕರ್ಯ ಯೋಜನೆಗಳು, ಆಯುಷ್ಮಾನ್ ಭಾರತ್, ಮುದ್ರಾ ಯೋಜನೆ, ರಾಮಮಂದಿರ ನಿರ್ಮಾಣ, ತ್ರಿವಳಿ ತಲಾಕ್, ಕಾಶ್ಮೀರದ ಸ್ವಾಯತ್ತತೆಯಂಥ ವಿಷಯಗಳ ಮೇಲೆ ಕೇಂದ್ರೀಕರಿಸಿದ್ದ ಅಭಿವೃದ್ಧಿಯ ಚರ್ಚೆಯನ್ನು ಕಾಂಗ್ರೆಸ್ ತನ್ನ 'ಗ್ಯಾರಂಟಿ'ಗಳ ಮೂಲಕ ಕಲ್ಯಾಣ ಅರ್ಥಶಾಸ್ತ್ರದ ಕಡೆಗೆ ತಿರುಗಿಸಿದೆ. ಕೇವಲ ರಸ್ತೆ-ಸೇತುವೆಗಳ ಅಭಿವೃದ್ಧಿಯೇ ಪ್ರಗತಿಯಲ್ಲ, ಬದಲಿಗೆ ಜನರ ಜೇಬಿನಲ್ಲಿ ಹಣವಿರುವುದೇ ನಿಜವಾದ ಅಭಿವೃದ್ಧಿ ಎಂಬ ನಿರೂಪಣೆಯನ್ನು ಕಾಂಗ್ರೆಸ್ ಯಶಸ್ವಿಯಾಗಿ ಜನರ ಮುಂದಿಟ್ಟಿದೆ. ಇದು ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದಂತೆ ಯೂನಿವರ್ಸಲ್ ಬೇಸಿಕ್ ಇನ್‌ಕಂನ ಮಾದರಿಯೂ ಹೌದು. ಉಚಿತ ಬಸ್ ಪ್ರಯಾಣ, ಉಚಿತ ವಿದ್ಯುತ್‌ನಂಥ ಯೋಜನೆಗಳು ಮಧ್ಯಮ ಹಾಗೂ ಕೆಳವರ್ಗದ ಜನರ ಮಾಸಿಕ ಉಳಿತಾಯವನ್ನು ಗಣನೀಯವಾಗಿ ಹೆಚ್ಚಿಸಿವೆ. ಕರ್ನಾಟಕ ಮತ್ತು ತೆಲಂಗಾಣದಲ್ಲಿನ ಈ ಪ್ರಯೋಗವು ಪಕ್ಷಕ್ಕೆ ಹೊಸ ಸಂಜೀವಿನಿಯಾಗಿದೆ. ಇದರಿಂದ ಇಂದು ತನ್ನನ್ನು ತಾನು 'ಸಾಮಾನ್ಯ ಜನರ ಆರ್ಥಿಕ ರಕ್ಷಕ' ಎಂದು ಬಿಂಬಿಸಿಕೊಳ್ಳುತ್ತಿದೆ. ಇದು ಸ್ವಲ್ಪಮಟ್ಟಿಗೆ ಯುವಜನತೆ ಮತ್ತು ಮಹಿಳಾ ಮತದಾರರನ್ನು ಸೆಳೆಯುವಲ್ಲಿ ಯಶಸ್ವಿಯಾಗಿದೆ. ಒಂದು ವೇಳೆ ಕಾಂಗ್ರೆಸ್ ಈ ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿ ರಾಜ್ಯಗಳ ಆರ್ಥಿಕತೆಯನ್ನು ಸಮತೋಲನದಲ್ಲಿಟ್ಟರೆ, 2029ರ ಸಾರ್ವತ್ರಿಕ ಚುನಾವಣೆಗೂ ಇದೇ ಮಾದರಿಯು ಪಕ್ಷದ ಮುಖ್ಯ ಅಜೆಂಡಾ ಆಗುವುದರಲ್ಲಿ ಸಂಶಯವಿಲ್ಲ. ಆದರೆ, ಈ ಸಂಗತಿಯನ್ನೇ ತನ್ನ ಆಧುನಿಕ ಸಿದ್ಧಾಂತವಾಗಿ ಚಾಪಿಸಲು ಆ ಪಕ್ಷಕ್ಕೆ ಆಗುತ್ತಿಲ್ಲ. ಸ್ವಾರಸ್ಯ ಅಂದ್ರೆ, ಬಿಜೆಪಿ ಮಾತ್ರ ಕಾಂಗ್ರೆಸ್ ರೂಪಿಸಿದ ಗ್ಯಾರಂಟಿ ಯೋಜನೆಗಳನ್ನು ಟೀಕಿಸುತ್ತಲೇ ತಾನೂ ಅಳವಡಿಸಿಕೊಂಡು 'ಮೋದಿ ಗ್ಯಾರಂಟಿ' ಹೆಸರಿನಲ್ಲಿ ಅದನ್ನೂ ತನ್ನದಾಗಿಸಿಕೊಂಡಿದೆ.

ಬೇಕಿದೆ ರಾಜಕೀಯ ಉದಾರಿತನ

ರಾಜಕೀಯ ವಿಶ್ಲೇಷಕರು ಗುರುತಿಸುವಂತೆ, ಕಾಂಗ್ರೆಸ್‌ನ ಇಂದಿನ ದೊಡ್ಡ ಸವಾಲು ಅದರ ಸಿದ್ಧಾಂತವಲ್ಲ, ಬದಲಿಗೆ ತನ್ನ ಮಿತ್ರಪಕ್ಷಗಳನ್ನು ಜತೆಯಲ್ಲಿ ಕೊಂಡೊಯ್ಯುವಲ್ಲಿ ತೋರುತ್ತಿರುವ 'ರಾಜಕೀಯ ಸಂಕುಚಿತತೆ'. 1990ರ ದಶಕದಲ್ಲಿ ಅಟಲ್ ಬಿಹಾರಿ ವಾಜಪೇಯಿ ಅವರು 20ಕ್ಕೂ ಹೆಚ್ಚು ಪಕ್ಷಗಳಿದ್ದ ಎನ್‌ಡಿಎ ಮೈತ್ರಿಕೂಟವನ್ನು ಯಶಸ್ವಿಯಾಗಿ ಮುನ್ನಡೆಸಲು ಕಾರಣ ಅವರ 'ಉದಾರ ವ್ಯಕ್ತಿತ್ವ' ಸಣ್ಣಪುಟ್ಟ ವ್ಯತ್ಯಾಸಗಳನ್ನು ಬದಿಗಿಟ್ಟು, ಮಮತಾ ಬ್ಯಾನರ್ಜಿ, ಜಯಲಲಿತಾ, ಕರುಣಾನಿಧಿ, ಚಂದ್ರಬಾಬು ನಾಯ್ಡು, ಜಾರ್ಜ್ ಫರ್ನಾಂಡೀಸ್, ನಿತೀಶ್ ಕುಮಾರ್ ಅವರಂಥ ನಾಯಕರಿಗೆ ಗೌರವ ನೀಡುವ ಮೂಲಕ ಅವರು ಒಕ್ಕೂಟ ವ್ಯವಸ್ಥೆಯನ್ನು ಬಲಪಡಿಸಿದ್ದರು. 'ನಮಗೆ ಬಹುಮತವಿಲ್ಲದಿದ್ದರೂ ಪರವಾಗಿಲ್ಲ, ದೇಶದ ಹಿತದೃಷ್ಟಿಯಿಂದ ಮಿತ್ರರ ಅಸಮಾಧಾನ ತಣಿಸುವುದು ಮುಖ್ಯ' ಎಂಬುದು ಅವರ ತತ್ವವಾಗಿತ್ತು. ಅಟಲ್ ಅವರು ನಿರ್ವಹಿಸಿದ ಪಾತ್ರವನ್ನು ಕಾಂಗ್ರೆಸ್‌ನಲ್ಲಿ ಮಲ್ಲಿಕಾರ್ಜುನ ಖರ್ಗೆ ಅವರಂಥ ಉದಾರ ಚಿಂತನೆಯ ನಾಯಕರು ವಹಿಸಬಹುದು. ಆದರೆ, ಅದಕ್ಕೆ ಅಲ್ಲಿ ಅವಕಾಶವೇ ಇಲ್ಲ. ದೊಡ್ಡಣ್ಣನ ಪಾತ್ರ ನಿರ್ವಹಿಸುವಲ್ಲಿ ಕಾಂಗ್ರೆಸ್ ಸೋತಿದೆ. 2026ರ ಅಸೆಂಬ್ಲಿ ಚುನಾವಣೆಯನ್ನೇ ಗಮನಿಸಿದರೂ ಕಾಂಗ್ರೆಸ್ ಚುನಾವಣಾ ಸಂದರ್ಭದಲ್ಲಿ ಮಮತಾ ಬ್ಯಾನರ್ಜಿ ಅವರ ಪಕ್ಷವನ್ನು ಜರಿಯಿತು. ತಮಿಳುನಾಡಲ್ಲಿ ಸ್ಟಾಲಿನ್ ಜತೆ ವೇದಿಕೆ ಹಂಚಿಕೊಂಡು ರ್‍ಯಾಲಿ ಮಾಡಲೇ ಇಲ್ಲ. ಇಂಡಿಯಾ ಮೈತ್ರಿಕೂಟ ಹೆಸರಿಗಷ್ಟೇ ಆಯ್ತು!

rajeeva.cj@timesofindia.com

ಬೋಧಿ ವೃಕ್ಷ

ಸೀತೆಯ ಪಾತಿವ್ರತ್ಯ ಆದರ್ಶವಾಗಲಿ

ತಂದೆಯ ಮಾತನ್ನು ಸತ್ಯ ಮಾಡುವುದಕ್ಕಾಗಿ ಶ್ರೀರಾಮಚಂದ್ರ 14 ವರ್ಷ ವನವಾಸಕ್ಕೆ ತೆರಳಲು ಸಿದ್ಧನಾದ. ಆಗತಾನೆ ಮದುವೆಯಾಗಿ ಸೀತೆಯನ್ನು ಕರೆತಂದಿದ್ದ ಶ್ರೀರಾಮ ಸಕಲಸುಖಭೋಗಗಳನ್ನೂ ದೂರಸರಿಸಿ, ನಾರಿನ ಮಡಿಯುಟ್ಟು ಕಾಡಿನೆಡೆ ಹೆಜ್ಜೆ ಹಾಕಲು ತೀರ್ಮಾನಿಸಿದ್ದ. ಸೀತೆ ಜನಕರಾಜನ ಕುವರಿ. ಹುಟ್ಟಿನಿಂದಲೇ



ರಾಜಕುಮಾರಿಯಾಗಿ ಬೆಳೆದ ನವಯುವತಿ. ಹೆಜ್ಜೆಹೆಜ್ಜೆಗೂ ನೂರಾರು ಸೇವಕಿಯರು ಸೇವೆಗಾಗಿ ಕಾಯುತ್ತಿದ್ದ ಸಿರಿವಂತಿಕೆ. ಅಂಥ ರಾಜಕುಮಾರಿ ಸೀತೆ ತನ್ನ ಪತಿ ಶ್ರೀರಾಮ ಕಾಡಿಗೆ ಹೊರಟು ನಿಂತರೆ ಎರಡನೇ ವಿಚಾರವನ್ನೇ ಮಾಡದೇ ಪತಿಯೊಂದಿಗೆ ತಾನೂ ಕಾಡಿಗೆ ಹೊರಡಲು ಸಿದ್ಧಳಾಗುತ್ತಾಳೆ. ವನವಾಸಕ್ಕೆ ತೆರಳಬೇಕೆಂದು ಶ್ರೀರಾಮನಿಗೆ ನಿಯಮಬಂಧವಿತ್ತು. ಸೀತೆಗೆ ಅದಾವ ನಿಯಮಬಂಧವೂ ಇರಲಿಲ್ಲ. ಆದರೂ ಪತಿಗೆ ಇಲ್ಲದ ಸುಖಭೋಗಗಳು ಸತಿಯಾದ ತನಗೆ ಸರ್ವಥಾ ಬೇಡ ಎಂಬ ಆದರ್ಶ ಪಾತಿವ್ರತ್ಯ ಅವಳದ್ದು.

ಈ ಮಾತನ್ನು ವನವಾಸದಲ್ಲಿ ಮಹರ್ಷಿ ಅಗಸ್ತ್ಯರು ಹೇಳುತ್ತಾರೆ. ಕಾಡಿನಲ್ಲಿ ಸಂಚರಿಸುತ್ತ ಶ್ರೀರಾಮ ಅಗಸ್ತ್ಯರ ಆಶ್ರಮಕ್ಕೆ ಬಂದಾಗ ಅಗಸ್ತ್ಯರು ಸೀತೆಯ ಈ ಪಾತಿವ್ರತ್ಯವನ್ನು, ತ್ಯಾಗದ ಮನೋಭಾವವನ್ನು ಮುಕ್ತಕಂಠದಿಂದ ಹೊಗಳುತ್ತಾರೆ.

ಸೀತೆಯ ಈ ಮನೋಭಾವ ಇವತ್ತಿನ ಎಲ್ಲ ಸ್ತ್ರೀಯರಿಗೂ ಮಾದರಿಯಾಗಿದೆ. ಶ್ರೀರಾಮ ಕಾಡಿಗೆ ಹೋದಂತೆ ಇವತ್ತು ಕಾಡಿಗೆ ಹೋಗುವಂಥ ಪ್ರಸಂಗ ಯಾವ ಪತಿಯರಿಗೂ ಇಲ್ಲ, ಹೀಗಾಗಿ, ಪತಿಯೊಂದಿಗೆ ಕಾಡಿಗೆ ಹೋಗುವಂಥ ಕಠಿಣ ನಿರ್ಧಾರ ಯಾವ ಹೆಂಡತಿಯರೂ ತೆಗೆದುಕೊಳ್ಳಬೇಕಾದ ಅಗತ್ಯ ಇಲ್ಲ. ಆದರೆ, ಎಂಥ ಕಠಿಣ ಸಂದರ್ಭದಲ್ಲಿಯೂ ಪತಿಯನ್ನು ದೂರ ಮಾಡದೇ, ಪತಿಯೊಂದಿಗೆ ಹೆಜ್ಜೆ ಹಾಕಿದರೆ ಸಾಕು ಅವರು ಕಲಿಕಾಲದ ಸೀತೆಯರೇ.

ಮದುವೆಯ ಸಂದರ್ಭದಲ್ಲಿ 'ಧರ್ಮೇ ಚ ಅರ್ಥೇ ಚ ನಾತಿಚರಾಮಿ' (ಧರ್ಮ- ಅರ್ಥ- ಕಾಮ ಮೂರು ವಿಷಯದಲ್ಲಿಯೂ ಮೀರಿ ನಡೆಯುವುದಿಲ್ಲ, ಜತೆಯಲ್ಲಿಯೇ ಇರುತ್ತೇನೆ) ಎಂಬುದಾಗಿ ಗಂಡ-ಹೆಂಡತಿ ಇಬ್ಬರಿಂದಲೂ ಹೇಳಿಸಿ ಪ್ರತಿಜ್ಞೆ ಮಾಡಿಸುತ್ತಾರೆ. ಅಂದು ಅಗ್ನಿಸಾಕ್ಷಿಯಾಗಿ ಹೇಳಿದ ಮಾತು ಜೀವನದ ಕೊನೆಕ್ಷಣದವರೆಗೂ ನಡೆಸಿಕೊಂಡು ಹೋದರೆ ಅವರೇ ನಿಜವಾಗಿ ಆದರ್ಶ ಸತಿಪತಿಯರು. ಪತಿಯ ಬಳಿ ಹಣ ಇಲ್ಲ ಇತ್ಯಾದಿ ಕಾರಣಗಳಿಂದ ಪತಿಯನ್ನು ದೂರ ಮಾಡುವ ಇಂದಿನ ಅನೇಕ ಸತಿಯರಿಗೆ ಸೀತೆಯ ಈ ಪಾತಿವ್ರತ್ಯದ ಮನೋಭಾವ ಆದರ್ಶವಾಗಬೇಕಿದೆ.

ಶ್ರೀಸತ್ಯಾತ್ಮತೀರ್ಥ ಸ್ವಾಮೀಜಿ, ಉತ್ತರಾದಿಮಠ

ವಿಕ ತಗೋ ಕನ್ನಡ

ಓಬಿರಾಯನ ಕಾಲ

● ಓಬೀರಾಯನ ಕಾಲ

'ಯಾವುದೋ ಬಹಳ ಹಿಂದಿನ ಕಾಲ'ವನ್ನು ಸೂಚಿಸಲು ಈ ಪದಗುಚ್ಛವನ್ನು ಸಾಮಾನ್ಯವಾಗಿ ಮಾತಿನಲ್ಲಿ ಬಳಸುತ್ತೇವೆ. ''ಅವರ ಮನೆಯಲ್ಲಿ ಜೋಡಿಸಿರುವ ಪುರಾತನ ಕಲಾಕೃತಿಗಳೆಲ್ಲ ಓಬೀರಾಯನ ಕಾಲದ್ದಂತೆ!''. ಎಂದರೆ, ಅದು 'ಪುರಾತನ' ಎನ್ನುವುದಕ್ಕಿಂತ ಹಿಂದಿನ ಕಾಲಘಟ್ಟವನ್ನು ಸೂಚಿಸುವ ಪ್ರಯತ್ನವಾಗಿರುತ್ತದೆ! ಓಬಿಕಾಲ ಎಂದರೂ ಅತ್ಯಂತ ಪುರಾತನಕಾಲ ಎಂದೇ ಅರ್ಥ. ಓಬಿ ಎನ್ನುವವನು 'ಪ್ರಾಚೀನಕಾಲದ ಕಾಲ್ಪನಿಕವ್ಯಕ್ತಿ' ಎನ್ನುವಂತೆ ಮಾತುಕತೆಗಳಲ್ಲಿ ಬಿಂಬಿತವಾಗುತ್ತದೆ. ಆದರೆ ಓಬ, (ಒನಕೆ) ಓಬವ್ವ ಎನ್ನುವ ವ್ಯಕ್ತಿನಾಮಗಳು ಕರ್ನಾಟಕದಲ್ಲಿ ಬಳಕೆಯಲ್ಲಿದ್ದವು. ಬೆಂಗಳೂರಿನಲ್ಲಿ ಈಗಲೂ 'ಓಬಳಪ್ಪನವರ ತೋಟ'ವಿದೆ. ಹಾಗಾಗಿ ಅವನು ಕಾಲ್ಪನಿಕ ವ್ಯಕ್ತಿಯಲ್ಲ, ಹಿಂದೆ ಓಬನೆಂಬ ಪಾಳೆಗಾರನಿದ್ದು, ಅವನ ಕಾಲಘಟ್ಟಕ್ಕೆ 'ಓಬನಕಾಲ', 'ಓಬಿಯಕಾಲ' ಎಂದಿರಬಹುದಲ್ಲವೇ? ಇದಕ್ಕೆ ನಿಮ್ಮ ಊರಿನಲ್ಲಿ ಆಧಾರ ಸಿಕ್ಕಬಹುದೇ? ಪರಿಶೀಲಿಸಿ ತಿಳಿಸಿ. 'ಓಲ್ಡ್ ಬ್ರಿಟಿಷ್ ರಾಯರಕಾಲ' ಎಂದು ಕೆಲವರು ಹೇಳುವುದೂ ಸಂಪೂರ್ಣ ಆಧಾರರಹಿತ. ನಮ್ಮ ಓಬನಿರುವಾಗ ಬ್ರಿಟಿಷ್‌ರಾಯ ಬೇಕೇ?

– ಜಿ.ವಿ. ಅರುಣ

– ಪದ ಸೂಚಿಸಿದವರು: ಸುನಿತಾ ವಾಮನರಾವ್ ಬೆಂಗಳೂರು

ಬತ್ತಳಿಕೆ



ಫಲಿತಾಂಶಗಳಲ್ಲಿ ಕಲ್ಯಾಣ ಕರ್ನಾಟಕದ ಜಿಲ್ಲೆಗಳು ಏಕೆ ಹಿಂದೆ ಎಂದರೆ...

ಶಾಲೆ ಗಂಟೆಗಿಂತ ಹೊಲದ ನಂಟೇ ಹಿತ?

"ಸಾಲಿಗೆ ಹೋದ್ರ ಏನು ಬರ್‍ತೈತಿ... ಕೆಲಸಕ್ಕ ಹೋದ್ರ ನಾಲ್ಕು ದುಡ್ಡು ಬರ್ತಾವು... ಮನ್ಯಾಗ ಎಲ್ರೂ ದುಡದ್ರ ನಮ್ಮ ಹೊಟ್ಟಿ ತುಂಬತೈತಿ. ಮೈಗೆ ಗೇಣು ಬಟ್ಟಿ ಕಾಣ್ತೇವಿ. ನಾಳಿ ಅವರ ಮದುವೆಗೆ ನಾಲ್ಕು ದುಡ್ಡು ಆಗ್ತಾವು..'' ಪಾಲಕರೊಬ್ಬರು ಹೀಗೆ ಹೇಳುತ್ತಿದ್ದರೆ ಪಕ್ಕದಲ್ಲೇ ಹಾಲುಗಲ್ಲದ ಕಂದಮ್ಮ ಹುರುಪಿನಿಂದಲೇ ಹತ್ತಿ ಬಿಡಿಸುತ್ತಿದ್ದಳು. ''ನಾನು ಕೆಲಸಕ್ಕ ಹೋದ್ರ ನಮ್ ಮನ್ಯಾಗ ಅಡುಗಿ ಮಾಡ್ತಾರ್ರಿ.. ನಮ್ಮಪ್ಪ ಬ್ಯಾರೆ ಕಡೆ ಕೆಲಸಕ್ಕ ಹೋಗ್ತಾನ. ನಮ್ಮ ಅವ್ವನೂ ಕೆಲಸಕ್ಕ ಹೊಕ್ಕಾಳ, ನಾವೇನು ವರ್ಷ ತುಂಬ ಕೆಲಸಕ್ಕೆ ಹೋಗಾಂಗಿಲ್ಲ, ವರ್ಷದಾಗ ಮೂರ್‍ನಾಲ್ಕು ತಿಂಗಳು ಕೆಲಸಕ್ಕ ಹೊಕ್ಕೇವಿ. ಆಮ್ಯಾಲೆ ಸಾಲಿಗೆ ಹೊಕ್ತೇವಿ. ಸಾಲಿಗೆ ಹೋಗ್ಬೇಕು ಅಂತ ಅನ್ಸುತ್ತ. ಆದ್ರ ಕೆಲಸ ಇಲ್ಲಾದಾಗ ಹೊಕ್ಕೇವಿ,'' ಅಲ್ಲೇ ಇದ್ದ ಮತ್ತೊಬ್ಬ ಬಾಲಕಿಯ ಮಾತುಗಳು, ಕಲ್ಯಾಣ ಕರ್ನಾಟಕದ ಹಲವು ಗ್ರಾಮೀಣ ಮಕ್ಕಳ ಕಮರುತ್ತಿರುವ ಭವಿಷ್ಯಕ್ಕೆ ಸಾಕ್ಷಿ ನುಡಿಯುತ್ತಿವೆ.

'ಫಲಿತಾಂಶದಲ್ಲಿ ಕಲ್ಯಾಣ ಕರ್ನಾಟಕದ ಜಿಲ್ಲೆಗಳು ಹಿಂದೆ' ಎಂಬ ಕುಹಕದ ಮಾತುಗಳಿಗೆ ಇಲ್ಲಿನ ಸಾವಿರಾರು ಮಕ್ಕಳು ಮತ್ತು ಪಾಲಕರ ಅಂತರಾಳದ ಮಾತು, ಮೌನದಲ್ಲೇ ತಣ್ಣನೆ ಪ್ರತಿಕ್ರಿಯೆಯಿದೆ. ಬಳ್ಳಾರಿಯಿಂದ ರಾಯಚೂರು ಜಿಲ್ಲೆಗೆ ತೆರಳುವ ವೇಳೆ ಮಾರ್ಗ ಮಧ್ಯ ಆಂಧ್ರಪ್ರದೇಶ ದರ್ಶನವಾಗುತ್ತದೆ. ಆಂಧ್ರದ ಆದೋನಿ, ಎಮ್ಮಿಗನೂರು ಮೂಲಕ ಹಾದುಹೋಗುವಾಗ ದಾರಿ ಮಧ್ಯೆ ಸಣ್ಣ, ಸಣ್ಣ ವಾಹನಗಳಲ್ಲಿ ಮಕ್ಕಳನ್ನು ಕುರಿಗಳಂತೆ ತುಂಬಿಕೊಂಡು ಜಮೀನುಗಳಿಗೆ ತೆರಳುವ ದೃಶ್ಯವು ಮಧ್ಯಮ, ಶ್ರೀಮಂತ ವರ್ಗದ ಮಕ್ಕಳು ನೀಟಾಗಿ ಸಮವಸ್ತ್ರ ಧರಿಸಿ ಶಾಲೆ, ಕಾಲೇಜುಗಳಿಗೆ ಬಸ್‌ಗಳಿಗೆ ತೆರಳುವ ದೃಶ್ಯಕ್ಕೂ ವೈರುಧ್ಯವಾಗಿದೆ.

ಹೊಲ ಗದ್ದೆಗಳಲ್ಲಿ ಹತ್ತಿ, ಮೆಣಸಿನ ಕಾಯಿ ಬಿಡಿಸಲು ಈ ಮಕ್ಕಳನ್ನು ಕರೆದೊಯ್ಯಲಾಗುತ್ತದೆ. ಇಂಥ ಕೆಲಸಗಳಿಗೆ ಮಕ್ಕಳೇ ಸೂಕ್ತ ಎನ್ನುವ ಅಭಿಪ್ರಾಯ ಮಾಲೀಕರಲ್ಲಿದೆ. ದೊಡ್ಡವರು ತಮ್ಮ ದೇಹ ಬಾಗಿಸಿ ಸಣ್ಣ ಗಿಡಗಳಲ್ಲಿ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ. ಮಾಡಿದರೂ ಮಕ್ಕಳಿಗೆ ಹೋಲಿಸಿದರೆ ಕೆಲಸ ನಿರೀಕ್ಷೆಯಂತೆ ಸಾಗದು. ಸಣ್ಣ ಮಕ್ಕಳಾದರೆ ಬೇಗ ಕೆಲಸ ಮುಗಿಸುತ್ತಾರೆ ಎನ್ನುವ ಮಾಲೀಕರ ಭರವಸೆಯೇ ಮಕ್ಕಳ ಭವಿಷ್ಯಕ್ಕೆ ಕೊಳ್ಳಿ ಇಡುತ್ತಿದೆ. ಆಂಧ್ರಪ್ರದೇಶದ ಗಡಿಯ ಊರುಗಳಲ್ಲಷ್ಟೇ ಅಲ್ಲದೆ ರಾಯಚೂರು, ಕೊಪ್ಪಳ, ಬಳ್ಳಾರಿ ಸೇರಿ ಇನ್ನಿತರ ಜಿಲ್ಲೆಗಳಲ್ಲೂ ಬಡ ಕುಟುಂಬಗಳ ಬಹುತೇಕ ಮಕ್ಕಳ ದಿನಚರಿ ಇದಕ್ಕಿಂತ ಭಿನ್ನವಿಲ್ಲ.

ಬೆಳ್ಳಂಬೆಳಗ್ಗೆಯೇ ಟಂಟಂಗಳಲ್ಲಿ ಸಾವಿರಾರು ಮಕ್ಕಳ ಸವಾರಿ ಜಮೀನುಗಳತ್ತ ಹೊರಡುತ್ತದೆ. ಒಂದು ವೇಳೆ ಜಮೀನು ಸಮೀಪವಿದ್ದರೆ ಮಹಿಳೆಯರ ಗುಂಪಿನಲ್ಲಿ 10- 15 ವಯಸ್ಸಿನ ಮಕ್ಕಳು ಸರಸರನೇ ಕೈಬೀಸುತ್ತ ಹೆತ್ತವರೊಂದಿಗೆ ಪುಟ್ಟ, ಪುಟ್ಟ ಹೆಜ್ಜೆ ಹಾಕುತ್ತಾರೆ. ಇಂಥ ಹೆಜ್ಜೆಗಳೇ ಅವರ ಶೈಕ್ಷಣಿಕ ಭವಿಷ್ಯದ ಸಾಲುಗಳನ್ನೇ ಅಳಿಸಿ ಹಾಕುತ್ತಿವೆ. ಉಳಿದವರಿಗಿಂತ ಹಿಂದೆ ಎಂಬ ಹಣೆಪಟ್ಟಿ ಹೊರಿಸುತ್ತವೆ. ಮಕ್ಕಳು ದುಡಿಯುವುದರಿಂದ ಬರುವ ಅಲ್ಪಸ್ವಲ್ಪ ಕೂಲಿ ಹಣದ ಮೇಲೆ ಹೆತ್ತವರ ಕಣ್ಣು. ಸಂಸಾರ ಸಾಗಿದರೆ ಸಾಕಪ್ಪ ಎನ್ನುವುದಷ್ಟೇ ಅವರ ಹೆಬ್ಬಯಕೆ. ಕಡಿಮೆ ಸಮಯದಲ್ಲಿ ಹೆಚ್ಚು ಕೆಲಸ ಪಡೆದುಕೊಂಡಿರುವ ತೃಪ್ತ ಭಾವನೆ ಮಾಲೀಕರಲ್ಲಿ. ಇವೆರಡರ ಮಧ್ಯೆ ಮಕ್ಕಳ ಭವಿಷ್ಯ ಕಮರುವುದು ಮಾತ್ರ ತಪ್ಪಿದ್ದಲ್ಲ.

ಆ ಊರು, ಈ ಊರು, ಎಲ್ಲ ಊರಲ್ಲೂ... ಇದು ಒಂದು ಊರಿನ ಮಕ್ಕಳ ಕಥೆ, ವ್ಯಥೆಯಲ್ಲ, ಆ ಊರು, ಈ ಊರು ಎಂಬ ಭೇದಭಾವವಿಲ್ಲದೇ ಕಲ್ಯಾಣ ಕರ್ನಾಟಕದ ಬಹುತೇಕ ಗ್ರಾಮಗಳಲ್ಲಿ ಮಕ್ಕಳು ಕೆಲಸಕ್ಕೆ ಹೋಗುವ ಸ್ಥಿತಿ ಸಾಮಾನ್ಯ. ಹತ್ತಿ ಬೆಳೆಯ ಪರಾಗಸ್ಪರ್ಶ ಕ್ರಿಯೆಗೆ ಬಳಸುವ ರಾಸಾಯನಿಕ ಪೌಡರ್ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ ಎನ್ನುವ ಅರಿವು ಮಕ್ಕಳು ಮತ್ತು ಪಾಲಕರಲ್ಲಿ ಕಿಂಚಿತ್ತೂ ಇಲ್ಲ ಎಂಬುದು ಮತ್ತಷ್ಟು ಆತಂಕ ಹುಟ್ಟಿಸುತ್ತದೆ. ಕೊಪ್ಪಳ ಜಿಲ್ಲೆಯ ಕೋಳಿ ಫಾರಂಗಳಲ್ಲೂ ನೂರಾರು ಮಕ್ಕಳು ದುಡಿಯುತ್ತಿದ್ದಾರೆ. ಕೆಲ ವರ್ಷಗಳ ಹಿಂದೆ ಮಕ್ಕಳನ್ನು ಕೋಳಿಫಾರಂಗೆ ಟಂಟಂನಲ್ಲಿ ತುಂಬಿಕೊಂಡು ಹೋಗುತ್ತಿದ್ದಾಗ ಹೆದ್ದಾರಿಯಲ್ಲಿ ಅಪಘಾತ ಸಂಭವಿಸಿ 12 ಮಕ್ಕಳು ಕೊನೆಯುಸಿರೆಳೆದ ಘಟನೆ, ಎಂದಿಗೂ ಹಸಿರು.

ಮಕ್ಕಳನ್ನು ಕೆಲಸಕ್ಕೆ ಹಚ್ಚುವ ಪಾಲಕರಿಗೆ ಶಿಕ್ಷಣದ ಕೊರತೆಯ ಜತೆಗೆ ಬಡತನ, ಅಜ್ಞಾನವೂ ಮೂಲ ಕಾರಣವಾಗಿದೆ. ತಾತ್ಕಾಲಿಕವಾಗಿ ಸಿಗುವ ನಾಲ್ಕಾರು ದುಡ್ಡಿಗಾಗಿ ಮಕ್ಕಳನ್ನು ಶಾಲೆಯಿಂದ ಬಿಡಿಸಿ ಕೆಲಸಕ್ಕೆ ಸೇರಿಸುವುದು ಹಲವು ವರ್ಷಗಳಿಂದ ಕಲ್ಯಾಣ ಕರ್ನಾಟಕದಲ್ಲಿ ನಡೆದು ಬಂದಿರುವ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸಮಸ್ಯೆ ಮತ್ತು ಸವಾಲು. ಅಕ್ಕರೆಯಿಂದ ಅಕ್ಷರ ಕಲಿಯಬೇಕಾದ ವಯಸ್ಸಲ್ಲಿ ಹಿಡಿ ರೊಕ್ಕಕ್ಕಾಗಿ ತನ್ನ ಇಡೀ ಜೀವನ ಸವೆಸಬೇಕಿದೆ. ಕೊನೆಯವರೆಗೆ ಹೋಟೆಲ್, ಜಮೀನುಗಳಲ್ಲಿ ಕೂಲಿಯಾಳಾಗಿ, ಗ್ಯಾರೇಜ್, ಕೋಳಿ ಫಾರಂ, ಕಾರ್ಖಾನೆಗಳಲ್ಲಿ ಜೀವ ತೇಯುವ ಕಾರ್ಮಿಕನಾಗಬೇಕಿದೆ. ಅದೇ ತಕ್ಕಮಟ್ಟಿಗೆ ಶಿಕ್ಷಣ ಪಡೆದರೆ ಬೆಳೆದು ದೊಡ್ಡವರಾದಾಗ ಸ್ವಂತ ಉದ್ಯೋಗ ಅಥವಾ ಹೆಚ್ಚು ಆದಾಯ ಬರುವ ಉದ್ಯೋಗ ಆಯ್ಕೆ ಮಾಡಿಕೊಳ್ಳುವಲ್ಲಿ ಸ್ವತಂತ್ರರಾಗುತ್ತಾರೆ. ಆದರೆ, ಕಲ್ಯಾಣ ಭಾಗದ ಬಹುತೇಕ ಊರುಗಳಲ್ಲಿ ಸಾವಿರಾರು ಮಕ್ಕಳ ಪಾಲಿಗೆ ಇಂಥ ಭಾಗ್ಯ ಗಗನಕುಸುಮವಾಗಿದೆ.

ಲೋಕಲ್ ಸಂಚಾರ

ಗಂಗಾಧರ ಬಂಡಿಹಾಳ

ಕಾನೂನಿನ್ವಯ 6ರಿಂದ 14 ವರ್ಷದವರೆಗಿನ ಮಕ್ಕಳನ್ನು ದುಡಿಸಿಕೊಳ್ಳುವುದು ಅಪರಾಧ. ಆದರೆ, 14ರಿಂದ 18 ವರ್ಷದ ಮಕ್ಕಳಿಗೆ ಅಪಾಯಕಾರಿ ಕೆಲಸ ನಿಷಿದ್ಧ. ಕೆಲ ಕ್ಷೇತ್ರಗಳಲ್ಲಿ ವಿನಾಯಿತಿ ನೀಡಲಾಗಿದೆ. ಇದುವೇ ಮಾಲೀಕರ ಪಾಲಿಗೆ ಲಾಭದ ದಾರಿ ತೋರಿದೆ. ಕೆಲಸಕ್ಕೆ ನೇಮಿಸಿಕೊಂಡ ಮಕ್ಕಳಿಗೆ ಕೆಲಸದ ಅವಧಿ, ವೇತನ, ರಜೆ ಸೇರಿ ಕೆಲವೊಂದು ನಿಬಂಧನೆ ವಿಧಿಸಲಾಗಿದೆ. ಆದರೆ, ಇದ್ಯಾವುದನ್ನೂ ಪಾಲಿಸದ ಮಾಲೀಕರು, ತಮ್ಮ ದುಡ್ಡಿನ ಗಿಡ ಹೆಮ್ಮರವಾಗುವುದನ್ನಷ್ಟೇ ನಿರೀಕ್ಷಿಸುತ್ತಾರೆ.

ಈ ಭಾಗದಲ್ಲಿ 1ರಿಂದ 10ನೇ ತರಗತಿವರೆಗೆ ಪ್ರವೇಶಾತಿ ಗಮನಿಸಿದರೆ ವಿದ್ಯಾರ್ಥಿಗಳು ಶಿಕ್ಷಣಕ್ಕೆ ಅರ್ಧದಲ್ಲಿಯೇ ಗುಡ್‌ಬೈ ಹೇಳುತ್ತಿದ್ದಾರೆ. ಒಂದೊಂದು ತರಗತಿಯಲ್ಲೂ ಮಕ್ಕಳ ಸಂಖ್ಯೆ ಇಳಿಮುಖವಾಗುತ್ತಲೇ ಹೋಗುತ್ತದೆ. ಮಕ್ಕಳನ್ನು ಪತ್ತೆ ಹಚ್ಚಲು ಶಿಕ್ಷಣ ಹಾಗೂ ಕಾರ್ಮಿಕ ಇಲಾಖೆ ಹೆಣಗಾಡುತ್ತಿವೆ. ಅಂತಿಮವಾಗಿ ಕುಟುಂಬ ಗುಳೆ ಹೋಗಿದೆ ಎನ್ನುವ ಷರಾ ಬರೆಯಲಾಗುತ್ತಿದೆ. ಪ್ರತಿ ವರ್ಷದ ಎಸ್ಸೆಸ್ಸೆಲ್ಸಿ, ಪಿಯು ಫಲಿತಾಂಶದಲ್ಲಿ ಕಲ್ಯಾಣದ ಜಿಲ್ಲೆಗಳು ತಳ ಕಂಡು, ನೋಡುಗರ ನಗೆಪಾಟಲಿಗೆ ಗುರಿಯಾಗುತ್ತವೆ.

ಶಿಕ್ಷಣ ಇಲಾಖೆ ಸೇರಿ ಇಡೀ ಸಮಾಜ ಎಚ್ಚೆತ್ತುಕೊಳ್ಳದಿದ್ದರೆ ಕಲ್ಯಾಣ ಕರ್ನಾಟಕದ ಮಕ್ಕಳ ಭವಿಷ್ಯ ಮತ್ತಷ್ಟು ಕಮರಲಿದೆ. ದೀರ್ಘಾವಧಿ ಗೈರು ಹಾಜರಾಗುತ್ತಿರುವ ಮಕ್ಕಳ ಕುಟುಂಬದ ಪಾಲಕರನ್ನು ಶಿಕ್ಷಕರು ನಿರಂತರ ಭೇಟಿಯಾಗಿ ಮನವೊಲಿಸಬೇಕು. ಶಾಲೆಯ ತರಗತಿ ತಪ್ಪಿಸದಂತೆ ಎಚ್ಚರಿಕೆ ವಹಿಸಬೇಕು. ಮೇ, ಜೂನ್ ಶಾಲೆಗಳ ಆರಂಭದ ಸೂಚಕ. ಆದರೆ, ಈ ಭಾಗದ ಮಕ್ಕಳಿಗೆ ಮಳೆ ಕಾಣುತ್ತದೆ. ಹೊಲ, ಗದ್ದೆಗಳಲ್ಲಿ ಹರಿಯುವ ನೀರು, ಊರುವ ಬೀಜಗಳು ಕಾಣುತ್ತವೆ. ಭವಿಷ್ಯದಲ್ಲಿ ಮೊಳಕೆಯೊಡೆದು ಹೂವಾಗಿ ಅರಳಿ, ಹಣ್ಣಾಗಿ ಬೆಳೆಯಬೇಕಾದ ಮಕ್ಕಳು ಹೊಲ ಗದ್ದೆಗಳಲ್ಲೇ ಕಾಲ ಕಳೆಯಲು ಸಜ್ಜಾಗುತ್ತಾರೆ. ಇಂಥ ಮಕ್ಕಳು ಇನ್ನಾದರೂ 'ಶಾಲೆಗಳಿಗೆ ಮರಳಬೇಕಿದೆ'. ಕಲಿಯುತ್ತ ನಲಿಯಬೇಕಿದೆ. ಬಾಳು ಬೆಳಗಬೇಕಿದೆ.

(ಲೇಖಕರು: ಸ್ಥಾನಿಕ ಸಂಪಾದಕರು, ಗಂಗಾವತಿ ಬ್ಯೂರೊ)

gangadhara.bandihal@timesofindia.com

ಬ್ಯಾಂಕಿನ ನಿಯಮಾವಳಿ ದೂಷಿಸಿ, ಸಿಬ್ಬಂದಿಯನ್ನಲ್ಲ!

■ ರಮಾನಂದ ಶರ್ಮಾ



ಮೃತ ಸಹೋದರಿಯ ಠೇವಣಿ ಹಣ ಹಿಂಪಡೆಯಲು ಬುಡಕಟ್ಟು ಸಮುದಾಯದ ವ್ಯಕ್ತಿಯೊಬ್ಬರು ಆಕೆಯ ಅಸ್ಥಿಪಂಜರವನ್ನೇ ಬ್ಯಾಂಕಿಗೆ ಹೊತ್ತು ತಂದ ಘಟನೆ ಒಡಿಶಾದಲ್ಲಿ ನಡೆದಿದೆ. ಮೃತ ಸಹೋದರಿಯ ಸಾವಿನ ದಾಖಲೆಯನ್ನು ನೀಡಲಾಗದ ಈ ವ್ಯಕ್ತಿಯು, ಸಾವಿನ ದಾಖಲೆಯನ್ನು ಬ್ಯಾಂಕಿಗೆ ತೋರಿಸಲು ಹೂತ ಶವವನ್ನು ಹೊರತೆಗೆದು ಅವಳ ಅಸ್ಥಿಪಂಜರವನ್ನು ಬ್ಯಾಂಕಿಗೆ ತಂದಿದ್ದ. ಬ್ಯಾಂಕುಗಳ ಕಾರ್ಯವೈಖರಿ, ಅವುಗಳು ನೀಡುವ ಮತ್ತು ವಿಧಿಸುವ ಬಡ್ಡಿ, ಬ್ಯಾಂಕುಗಳ ಅನುತ್ಪಾದಕ ಸಾಲ, ಅವುಗಳು ಮಾಡುವ ಸಾಲಗಳ ರೈಟ್ ಆಫ್ ಮತ್ತು ಮನ್ನಾ, ವಿವಿಧ ಸೇವೆಗಳಿಗೆ ಅವು ವಿಧಿಸುವ ಶುಲ್ಕಗಳನ್ನು, ಶಾಖೆಗಳಲ್ಲಿನ ಭಾಷಾ ಸಂಘರ್ಷವನ್ನು ಸದಾ ಟೀಕಿಸುವ ಜನರಿಗೆ ಬ್ಯಾಂಕುಗಳನ್ನು ತರಾಟೆಗೆ ತೆಗೆದುಕೊಳ್ಳಲು ಈ ಘಟನೆ ಮೂಲಕ ಇನ್ನೊಂದು ಅಸ್ತ್ರ ಲಭಿಸಿದಂತಾಗಿದೆ. ವಿಷಯ ತಿಳಿದ ಬ್ಯಾಂಕಿನ ಹಿರಿಯ ಅಧಿಕಾರಿಗಳು ವಿಷಾದ ವ್ಯಕ್ತಪಡಿಸಿದ್ದು, ಸಂಬಂಧಪಟ್ಟ ಸಿಬ್ಬಂದಿಯನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಇದೊಂದು ಅಮಾನವೀಯ ಘಟನೆ. ಬ್ಯಾಂಕ್ ಸಿಬ್ಬಂದಿ ಸ್ವಲ್ಪ ಸಹನೆ ಮತ್ತು ವಿವೇಚನೆ ಬಳಸಿದ್ದರೆ ಈ ಮುಜುಗರದಿಂದ ಪಾರಾಗಬಹುದಿತ್ತು ಎನ್ನುವ ಮಾತು ಬ್ಯಾಂಕಿಂಗ್ ವಲಯದಲ್ಲಿ ಕೇಳಿಬರುತ್ತಿದೆ. ಮಾನವೀಯತೆಯ ಆಧಾರದ ಮೇಲೆ ಈ ಪ್ರಕರಣವನ್ನು ನಿಭಾಯಿಸಿದ್ದರೆ, ಇದು ಮುಂದಿನ ದಿನಗಳಲ್ಲಿ ಪೂರ್ವ ನಿದರ್ಶನವಾಗಬಹುದೆಂದು ಅವರು ಹಿಂದೇಟು ಹಾಕಿರಬಹುದೆನ್ನುವ ಅಭಿಪ್ರಾಯದಲ್ಲಿ ಸತ್ಯವಿಲ್ಲದಿಲ್ಲ.

ಬ್ಯಾಂಕಿನ ಆಂತರಿಕ ಕಾನೂನು ಮತ್ತು ನೀತಿ ನಿಯಮಾವಳಿಯನ್ನು ಪಾಲಿಸುವ ಧಾವಂತದಲ್ಲಿ ಇಂಥ ನಿಯಮಾವಳಿಗಳಿಗೂ ಅಪವಾದಗಳು ಇರುತ್ತವೆ ಎನ್ನುವುದನ್ನು ಬ್ಯಾಂಕ್ ಸಿಬ್ಬಂದಿ ಮರೆತಂತೆ ಕಾಣುತ್ತದೆ. ಬ್ಯಾಂಕಿನ ನಿಯಮಾವಳಿಯ ಪ್ರಕಾರ, ಮೃತ ಠೇವಣಿದಾರನ ಠೇವಣಿಯನ್ನು ಹಿಂಪಡೆಯಲು ಮೃತ ಠೇವಣಿದಾರನ 'ಮರಣ ಪ್ರಮಾಣಪತ್ರ' ಅವಶ್ಯಕ. ಆದರೆ, ಗ್ರಾಹಕನ ಆರ್ಥಿಕ- ಸಾಮಾಜಿಕ ಪರಿಸ್ಥಿತಿ, ಠೇವಣಿಯ ಮೊತ್ತ, ಗ್ರಾಹಕನ ಹಿನ್ನೆಲೆಯನ್ನು ಗಮನಿಸಿ, ತಮ್ಮ ನೀತಿ ನಿಯಮಾವಳಿಗಳಿಗೆ ಫೆವಿಕಲ್‌ನಂತೆ ಅಂಟಿಕೊಳ್ಳದೇ ಸ್ವಲ್ಪ ಉದಾರತೆ ತೋರಿಸಿದ್ದರೆ, ಬ್ಯಾಂಕ್ ಇಂಥ ಮುಖಭಂಗ ಅನುಭವಿಸುವ ಪ್ರಮೇಯ ಬರುತ್ತಿರಲಿಲ್ಲ.

ಮೇಲ್ನೋಟಕ್ಕೆ ಬ್ಯಾಂಕ್ ಸಿಬ್ಬಂದಿ ತಪ್ಪು ಎಸಗಿದ್ದಾರೆ ಎಂದೆನಿಸಿದರೂ, ಬ್ಯಾಂಕುಗಳ ಆಂತರಿಕ ನೀತಿ ನಿಯಮಾವಳಿಗಳು, ಕಾನೂನು ಮತ್ತು ಸುತ್ತೋಲೆಯ ಪ್ರಕಾರ ಅವರು ನಡೆದುಕೊಂಡಿದ್ದು ಎದ್ದು ಕಾಣುತ್ತದೆ. ಯಾವುದೇ ಕಚೇರಿಯಾದರೂ ಅವು ತಮ್ಮದೇ ಆದ ಕಾರ್ಯನಿರ್ವಹಣೆಯ ವ್ಯವಸ್ಥೆಯ ಚೌಕಟ್ಟಿನಲ್ಲಿ ಕಾರ್ಯ ನಡೆಸುತ್ತವೆ. ಯಾರಿಗೋ ಸಹಾಯ ಮಾಡಲು ಹೋಗಿ ನೀತಿ ನಿಯಮಾವಳಿಯನ್ನು ಉಲ್ಲಂಘಿಸಿ ಆದರಿಂದ ಕಚೇರಿಗೆ ಅನುಕೂಲವಾದರೆ, ಯಾರೂ ಸಂಬಂಧಪಟ್ಟ ಸಿಬ್ಬಂದಿಯನ್ನು ಪ್ರಶ್ನಿಸುವುದಿಲ್ಲ, ಆದರೆ, ಅದರಿಂದ ಏನಾದರೂ ಎಡವಟ್ಟಾದರೆ, ಸಮಸ್ಯೆಗಳ ಬೇತಾಳಗಳು ಬೆನ್ನು ಬೀಳುತ್ತವೆ. ಒಮ್ಮೊಮ್ಮೆ ಅದು ಸಂಬಂಧಪಟ್ಟ ನೌಕರರಿಗೆ ಅತಿ ದುಬಾರಿಯಾಗಿ ಪರಿಣಮಿಸುತ್ತದೆ. ಅಂತೆಯೇ ಪ್ರತಿಯೊಬ್ಬರೂ ಈ ನಿಟ್ಟಿನಲ್ಲಿ ರಕ್ಷಣಾತ್ಮಕ ಆಟ ಆಡುತ್ತಾರೆ. ಅದಕ್ಕೂ ಮಿಗಿಲಾಗಿ ದೇಶದಲ್ಲಿ 'ಪ್ರಮಾಣಪತ್ರಗಳ ಯುಗ' ಇದ್ದು, ಕಣ್ಣಿಗೆ ಕಂಡರೂ, ಕಿವಿ ಮೇಲೆ ಬಿದ್ದರೂ, ಪ್ರಮಾಣಿಸಿ ನೋಡು ಎನ್ನುವಂತೆ ಸ್ಫುಟವಾಗಿ ಇರುವ ಪ್ರಮಾಣಪತ್ರವನ್ನೇ ಒತ್ತಾಯಿಸುತ್ತಾರೆ.

ವಿಕ ಚರ್ಚೆ

ಈ ದೇಶದಲ್ಲಿ ಪಿಂಚಣಿ ಪಡೆಯುವ ನಿವೃತ್ತರು ಪ್ರತಿ ವರ್ಷ ನವೆಂಬರ್‌ನಲ್ಲಿ ಪಿಂಚಣಿ ನೀಡುವ ಕಚೇರಿಗೆ 'ಪಿಂಚಣಿದಾರ ಬದುಕಿದ್ದಾನೆ' ಎಂದು ದೃಢೀಕರಿಸುವ 'ಜೀವನ ಪ್ರಮಾಣಪತ್ರ' ಸಲ್ಲಿಸಬೇಕಾಗುತ್ತದೆ. ಒಬ್ಬ ನಿವೃತ್ತ ಒಂದು ವರ್ಷ ಇಂಥ ಪ್ರಮಾಣಪತ್ರ ಸಲ್ಲಿಸಲು ಮರೆತಿದ್ದು, ಮಾರನೇ ವರ್ಷ ಇಂಥ ಪ್ರಮಾಣಪತ್ರ ಸಲ್ಲಿಸಲು ಹೋದಾಗ, ಹಿಂದಿನ ವರ್ಷ ಬದುಕಿರುವುದಕ್ಕೆ ಪ್ರಮಾಣಪತ್ರ ಇಲ್ಲದಿರುವುದರಿಂದ ಈ ವರ್ಷ ಬದುಕಿರುವ ಪ್ರಮಾಣಪತ್ರವನ್ನು ಸ್ವೀಕರಿಸಲಾಗದು ಎಂದು ತಿರಸ್ಕರಿಸಿದರಂತೆ. ಖ್ಯಾತ ಪತ್ರಕರ್ತ ಖುಶ್ವಂತ್ ಸಿಂಗ್ ಉಲ್ಲೇಖಿಸಿದ ಈ ಪ್ರಮೇಯ ಜೋಕ್ ಎನಿಸಿದರೂ, ಸತ್ಯಕ್ಕೆ ದೂರವಿಲ್ಲ ಎನ್ನಬಹುದು.

ನಮ್ಮ ವ್ಯವಸ್ಥೆ ಹೀಗಿದೆ ಎಂದರೆ ಈ ಘಟನೆಯಲ್ಲಿ ಅವಳು ಬದುಕಿರಲಿ ಬಿಡಲಿ, ಅವಳು ಮೃತಳಾಗಿದ್ದಾಳೆ ಎನ್ನುವ ಪ್ರಮಾಣಪತ್ರ ದೊರಕಿದ್ದರೆ ಅವನ ಕೆಲಸ ಸುಲಲಿತವಾಗುತ್ತಿತ್ತು. ಈ ಘಟನೆಯು ವ್ಯವಸ್ಥೆಯ ಮತ್ತು ನೀತಿ ನಿಯಮಾವಳಿಯ ಕೂಸಾಗಿದ್ದು, ಇದನ್ನು ದೂಷಿಸದೇ, ಅದರಲ್ಲಿನ ನ್ಯೂನತೆಯನ್ನು ಎತ್ತಿ ತೋರಿಸದೇ ಇದನ್ನು ನಿಷ್ಠೆಯಿಂದ ಅನುಸರಿಸಿದವನನ್ನು ಬಲಿಪಶು ಮಾಡುತ್ತಿರುವುದು ದುರ್ದೈವ. ನೀತಿ ನಿಯಮಾವಳಿಗಳು ಅತಿಯಾಗಿ ದೃಢವಾಗಿರದೇ ಸಂದರ್ಭಕ್ಕೆ ಸರಿಯಾಗಿ ಸ್ಪಂದಿಸುವಂತೆ ಸ್ವಲ್ಪ ಸಡಿಲವಾಗಿದ್ದರೆ ಇಂಥ ಅನಾಹುತಗಳನ್ನು ತಪ್ಪಿಸಬಹುದು. ದುರ್ದೈವವೆಂದರೆ, ನೀತಿ-ನಿಯಮಾವಳಿ ಮತ್ತು ಕಾನೂನುಗಳನ್ನು ತಿಳಿಯದೇ ಬ್ಯಾಂಕುಗಳನ್ನು, ಸಿಬ್ಬಂದಿಗಳನ್ನು ಟಾರ್ಗೆಟ್ ಮಾಡಿ ಆಕ್ರೋಶವನ್ನು ಹೊರಹಾಕುತ್ತಿದ್ದಾರೆ.

(ಲೇಖಕರು: ನಿವೃತ್ತ ಬ್ಯಾಂಕರ್)

Bennett & Coleman
THE TIMES OF INDIA
www.vijaykarnataka.com
ಸಂಪುಟ: 27 | ಸಂಚಿಕೆ: 130
ಸೋಮವಾರ,11 ಮೇ 2026 | ಪುಟಗಳು: 12 | ಬೆಲೆ: ₹ 5.00
VK
ವಿಜಯ ಕರ್ನಾಟಕ
ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

ಉತ್ತರ ಪ್ರದೇಶದಲ್ಲಿ ಸಂಪುಟ ವಿಸ್ತರಣೆ: ಸಿಎಂ ಯೋಗಿ ಸರಕಾರಕ್ಕೆ 6 ಹೊಸ ಸಚಿವರ ಸೇರ್ಪಡೆ

ಕೇರಳದಲ್ಲಿ ಮುಖ್ಯಮಂತ್ರಿ ಆಯ್ಕೆಗೆ ಮುಂದುವರಿದ ಕಸರತ್ತು. ಕೆ.ಸಿ. ವೇಣುಗೋಪಾಲ್, ವಿ.ಡಿ. ಸತೀಶನ್, ರಮೇಶ್ ಚೆನ್ನಿತ್ತಲ ನಡುವೆ ಪೈಪೋಟಿ ಬಿರುಸು

ಅಸ್ಸಾಂ ಎನ್‌ಡಿಎ ಶಾಸಕಾಂಗ ಪಕ್ಷದ ನಾಯಕರಾಗಿ ಹಿಮಂತ ಆಯ್ಕೆ, ಮೇ 12ಕ್ಕೆ ಸಿಎಂ ಆಗಿ ಪ್ರಮಾಣ

ವಿಕ ಹೊಂಗಿರಣ

ಕಿವಿಗೊಡುವ ಸದ್ಬುದ್ಧಿ ಇದ್ದರೆ ನಾವು ನಮ್ಮ ಜೀವನದಲ್ಲಿ ಸಂಭವಿಸುವ ಎಷ್ಟೋ ಅನಾಹುತಗಳನ್ನು ತಪ್ಪಿಸಬಹುದು.

– ಕೆ.ಪಿ. ಪೂರ್ಣಚಂದ್ರ ತೇಜಸ್ವಿ

400 ಸೀಟು ಗೆದ್ದಿದ್ದ ರಾಷ್ಟ್ರೀಯ ಪಕ್ಷ 100ಕ್ಕೆ ಪರದಾಡುತ್ತಿದೆ, ಕಾಂಗ್ರೆಸ್ ಈಗ ಪ್ರಾದೇಶಿಕ ಪಕ್ಷ

ಕರ್ನಾಟಕ ಸಿಎಂ ಎಷ್ಟು ದಿನ ಇರುತ್ತಾರೋ ಗೊತ್ತಿಲ್ಲ | ಕುರ್ಚಿ ಕಿತ್ತಾಟಕ್ಕೆ ಪ್ರಧಾನಿ ಗುದ್ದು

ರಾಜ್ಯದ ಅಭಿವೃದ್ಧಿ ಸ್ಥಗಿತ

■ **ವಿಕ ಸುದ್ದಿಲೋಕ** ಬೆಂಗಳೂರು

ಪಶ್ಚಿಮ ಬಂಗಾಳದ ಐತಿಹಾಸಿಕ ಗೆಲುವು ಸೇರಿದಂತೆ ಪಂಚರಾಜ್ಯ ಚುನಾವಣೆ ಯಶಸ್ಸಿನಿಂದ ಪ್ರಫುಲ್ಲಗೊಂಡಿರುವ ಪ್ರಧಾನಿ ನರೇಂದ್ರ ಮೋದಿ, ಕರ್ನಾಟಕದ ನೆಲದಲ್ಲಿ ನಿಂತು ಕಾಂಗ್ರೆಸ್ ವಿರುದ್ಧ ಕಟು ಟೀಕೆಯ ಕ್ಷಿಪಣಿ ಪ್ರಯೋಗಿಸಿದ್ದಾರೆ. ಕಳೆದ ಮೂರು ವರ್ಷದಿಂದ ನಾಯಕತ್ವದ ಸಂಘರ್ಷದಿಂದ ರಾಜ್ಯದ ಅಭಿವೃದ್ಧಿ ಸ್ಥಗಿತವಾಗಿದೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದ ಎಲ್ಲ ಕಡೆಯೂ ಖಜಾನೆ ಲೂಟಿಯಾಗುತ್ತದೆ. ಜತೆಗೆ ತನ್ನ ವೈಫಲ್ಯಕ್ಕಾಗಿ ಇಡೀ ಜಗತ್ತು, ಸಾಂವಿಧಾನಿಕ ಪ್ರಕ್ರಿಯೆಗಳನ್ನು ದೂಷಿಸುವ ಹಾಗೂ ಮಿತ್ರಪಕ್ಷಗಳಿಗೆ ವಿಶ್ವಾಸ ಘಾತ ಮಾಡುವ ಪಕ್ಷ ಕಾಂಗ್ರೆಸ್ ಎಂದು ತೀವ್ರ ವಾಗ್ದಾಳಿ ನಡೆಸಿದ್ದಾರೆ.

ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ ಕಾರ್ಯಕ್ರಮದ ನಿಮಿತ್ತ ಬೆಂಗಳೂರಿಗೆ ಭಾನುವಾರ ಆಗಮಿಸಿದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಪಂಚರಾಜ್ಯ ಚುನಾವಣೆ ಯಶಸ್ಸಿನ ಹಿನ್ನೆಲೆಯಲ್ಲಿ ರಾಜ್ಯ ಬಿಜೆಪಿ ವತಿಯಿಂದ ಎಚ್‌ಎಎಲ್ ವಿಮಾನ ನಿಲ್ದಾಣದಲ್ಲಿ ಅಭಿನಂದಿಸಲಾಯಿತು.

ಬೆಳಗ್ಗೆ ಬಿಸಿಲು ಏರುವ ಮುನ್ನವೇ ದೊಡ್ಡ ಸಂಖ್ಯೆಯಲ್ಲಿ ಜನ ಜಮಾಯಿಸಿದ್ದನ್ನು ಕಂಡ ಪ್ರಧಾನಿಯವರು ಉತ್ಸಾಹಭರಿತರಾದರು. ಕೇಸರಿ ಬಾವುಟ ಹಿಡಿದು ಮೋದಿ ಮೋದಿ... ಎಂದು ಹರ್ಷೋದ್ಗಾರ ಮಾಡುತ್ತಿದ್ದ ಜನರನ್ನು ಉದ್ದೇಶಿಸಿ, ''ಪಶ್ಚಿಮ ಬಂಗಾಳದ ಗೆಲುವು ನಿಮ್ಮದೂ ಕೂಡ,'' ಎಂದು ವಿಶೇಷವಾಗಿ ಪ್ರಸ್ತಾಪಿಸಿ ಹುರಿದುಂಬಿಸಿದರು.

ಬಂಗಾಳದ ಗೆಲುವು ನಿಮ್ಮದೇ...

- ಪಶ್ಚಿಮ ಬಂಗಾಳದ ಗೆಲುವು ಕರ್ನಾಟಕ ಜನರದ್ದು ಕೂಡ
- ಬಿಜೆಪಿಯದ್ದು ವಿಕಾಸದ ಅಜೆಂಡಾ, ರಾಷ್ಟ್ರನೀತಿಗೆ ಬೆಂಬಲ

''ಐದು ರಾಜ್ಯಗಳ ಚುನಾವಣೆ ಫಲಿತಾಂಶ ಭಾರತದ ದೃಷ್ಟಿಯಿಂದ ಮಹತ್ವಪೂರ್ಣವಾದುದು. ಇದು ದೇಶದ ಮಹಿಳೆಯರು, ರೈತರು, ಯುವಕರು, ಬಡವರು ಸೇರಿದಂತೆ ಎಲ್ಲ ವರ್ಗದವರ ಅಪೇಕ್ಷೆಯೇನು ಎಂಬುದರ ದ್ಯೋತಕ. ದೇಶದ ಜನತೆಗೆ ಸ್ಕ್ಯಾಮ್ ಬೇಕಾಗಿಲ್ಲ, ಅವರಿಗೆ ಬೇಕಿರುವುದು ಸಲ್ಯೂಷನ್. ಹಾಗಾಗಿ ಇಡೀ ದೇಶ ಬಿಜೆಪಿಯ ರಾಷ್ಟ್ರನೀತಿಯ ಜತೆಗಿದೆ,'' ಎಂದರು. »03

ನರೇಂದ್ರ ಮೋದಿ ಟೀಕಾಸ್ತ್ರ

- ಕಾಂಗ್ರೆಸ್ ಅಂದ್ರೆ ಲೂಟಿ, ಮಿತ್ರಪಕ್ಷಗಳಿಗೆ ದ್ರೋಹ ಮಾಡುವುದೇ ಪಕ್ಷದ ನೀತಿ
- ಖಜಾನೆ ಲೂಟಿ ಮಾಡುವವರಿಗೆ ದೇಶದ ಜನತೆಯೇ ಪಾಠ ಕಲಿಸಿದ್ದಾರೆ
- ದೇಶದ ಜನರಿಗೆ ಬೇಕಿರೋದು ಸ್ಕ್ಯಾಮ್ ಅಲ್ಲ, ಸಲ್ಯೂಷನ್
- ತನ್ನ ಸೋಲಿಗೆ ಇತರರನ್ನು ದೂಷಿಸುವ ಕಾಂಗ್ರೆಸ್‌ಗೆ ಅಹಂಕಾರ
- ಕಾಂಗ್ರೆಸ್ ಬಳಿ ಯಾವುದೇ ಸಕಾರಾತ್ಮಕ ಕಾರ್ಯಸೂಚಿ ಇಲ್ಲ

ಕರ್ನಾಟಕದಲ್ಲಿ ಯಾವುದೇ ಕುರ್ಚಿಗಳು ಅಲುಗಾಡುತ್ತಿಲ್ಲ, ಎಲ್ಲಾ ಕುರ್ಚಿಗಳು ಸ್ಥಿರವಾಗಿವೆ. ಪ್ರಧಾನಿ ಹೇಳಿದಂತೆ ಯಾವುದೇ ಕಿತ್ತಾಟವೂ ಇಲ್ಲ. **–ಡಿ.ಕೆ. ಶಿವಕುಮಾರ್** ಉಪಮುಖ್ಯಮಂತ್ರಿ

ರಾಜ್ಯದ ಕುರ್ಚಿ ಕಿತ್ತಾಟದ ಬಗ್ಗೆ ಪ್ರಧಾನಿ ಮೋದಿ ರಾಜಕೀಯವಾಗಿ ಹೇಳಿರುವುದು ಸ್ವಾಭಾವಿಕ. ರಾಜ್ಯದಲ್ಲಿ ಕುರ್ಚಿ ಗುದ್ದಾಟ ಇದೇ ಅಲ್ವಾ. **– ಸತೀಶ ಜಾರಕಿಹೊಳಿ** ಲೋಕೋಪಯೋಗಿ ಸಚಿವ

ವಿಜಯ್ ಸರ್ಕಾರ್

ಸಿನಿಮೀಯ ಶೈಲಿಯ ಪ್ರಮಾಣ ವಚನಕ್ಕೆ ಕಟ್ ಹೇಳಿದ ರಾಜ್ಯಪಾಲರು

ಚೆನ್ನೈ: ಸರಕಾರ ರಚನೆಗೆ ಬೇಕಿರುವ ಸರಳ ಬಹುಮತ ಗಳಿಸಲು ಕೊನೆಗೂ ಯಶಸ್ವಿಯಾದ ಟಿವಿಕೆ ಮುಖ್ಯಸ್ಥ ಸಿ. ಜೋಸೆಫ್ ವಿಜಯ್ ಅವರು ಭಾನುವಾರ ತಮಿಳುನಾಡು ಮುಖ್ಯಮಂತ್ರಿಯಾಗಿ ದೇವರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ಇದರೊಂದಿಗೆ ದ್ರಾವಿಡ ನಾಡಿನಲ್ಲಿ ಎಂಜಿಆರ್ ನಂತರ ಮತ್ತೊಂದು ಹೊಸ ರಾಜಕೀಯ ಯುಗ ಆರಂಭವಾದಂತಾಗಿದೆ. ವಿಜಯ್ ಅವರು ಮೇ 13ರೊಳಗೆ ಸದನದಲ್ಲಿ ವಿಶ್ವಾಸಮತ ಸಾಬೀತುಪಡಿಸಬೇಕಿದೆ.

ಚೆನ್ನೈನ ಜವಾಹರಲಾಲ್ ನೆಹರೂ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿಜಯ್ ಅವರಿಗೆ ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಅವರು ಅಧಿಕಾರ ಮತ್ತು ಗೋಪ್ಯತೆಯ ಪ್ರತಿಜ್ಞಾವಿಧಿ ಬೋಧಿಸಿದರು. ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ, ವಿಜಯ್ ತಂದೆ-ತಾಯಿ, ನಟಿ ತ್ರಿಷಾ ಸೇರಿ ವಿವಿಧ ಕ್ಷೇತ್ರಗಳ ಗಣ್ಯರು ಈ ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾದರು. ವಿಜಯ್ ಅವರ ಜತೆಗೆ 9 ಶಾಸಕರು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು. ವಿಜಯ್ ಸಂಪುಟದಲ್ಲಿ ದಂತ ವೈದ್ಯ, ಬಾಸ್ಕೆಟ್‌ಬಾಲ್ ಆಟಗಾರ, ಐಆರ್‌ಎಸ್ ನಿವೃತ್ತ ಅಧಿಕಾರಿಗೆ ಸ್ಥಾನ ಸಿಕ್ಕಿದ್ದು, ಹಿರಿ-ಕಿರಿಯ ರಾಜಕಾರಣಿಗಳಿಂದ ಸಮ್ಮಿಳಿತವಾಗಿದೆ. ಅಚ್ಚರಿಯ ವಿಷಯವೆಂದರೆ ಮಿತ್ರಪಕ್ಷಗಳಿಗೆ ಒಂದೇ ಒಂದು ಸಚಿವ ಸ್ಥಾನ ನೀಡಿಲ್ಲ.

ಒಂದು ಹಂತದಲ್ಲಿ ವಿಜಯ್ ಅವರು ನಿಯಮಗಳನ್ನು ಮೀರಿ, ಸಿನಿಮೀಯ ಶೈಲಿಯಲ್ಲಿ ಶಕ್ತಿ ಪ್ರದರ್ಶನದ ಕೈ ಸನ್ನೆಗಳೊಂದಿಗೆ ಪ್ರಮಾಣ ವಚನ ಬೋಧನೆಯನ್ನು ಪ್ರಬಲ ಭಾಷಣವಾಗಿ ಪರಿವರ್ತಿಸಲು ಯತ್ನಿಸಿದರು. ಆಗ ಮಧ್ಯಪ್ರವೇಶಿಸಿದ ರಾಜ್ಯಪಾಲರು ಅಧಿಕೃತ ಬೋಧನಾ ಪತ್ಯಕ್ಕೆ ಮಾತ್ರ ಸೀಮಿತವಾಗಿರುವಂತೆ ಸೂಚಿಸಿದ ಪ್ರಸಂಗವೂ ನಡೆಯಿತು. ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಗೀತೆ 'ವಂದೇ ಮಾತರಂ' ಆರೂ ಚರಣಗಳನ್ನು ಮೊದಲು ಹಾಡಿ, ನಂತರ ರಾಷ್ಟ್ರಗೀತೆ, ಕೊನೆಯಲ್ಲಿ ನಾಡಗೀತೆ ಹಾಡಿದ್ದಕ್ಕೆ ಮಿತ್ರಪಕ್ಷ ಸಿಪಿಐ ಆಕ್ಷೇಪಿಸಿದೆ. ಇದು ತಮಿಳರಿಗೆ ಮಾಡಿದ ಅಪಮಾನ ಎಂದು ಕಿಡಿಕಾರಿದೆ. ವಿವರ»07

ತ.ನಾಡು ಸಿಎಂ ಆಗಿ ಅಧಿಕಾರ ಸ್ವೀಕಾರ

- ಬಿಳಿ ಶರ್ಟ್, ಕಪ್ಪು ಬ್ಲೇಜರ್, ಕಪ್ಪು ಪ್ಯಾಂಟ್ ಧರಿಸಿ ಪ್ರಮಾಣ ವಚನ ಸ್ವೀಕರಿಸಿದ ವಿಜಯ್
- ತಿಳಿ ನೀಲಿ ವರ್ಣದ ಕಾಂಚೀವರಂ ಸೀರೆಯುಟ್ಟು ಗಮನ ಸೆಳೆದ ವಿಜಯ್ ಗೆಳತಿ ನಟಿ ತ್ರಿಷಾ ಕೃಷ್ಣನ್
- ರಾಹುಲ್ ಗಾಂಧಿ ಜತೆ ಸೆಲ್ಫಿ ತೆಗೆದುಕೊಂಡ ವಿಜಯ್, ಪ್ರಧಾನಿ ಮೋದಿ ಸೇರಿ ಗಣ್ಯರಿಂದ ಶುಭಾಶಯ
- ಶಿವಕಾಶಿ ಕ್ಷೇತ್ರದ ಶಾಸಕಿ ಎಸ್.ಕೀರ್ತನಾ (29) ದಳಪತಿ ಸಂಪುಟದ ಅತ್ಯಂತ ಕಿರಿಯ ಸಚಿವೆ, ಇವರು ಐದು ಭಾಷೆಗಳನ್ನು ಬಲ್ಲರು
- ಪ್ರತಿ ಕುಟುಂಬಕ್ಕೆ 200 ಯೂನಿಟ್ ಉಚಿತ ವಿದ್ಯುತ್ ಸೇರಿ 5 ಜನಸ್ನೇಹಿ ಆದೇಶಗಳಿಗೆ ಸಹಿ.
- ಪೆರಂಬೂರು ಕ್ಷೇತ್ರ ಉಳಿಸಿಕೊಂಡು ತಿರುಚಿರಾಪಳ್ಳಿ ಪೂರ್ವ ಕ್ಷೇತ್ರಕ್ಕೆ ರಾಜೀನಾಮೆ ನೀಡಿದ ದಳಪತಿ

ಚಿನ್ನ ಖರೀದಿ ನಿಲ್ಲಿಸಿ, ಇಂಧನ ಬಳಕೆ ತಗ್ಗಿಸಿ

ಹೈದರಾಬಾದ್: ಅಮೆರಿಕ-ಇರಾನ್ ಸಂಘರ್ಷವು ಜಾಗತಿಕ ತೈಲ ಮಾರುಕಟ್ಟೆ ಹಾಗೂ ಅರ್ಥ ವ್ಯವಸ್ಥೆ ಮೇಲೆ ಪರಿಣಾಮ ಬೀರಿದೆ. ಜಾಗತಿಕ ತೈಲ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಇಲ್ಲಿ ನಡೆದ ಬಿಜೆಪಿ ರ‍್ಯಾಲಿಯಲ್ಲಿ ಇಂಧನ ಉಳಿತಾಯ ಮಾಡುವಂತೆ ಹಾಗೂ ಚಿನ್ನ ಖರೀದಿಸದಂತೆ ದೇಶದ ಜನತೆಗೆ ಸಲಹೆ ನೀಡಿದರು.

ಪೆಟ್ರೋಲ್, ಡೀಸೆಲ್ ಬಳಕೆ ತಗ್ಗಿಸಿ, ವರ್ಕ್ ಫ್ರಮ್ ಹೋಮ್ ರೂಢಿಸಿಕೊಳ್ಳಿ, ರಾಸಾಯನಿಕ ಗೊಬ್ಬರ ಕಡಿಮೆ ಮಾಡಿ, ಪರಿಸರ ಸಂರಕ್ಷಣೆಗೆ ಸಿಂಗಲ್ ಯೂಸ್ ಪ್ಲಾಸ್ಟಿಕ್ ಚೀಲಗಳ ಬಳಕೆ ನಿಲ್ಲಿಸಿ ಎಂದು ಕರೆ ನೀಡಿದರು. ಭಾರತದ ವಿದೇಶಿ ವಿನಿಮಯ ಉಳಿಸಲು ಒಂದು ವರ್ಷ ಕಾಲ ಮದುವೆಗೆ ಚಿನ್ನ ಕೊಳ್ಳುವುದನ್ನು ನಿಲ್ಲಿಸುವಂತೆ ಜನರಲ್ಲಿ ಮನವಿ ಮಾಡಿದರು.

ಮಧ್ಯಪ್ರಾಚ್ಯ ಯುದ್ಧದಿಂದ ಉಂಟಾದ ಪರಿಸ್ಥಿತಿಗಳನ್ನು ನಿಭಾಯಿಸಲು ಮೋದಿ ಹೀಗೆ ಹೇಳಿದರೇ? ಮುಂದಿನ ದಿನಗಳಲ್ಲಿ ಈ ಪರಿಣಾಮಗಳು ತೀವ್ರವಾಗಿರುವವೇ? ಎಂಬ ಚರ್ಚೆಗಳು ಎದ್ದಿವೆ.

ಪ್ರಧಾನಿ ಹೇಳಿದ 'ಆರ್ಟ್ ಆಫ್ ಲಿವಿಂಗ್' ಗುಟ್ಟುಗಳು »03

ಯೋಜನೆ ಸಚಿವ ಡಿ. ಸುಧಾಕರ್ ನಿಧನ

ಹಿರಿಯೂರು: ಹಿರಿಯೂರು ಶಾಸಕ ಹಾಗೂ ರಾಜ್ಯ ಸರಕಾರದ ಯೋಜನೆ ಮತ್ತು ಸಾಂಖ್ಯಿಕ ಸಚಿವ ಡಿ.ಸುಧಾಕರ್ (66) ಭಾನುವಾರ ಬೆಂಗಳೂರಿನ ಕಿಮ್ಸ್ ಆಸ್ಪತ್ರೆಯಲ್ಲಿ ನಿಧನರಾದರು.



ತೀವ್ರ ಅನಾರೋಗ್ಯ ಹಿನ್ನೆಲೆ ಕಳೆದ ಒಂದೂವರೇ ತಿಂಗಳಿಂದ ಬೆಂಗಳೂರಿನ ಕಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಚಿಕಿತ್ಸೆ ಫಲಕಾರಿಯಾಗದೆ ಭಾನುವಾರ ನಸುಕಿನ 3.15ರ ಸುಮಾರಿಗೆ ವಿಧಿವಶರಾದರು. ಸುಧಾಕರ್ ಅವರು ನಾಲ್ಕು ಬಾರಿ ಶಾಸಕರಾಗಿ, ಎರಡು ಬಾರಿ ಸಚಿವರಾಗಿದ್ದರು. ಸುಧಾಕರ್ ಅವರ ನಿಧನಕ್ಕೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಸೇರಿದಂತೆ ಅನೇಕ ಗಣ್ಯರು ಸಂತಾಪ ಸೂಚಿಸಿದ್ದಾರೆ. ಚಳ್ಳಕೆರೆಯ ಚಿತ್ರದುರ್ಗ ರಸ್ತೆಯ ಸಚಿವರ ಷಟಲ್ ಬ್ಯಾಡ್ಮಿಂಟನ್ ಕೋರ್ಟ್ ಆವರಣದಲ್ಲಿ ಮೇ 11ರ ಸೋಮವಾರ ಸಂಜೆ ಸರಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆ ನಡೆಯಲಿದೆ. ವಿವರ»10

ಆತಂಕ ತಂದ ಜಿಲೆಟಿನ್ ಕಡ್ಡಿ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರ ಬೆಂಗಳೂರು ಭೇಟಿ ವೇಳೆ ನಗರದ ಹೊರವಲಯದ ಕಗ್ಗಲೀಪುರ ಗ್ರಾಮದ ತಾತಗುಣಿ ಬಳಿ ಜಿಲೆಟಿನ್ ಕಡ್ಡಿಗಳು ಪತ್ತೆಯಾಗಿದ್ದು, ಭದ್ರತಾ ಲೋಪದ ಆರೋಪ ಕೇಳಿ ಬಂದಿದೆ.

ಎಚ್‌ಎಎಲ್ ಮತ್ತು ಕನಕಪುರ ರಸ್ತೆಯ ಆರ್ಟ್ ಆಫ್ ಲಿವಿಂಗ್ ಸೆಂಟರ್‌ನಲ್ಲಿ ಭಾನುವಾರ ನಿಗದಿಯಾಗಿದ್ದ ಪ್ರಧಾನಿ ಕಾರ್ಯಕ್ರಮದ ಸ್ಥಳದಲ್ಲಿ ಬಾಂಬ್ ಸ್ಫೋಟಿಸುವುದಾಗಿ ವ್ಯಕ್ತಿಯೊಬ್ಬ ಪೊಲೀಸ್ ನಿಯಂತ್ರಣ ಕೊಠಡಿಗೆ ಕರೆ ಮಾಡಿ ಬೆದರಿಕೆ ಹಾಕಿ ಸಿಕ್ಕಿಬಿದ್ದಿದ್ದಾನೆ. ಈ ವ್ಯಕ್ತಿಗೂ ಹಾಗೂ ಜಿಲೆಟಿನ್ ಕಡ್ಡಿ ಪತ್ತೆಯಾಗಿರುವ ಪ್ರಕರಣಕ್ಕೂ ನಂಟಿರುವ ಶಂಕೆ ವ್ಯಕ್ತವಾಗಿದೆ. ಪೊಲೀಸರಿಂದ ತನಿಖೆ ಮುಂದುವರಿದಿದೆ. ವಿವರ»02

SBI
The banker to every Indian
ಗೃಹ ಸಾಲ
● ಯಾವುದೇ ಮರೆಮಾಚಲಾದ ಶುಲ್ಕಗಳಿಲ್ಲ
● ಯಾವುದೇ ಸಂಸ್ಕರಣಾ ಶುಲ್ಕಗಳಿಲ್ಲ
● ಸ್ಪರ್ಧಾತ್ಮಕ ಬಡ್ಡಿದರಗಳು
ಭೇಟಿ ನೀಡಿ: homeloans.sbi
ಈಗಲೇ ಅರ್ಜಿ ಸಲ್ಲಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ
*ಷರತ್ತುಗಳು ಅನ್ವಯಿಸುತ್ತವೆ
BANKING AS EASY AS 1-2-3-4
1800 1234 1800 2100

COSMOS CO-OP. BANK LTD. MULTISTATE SCHEDULED BANK
Enriching Life!
Cosmo Udyog Loan
ROI 8.50%* Onwards
*T&C (ROI p.a.)
Loan available upto ₹ 3 Crore in the form of Cash Credit
080-26619950 / 22421999

Vencobb
ಫಾರಂ ಧಾರಣೆ ಮಾರಾಟದ ಪ್ರತಿ ಕೆಜಿಗೆ ಸಲಹೆಯ ಬೆಲೆ
₹135/- ಕೋಲಾರ 133/- ತುಮಕೂರು 133/-
ರೀಟೇಲ್ ಮಾರಾಟದ ದರ ಪ್ರತಿ ಕೆಜಿಗೆ ಬೆಲೆ ₹175/-
ಕೋಲಾರ 173/- ತುಮಕೂರು 173/-
ವಿಥ್ ಸ್ಕಿನ್ ₹247/- ಕೋಲಾರ 244/- ತುಮಕೂರು 244/-
ವಿಥೌಟ್ ಸ್ಕಿನ್ ₹282/- ಕೋಲಾರ 279/- ತುಮಕೂರು 279/-
ಗ್ರಾಹಕರಿಗೋಸ್ಕರ ನೀಡಲಾಗಿದೆ

NAAC A+ ACCREDITED UNIVERSITY
RAMAIAH UNIVERSITY OF APPLIED SCIENCES

RAMAIAH UNIVERSITY COLLEGE OF ENGINEERING
(A Constituent College of Ramaiah University of Applied Sciences)
NEW CAMPUS @ ELECTRONIC CITY
For six decades and beyond, Ramaiah Group has been a trusted name in transforming lives through education and healthcare. It now expands with its new constituent campus at Electronic City Ramaiah University College of Engineering rises as the next destination for future-ready engineering talent.
Programs Offered - B. Tech. in
CSE Computer Science and Engineering
AI&ML Artificial Intelligence and Machine Learning
ECE Electronics and Communication Engineering
EE Electronics Engineering (VLSI Design and Technology)
In collaboration with UNIVERSITY AT ALBANY STATE UNIVERSITY OF NEW YORK
FEATURES
60 Seats Per Program Personalized attention guaranteed.
Hands-On Industry Training Real-world skills from day one.
Relevant Industry Internships Direct path to high employability.
UAlbany Curriculum Collaboration Globally benchmarked excellence.
Makerspace for Innovators (Year 1+) Fuel your ideas with cutting-edge tools.
APPROVED BY KSHEC
nirf 22nd Rank of Faculty of Dental Sciences | 50th Rank of Ramaiah Medical College | 56th Rank of Faculty of Pharmacy
ADMISSIONS OPEN
admissions@msruas.ac.in
www.msruas.ac.in
80 1000 4444
SCAN QR TO APPLY
No.15, Bommasandra Jigani Link Road, KIADB Industrial Area, Jigani, Bengaluru, Karnataka 560105

ಕರ್ನಾಟಕ ಮೊದಲಿನಿಂದಲೂ ನಮಗೆ ಶಕ್ತಿ | ದಕ್ಷಿಣದಲ್ಲೂ ನೆಲೆ ವಿಸ್ತರಣೆ | ಪ್ರಧಾನಿ ನರೇಂದ್ರ ಮೋದಿ ಭರವಸೆ

ಕೇರಳದಲ್ಲೂ ಮುಂದೆ ಬಿಜೆಪಿಯದೇ ಅಧಿಕಾರ

■ **ವಿಕ ಸುದ್ದಿಲೋಕ** ಬೆಂಗಳೂರು

ಪಶ್ಚಿಮ ಬಂಗಾಳದಲ್ಲಿ ಗೆಲುವು ದಾಖಲಿಸಿದ ಹಾಗೆಯೇ ಭವಿಷ್ಯದಲ್ಲಿ ಕೇರಳದಲ್ಲೂ ಬಿಜೆಪಿ ಅಧಿಕಾರ ಹಿಡಿಯುವ ದಿನ ಬರಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಜತೆಗೆ ಬಿಜೆಪಿ ದೊಡ್ಡ ಪಕ್ಷ ಆಗುವುದಕ್ಕಿಂತ ಮುಂಚೆಯೇ ಕರ್ನಾಟಕದಲ್ಲಿ ಪಕ್ಷಕ್ಕೆ ಶಕ್ತಿಯಿತ್ತು ಎಂದು ವಿಶೇಷ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಎಚ್‌ಎಎಲ್ ವಿಮಾನ ನಿಲ್ದಾಣದ ಆವರಣದಲ್ಲಿ ರಾಜ್ಯ ಬಿಜೆಪಿಯ ಅಭಿನಂದನೆ ಸ್ವೀಕರಿಸಿ ಮಾತನಾಡಿ, ''ಕೇರಳದಲ್ಲಿ ಮೊದಲು ನಮಗೆ 1 ಸ್ಥಾನವಿತ್ತು. ಈ ಬಾರಿ 3 ಸೀಟು ಬಂದಿದೆ. 1 ರಿಂದ 3 ಸ್ಥಾನಕ್ಕೆ ಸಂಖ್ಯಾಬಲ ಹೆಚ್ಚಿದ ಮೇಲೆ ಬಹುಮತ ಬರುವ ದಿನವೂ ದೂರವಿಲ್ಲ. ಮುಂದೆ ಕೇರಳದಲ್ಲೂ ಬಿಜೆಪಿ ಸರಕಾರ ಬರಲಿದೆ,'' ಎಂದರು.

ದಕ್ಷಿಣ ಭಾರತದಲ್ಲಿ ಪಕ್ಷದ ನೆಲೆ ವಿಸ್ತರಣೆ ದೃಷ್ಟಿಯಿಂದ ಕೇರಳದ ಫಲಿತಾಂಶವನ್ನು ಪ್ರಸ್ತಾಪಿಸಿದ ಪ್ರಧಾನಿ, ''ಆಂಧ್ರಪ್ರದೇಶದಲ್ಲಿ ಎನ್‌ಡಿಎ ಸರಕಾರವಿದೆ. ತೆಲಂಗಾಣದಲ್ಲಿ ನಾವು 2ನೇ ಸ್ಥಾನದಲ್ಲಿದ್ದೇವೆ. ಪುದುಚೇರಿಯಲ್ಲಿ 2ನೇ ಬಾರಿಗೆ ಎನ್‌ಡಿಎ ಸರಕಾರ ಬಂದಿದೆ. ಕೇವಲ 10 ವರ್ಷದ ಹಿಂದೆ ಪಶ್ಚಿಮ ಬಂಗಾಳದಲ್ಲಿ ಬಿಜೆಪಿಯಿಂದ ಮೂವರು ಶಾಸಕರಿದ್ದರು. ಈಗ ಅಲ್ಲಿ ಪಕ್ಷ ಸರಕಾರ ರಚನೆಯಾಗಿದೆ. ಹಾಗೆಯೇ ಕೇರಳದಲ್ಲೂ ಪಕ್ಷದ ಶಕ್ತಿ ಹೆಚ್ಚಿ ಅಧಿಕಾರಕ್ಕೆ ಬರಲಿದೆ,'' ಎಂದು ಹೇಳಿದರು.

ಮೊದಲಿನಿಂದಲೂ ಕರ್ನಾಟಕ ನಮ್ಮ ದೊಡ್ಡ ಶಕ್ತಿ

''ಕರ್ನಾಟಕ ಯಾವಾಗಲೂ ನಮಗೆ ದೊಡ್ಡ ಶಕ್ತಿ ಕೇಂದ್ರ. ಬಿಜೆಪಿ ದೊಡ್ಡ ಪಕ್ಷವಾಗುವುದಕ್ಕಿಂತ ಮುಂಚಿನಿಂದಲೂ ಕರ್ನಾಟಕ ನಮಗೆ ಶಕ್ತಿ ನೀಡುತ್ತ ಬಂದಿದೆ. ಕರ್ನಾಟಕದಲ್ಲಿ ಬಿಜೆಪಿಯ ಸಂಸದರೇ ಹೆಚ್ಚು ಆಯ್ಕೆಯಾಗಿದ್ದಾರೆ,'' ಎಂದು ಮೋದಿ ಹೇಳಿದರು.

''ದೇಶದ 21 ರಾಜ್ಯಗಳಲ್ಲಿ ಬಿಜೆಪಿ ಮತ್ತು ಎನ್‌ಡಿಎ ಸರಕಾರಗಳಿವೆ. ರಾಜ್ಯಗಳು ಅಭಿವೃದ್ಧಿ ಆದರೆ ದೇಶದ ಅಭಿವೃದ್ಧಿಯಾಗುತ್ತದೆ. ನಾವು ಕಳೆದ 11 ವರ್ಷದಿಂದ ಕೇಂದ್ರದಲ್ಲಿ ಅಧಿಕಾರದಲ್ಲಿದ್ದೇವೆ. ಸಬ್‌ಕಾ ಸಾಥ್-ಸಬ್‌ಕಾ ವಿಕಾಸ್ ಜತೆಗೆ ಗುಡ್ ಗವರ್ನೆನ್ಸ್ ನಮ್ಮ ಮಾಡೆಲ್. ಜನಕಲ್ಯಾಣ ನಮ್ಮ ಆದ್ಯತೆ. ನಮ್ಮ ಅವಧಿಯಲ್ಲಿ 51 ಕೋಟಿ ಜನರು ಬಡತನದ ರೇಖೆಯಿಂದ ಹೊರ ಬಂದಿದ್ದಾರೆ. ಹಾಗಾಗಿ 3ನೇ ಬಾರಿಗೆ ಜನರು ಅಧಿಕಾರ ಕೊಟ್ಟಿದ್ದಾರೆ,'' ಎಂದು ಹೇಳಿದರು.

ಮಾತು ಕೊಡೋದು, ಬಿಡೋದು: ''ಕೇರಳದಲ್ಲಿ ಪೂರ್ಣ ಬಹುಮತ ಬಂದರೂ ಕಾಂಗ್ರೆಸ್‌ಗೆ ಸರಕಾರ ರಚಿಸಲು ಸಾಧ್ಯವಾಗುತ್ತಿಲ್ಲ. ಅಲ್ಲಿ ಎರಡೂವರೆ ವರ್ಷದ ಒಪ್ಪಂದವೋ ಅಥವಾ 5 ವರ್ಷಕ್ಕೆ 5 ಮುಖ್ಯಮಂತ್ರಿಯ ಸೂತ್ರವೋ ಗೊತ್ತಿಲ್ಲ. ಮಾತು ಕೊಡುವುದು ಮತ್ತು ಅದನ್ನು ಮರೆತು ಬಿಡುವುದು ಕಾಂಗ್ರೆಸ್‌ನಲ್ಲಾಗುತ್ತಿದೆ. ಈ ಹಿಂದೆ ಛತ್ತೀಸ್‌ಗಢ, ರಾಜಸ್ಥಾನದಲ್ಲಾಯಿತು. ಈಗ ಕರ್ನಾಟಕದಲ್ಲಾಗುತ್ತಿದೆ. ಮುಂದೆ ಕೇರಳದ ಸರದಿ,'' ಎಂದು ಪ್ರಧಾನಿ ಮೋದಿ ವ್ಯಂಗ್ಯವಾಡಿದರು.

ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಬಿಜೆಪಿ ಶಾಸಕಾಂಗ ಪಕ್ಷದ ನಾಯಕ ಆರ್. ಅಶೋಕ್, ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ವಿ.ಸೋಮಣ್ಣ, ಶೋಭಾ ಕರಂದ್ಲಾಜೆ, ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಸಂಸದ ಪಿ.ಸಿ. ಮೋಹನ್, ಶಾಸಕಿ ಮಂಜುಳಾ ಲಿಂಬಾವಳಿ ಇದ್ದರು.

ಕಾಂಗ್ರೆಸ್ ನಾರಿ ಶಕ್ತಿಯ ವಿರೋಧಿ

ಮಹಿಳಾ ಮೀಸಲು ವಿಚಾರದಲ್ಲಿ ತಾಯಂದಿರು, ಸಹೋದರಿಯರಿಗೆ ಕಾಂಗ್ರೆಸ್ ವಿಶ್ವಾಸ ದ್ರೋಹ ಮಾಡಿದೆ. ಕಾಂಗ್ರೆಸ್ ನಾರಿ ಶಕ್ತಿಯ ವಿರೋಧಿಯಾಗಿದೆ. ಹಾಗಾಗಿ ಮಹಿಳೆಯರು ಎಂದಿಗೂ ಕಾಂಗ್ರೆಸ್ ಅನ್ನು ಕ್ಷಮಿಸುವುದಿಲ್ಲ,'' ಎಂದು ಪ್ರಧಾನಿ ಅಸಮಾಧಾನ ವ್ಯಕ್ತಪಡಿಸಿದರು.

ಸಂಕಷ್ಟದಿಂದ ಹೊರ ಬರುತ್ತೇವೆ

''ಮಧ್ಯ ಪ್ರಾಚ್ಯದ ಯುದ್ಧದ ಪರಿಣಾಮ ಭಾರತದ ಮೇಲೂ ಆಗಿದೆ. ನಾವು ಸಂಯಮ ತಾಳಬೇಕು. ಕೋವಿಡ್ ಸಂದರ್ಭದಲ್ಲಿ ಸಂಯಮದಿಂದ ಇದ್ದೆವು. ಅದೇ ಮಾದರಿಯಲ್ಲಿ ನಾವು ಸಂಕಷ್ಟದಿಂದ ಹೊರ ಬರಲಿದ್ದೇವೆ,'' ಎಂದು ಪ್ರಧಾನಿ ಹೇಳಿದರು.

'ರಾಜ್ಯದಲ್ಲಿ ಬಹುಮತದ ಸರಕಾರ ತರುತ್ತೇವೆ'

ಮೋದಿಗೆ ಮೋದಿಯದೇ ಪ್ರತಿಮೆ ಉಡುಗೊರೆ.

ಮೋದಿಯವರ ಶಬ್ದಕೋಶದಲ್ಲಿ ಅಸಾಧ್ಯ ಎಂಬ ಮಾತೇ ಇಲ್ಲ. ಪಶ್ಚಿಮ ಬಂಗಾಳದಲ್ಲಿ ಮೊದಲ ಬಾರಿಗೆ ಐತಿಹಾಸಿಕ ಗೆಲುವು ತಂದು ಕೊಟ್ಟ ಮೋದಿಯವರು ಅಭಿನಂದನೀಯರು. ಕರ್ನಾಟಕದಲ್ಲೂ ಬಹುಮತದ ಸರಕಾರ ತಂದು ಮೋದಿ ಅವರನ್ನು ಅಭಿನಂದಿಸಲಾಗುವುದು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದ್ದಾರೆ.

''ಮೋದಿ ಪ್ರಚಾರಕ್ಕಾಗಿ ತೆರಳುವ ಸ್ಥಳದಲ್ಲಿ ಗೆಲುವು ಶತಸಿದ್ಧ ಎಂಬುದು ದೇಶಕ್ಕೇ ಗೊತ್ತಾಗಿದೆ. ಪಶ್ಚಿಮ ಬಂಗಾಳದ ಮಾದರಿಯಲ್ಲಿ ಕರ್ನಾಟಕದಲ್ಲಿ ಮೋದಿ ಅವರ ಮಾರ್ಗದರ್ಶನದಲ್ಲಿ ಭ್ರಷ್ಟಾಚಾರದಲ್ಲಿ ಮುಳುಗಿರುವ ಹಿಂದೂ ವಿರೋಧಿ ಸರಕಾರವನ್ನು ಬುಡಸಮೇತ ಕಿತ್ತು ಹಾಕಿ ಸಂಪೂರ್ಣ ಬಹುಮತದೊಂದಿಗೆ ಬಿಜೆಪಿ ಅಧಿಕಾರಕ್ಕೆ ತರುತ್ತೇವೆ,'' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಪಶ್ಚಿಮ ಬಂಗಾಳದಲ್ಲಿ ವಲಸಿಗರ ಹೆಬ್ಬಾಗಿಲು ಬಂದ್: ಅಶೋಕ್

ಅಕ್ರಮ ನುಸುಳುಕೋರರಿಗೆ ಹೆಬ್ಬಾಗಿಲಾಗಿದ್ದ ಪಶ್ಚಿಮ ಬಂಗಾಳದ ಬಾಗಿಲು ಬಂದ್ ಮಾಡುವ ಕೆಲಸವನ್ನು ಬಿಜೆಪಿ ಮಾಡಲಿದೆ ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್ ಹೇಳಿದರು.

''ಅಕ್ರಮ ವಲಸಿಗರು ಪಶ್ಚಿಮ ಬಂಗಾಳಕ್ಕೆ ಬಂದಾಗ ಮಮತಾ ಸರಕಾರ ಅವರಿಗೆ ಎಲ್ಲ ಆಧಾರ ಸಹಿತ ಸರಕಾರಿ ಸವಲತ್ತು ನೀಡುತ್ತಿದ್ದರು. ಕರ್ನಾಟಕಕ್ಕೂ ಹತ್ತು ಲಕ್ಷ ಮಂದಿ ವಲಸೆ ಬಂದಿದ್ದಾರೆ. ಕೊಡಗಿನಲ್ಲಿ ಕಡಿಮೆ ಕೂಲಿಗೆ ಸೇರಿಕೊಂಡಿದ್ದಾರೆ. ಬೆಂಗಳೂರಿನ ಕೋಗಿಲು ಬಳಿ ಬಾಂಗ್ಲಾದವರಿಗೆ ಸಿದ್ದರಾಮಯ್ಯ ಸರಕಾರ ಮನೆ ಕೊಟ್ಟು ನೆಂಟರಂತೆ ರಕ್ಷಿಸಲು ಮುಂದಾಗಿದ್ದರು. ಇದನ್ನು ಬಿಜೆಪಿ ವಿರೋಧಿಸಿತ್ತು,''ಎಂದರು.

''ಸಿದ್ದರಾಮಯ್ಯ ಅವರಂತೂ ಬಾಂಗ್ಲಾದವರನ್ನು ಓಡಿಸಲ್ಲ. ವಿಧಾನಸೌಧದಲ್ಲಿ ಪಾಕಿಸ್ತಾನ ಜಿಂದಾಬಾದ್ ಕೂಗಿದವರಿಗೆ ಏನೂ ಮಾಡಿಲ್ಲ. ಅದಕ್ಕೆಲ್ಲ ಪಶ್ಚಿಮಬಂಗಾಳದಲ್ಲಿ ಜನರು ಹೇಗೆ ಪಾಠ ಕಲಿಸಿದರು ಎಂಬುದು ಗೊತ್ತಿದೆ. ಇಲ್ಲೂ ಅಂತ್ಯ ಹಾಡುವ ಕಾಲ ಬರುತ್ತದೆ,'' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬಿಕ್ಕಟ್ಟಿನ ನಡುವೆ ದೇಶ ಕಟ್ಟುವ ಕೆಲಸ: ಛಲವಾದಿ

ದೇಶ ಕೇಸರಿಮಯವಾಗಲು ಮೋದಿ ಅವರ ದೂರದೃಷ್ಟಿ, ಪರಿಶ್ರಮ ಹಾಗೂ ಅಭಿವೃದ್ಧಿ ಮಂತ್ರವೇ ಕಾರಣವಾಗಿದೆ ವಿಧಾನ ಪರಿಷತ್ತಿನ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅಭಿಪ್ರಾಯಪಟ್ಟರು.

''ಹಲವು ಪಕ್ಷಗಳು ಓಲೈಕೆ, ಧರ್ಮದ ಹೆಸರಿನಲ್ಲಿ ದೇಶದ ವಿಭಜನೆಯ ರಾಜಕಾರಣ ಮಾಡುತ್ತಿವೆ. ಮೋದಿ ಅವರ ಆಡಳಿತದಲ್ಲಿ ಹಿಂದುತ್ವಕ್ಕೆ ಹೆಚ್ಚಿನ ಬೆಲೆ ಬಂದಿದೆ. ದೇಶ ಎಂದೂ ಕಾಣದ ಬಿಕ್ಕಟ್ಟಿನ ನಡುವೆಯೂ ಮೋದಿಯವರು ದೇಶವನ್ನು ಸಬ್ ಕಾ ಸಾಥ್ ಸಬ್ ಕಾ ವಿಕಾಸ್ ಸಬ್ ಕಾ ವಿಶ್ವಾಸ್ ನುಡಿಯಂತೆ ದೇಶ ಕಟ್ಟುತ್ತಿದ್ದಾರೆ,'' ಎಂದರು.

''ಪಶ್ಚಿಮ ಬಂಗಾಳವನ್ನು ಎಲ್ಲಿ ಕಳೆದುಕೊಳ್ಳುತ್ತೇವೊ ಎಂಬ ಆತಂಕ ಇತ್ತು. ಆದರೆ ಆದರೆ ಸಂಘಟಿತ ಕೆಲಸದ ಮೂಲಕ ಆ ರಾಜ್ಯದಲ್ಲಿ ಬಿಜೆಪಿ ಗೆದ್ದಿದೆ. ರಾಜ್ಯದಲ್ಲೂ ಇನ್ನು ಎರಡು ವರ್ಷಕ್ಕೆ ಬರುವ ಚುನಾವಣೆಯಲ್ಲಿ ಪಶ್ಚಿಮ ಬಂಗಾಳದಂತೆ ಅಧಿಕಾರಕ್ಕೆ ಬರಲು ಶ್ರಮಿಸೋಣ,'' ಎಂದರು.

ಮೋದಿಗೆ ಮೋದಿಯದೇ ಪ್ರತಿಮೆ ನೀಡಿದ ರಾಜ್ಯ ಬಿಜೆಪಿ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅವರದ್ದೇ ಪ್ರತಿಮೆಯನ್ನು ರಾಜ್ಯ ಬಿಜೆಪಿಯಿಂದ ನೀಡಿ ಅಭಿನಂದಿಸಲಾಯಿತು. ವಿಶೇಷವಾಗಿ ತಯಾರಿಸಿದ ಈ ಪ್ರತಿಮೆಯನ್ನು ಎಚ್‌ಎಎಲ್ ವಿಮಾನ ನಿಲ್ದಾಣದ ಆವರಣದ ಸಮಾರಂಭದಲ್ಲಿ ರಾಜ್ಯ ಬಿಜೆಪಿಯ ನಾಯಕರು ಪ್ರಧಾನಿಗೆ ನೀಡಿದರು. ಜತೆಗೆ ಮೈಸೂರು ಸಿಲ್ಕ್‌ನ ಶಾಲು ಹೊದಿಸಿ, ಮೈಸೂರು ಪೇಟ ತೊಡಿಸಲಾಯಿತು.

ಎಲ್ಲೆಲ್ಲೂ ಘೋಷಣೆ

ಪ್ರಧಾನಿ ಅವರು ವೇದಿಕೆಗೆ ಆಗಮಿಸುತ್ತಿದ್ದಂತೆ ಮೋದಿ ಮೋದಿ... ಜತೆಗೆ ಭಾರತ್ ಮಾತಾ ಕೀ ಜೈ, ಜೈ ಶ್ರೀರಾಂ ಘೋಷಣೆ ಎಲ್ಲೆಲ್ಲೂ ಮೊಳಗಿದವು. ಎಚ್‌ಎಎಲ್ ಏರ್‌ಪೋರ್ಟ್ ಆವರಣ ಸಂಪೂರ್ಣ ಕೇಸರಿಮಯವಾಗಿತ್ತು. ಪ್ರಧಾನಿ ತಮ್ಮ ಭಾಷಣದಲ್ಲೂ ಕೇಸರಿಮಯ ವಾತಾವರಣದ ಬಗ್ಗೆ ಪ್ರಸ್ತಾಪಿಸದರು. ಜತೆಗೆ ಅಣ್ಣಮ್ಮ ದೇವಿಗೆ ನಮಿಸಿದರು. ಕೆಂಪೇಗೌಡರನ್ನು ಸ್ಮರಿಸಿಕೊಂಡರು.

ಎಲ್ಲರಿಗೂ ಹಸ್ತಲಾಘವ

ಪಂಚರಾಜ್ಯ ಚುನಾವಣೆ ಯಶಸ್ಸು ಪ್ರಧಾನಿ ಮುಖದಲ್ಲಿ ಪ್ರತಿಫಲನಗೊಂಡಿತ್ತು. ಇದೇ ಖುಷಿಯಲ್ಲಿ ಅವರು ವೇದಿಕೆಯಲ್ಲಿದ್ದ ರಾಜ್ಯ ಬಿಜೆಪಿಯ ಪ್ರಮುಖರೊಂದಿಗೆ ನಗು ನಗುತ್ತಲೇ ಹಸ್ತಲಾಘವ ಮಾಡಿದರು.

ಬಿಎಸ್‌ವೈಗೆ ಅಭಿನಂದನೆ

ಒಂದು ದಿನದ ಹಿಂದಷ್ಟೇ ಬಿ.ಎಸ್.ಯಡಿಯೂರಪ್ಪ ಅಭಿಮಾನೋತ್ಸವ ನಡೆದಿದೆ. ಚಿತ್ರದುರ್ಗದಲ್ಲಿ ನಡೆದ ಈ ಸಮಾರಂಭದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಉಪಸ್ಥಿತರಿದ್ದು ಹಾರೈಸಿದ್ದರು. ಅದರ ಮರುದಿನವೇ ಪ್ರಧಾನಿ ಅವರಿಂದಲೂ ಬಿಎಸ್‌ವೈ ಅವರಿಗೆ ಅಭಿನಂದನೆ ಸಿಕ್ಕಿದ್ದು ವಿಶೇಷವಾಗಿತ್ತು.

ಗಮನ ಸೆಳೆದ ಬಿವೈವಿ ಮಾತು

ಹಿಂದಿಯಲ್ಲಿ ಮಾತು ಪ್ರಾರಂಭಿಸಿ ಬಿಜೆಪಿಯ ಯಶಸ್ಸಿನಲ್ಲಿ ಮೋದಿ ನಾಯಕತ್ವದ ಪಾತ್ರದ ಬಗ್ಗೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಸ್ಪಷ್ಟವಾಗಿ ಹೇಳಿದರು.

ಅಶೋಕ್ ಉಸ್ತುವಾರಿಯ ಅಚ್ಚುಕಟ್ಟು

ಈ ಕಾರ್ಯಕ್ರಮದ ಉಸ್ತುವಾರಿ ವಹಿಸಿಕೊಂಡಿದ್ದವರು ಆರ್. ಅಶೋಕ್. ಈ ಹಿಂದಿನಿಂದಲೂ ಬೆಂಗಳೂರಿನಲ್ಲಿ ಪಕ್ಷದ ಅನೇಕ ಸಭೆ, ರ‍್ಯಾಲಿಗಳ ವ್ಯವಸ್ಥೆ ನೋಡಿಕೊಂಡ ಅನುಭವ ಅಶೋಕ್ ಅವರಿಗಿದೆ. ಅದಕ್ಕೆ ತಕ್ಕಂತೆ ಈಗಿನ ಕಾರ್ಯಕ್ರಮವೂ ಅಚ್ಚುಕಟ್ಟುತನದಿಂದ ಕೂಡಿತ್ತು.

ತಂಡ ಶಕ್ತಿಯ ಪ್ರದರ್ಶನ

ಬಿಜೆಪಿ ಒಂದು ತಂಡವಾಗಿ ಈ ಸಮಾರಂಭವನ್ನು ಯಶಸ್ವಿಗೊಳಿಸಿದ್ದು ಕೂಡ ಗಮನಾರ್ಹ. ಅತ್ಯಂತ ಕಡಿಮೆ ಅವಧಿಯಲ್ಲಿ ಈ ಕಾರ್ಯಕ್ರಮದ ಸಿದ್ಧತೆ ಕೈಗೊಳ್ಳಲಾಗಿತ್ತು. ಯಾವುದೇ ಗೊಂದಲವಿಲ್ಲದಂತೆ ಕಾರ್ಯಕ್ರಮ ನಡೆಸಿರುವುದು ಬಿಜೆಪಿಯ ಸಾಂಘಿಕ ಶಕ್ತಿಯ ಪ್ರತೀಕದಂತಿತ್ತು.

ಮೋದಿ ಅಭಿನಂದನಾ ಸಮಾರಂಭದಲ್ಲಿ ನಾರಿಶಕ್ತಿ.



ಕಾರ್ಯಕ್ರಮದಲ್ಲಿ ಹಾಜರಿದ್ದ ಬೆಂಗಳೂರಿನ ಶಾಸಕರು, ಮುಖಂಡರು.

ಪ್ರಶ್ನೆ: ನಾನು ಕೆಮಿಕಲ್ ವ್ಯಾಪಾರ ಮಾಡಬಹುದೇ ತಿಳಿಸಿಕೊಡಿ ಗುರೂಜಿ.

ಜನ್ಮದಿನಾಂಕ: 26.01.1974 **ನಕ್ಷತ್ರ:** ಶತಭಿಷ

ಪರಿಹಾರ: ಈ ಸಂದರ್ಭದಲ್ಲಿ ಕುಂಭ ರಾಶಿಯವರು ಕಬ್ಬಿಣದ ಕಂಬವನ್ನೋ ಅಥವಾ ಕಂಬಿಗೆ ಕಟ್ಟಿದ ಸಿಮೆಂಟ್ ಕಂಬವನ್ನೋ ಹೋಲಿಸಿಕೊಂಡು ಬದುಕು ಸಾಗಿಸಬೇಕು. ಸಂಚಾರದ ಕಡೆಯ ಭಾಗದಲ್ಲಿ ಶನಿ ಇದ್ದಾನೆ. ಎಲ್ಲೇ ಹಣ ಹೂಡಿದರೂ, ಅಲ್ಲಿಯೇ ನಿಂತುಬಿಡಬಹುದು. ಹೀಗಾಗಿ ಈ ಸಮಯದಲ್ಲಿ ಯಾವುದೇ ಸಾಹಸಕ್ಕೆ ಕೈ ಹಾಕದಿರಿ. ಸದ್ಯ ಕಂಬದಂತೆ ಸ್ಥಿರವಾಗಿ, ಇದ್ದಲ್ಲೇ ಇರುವುದು ಉತ್ತಮ. ಅದರಲ್ಲಿಯೂ ಜೂನ್ 2ರವರೆಗಂತೂ ನಿಧಾನವಾಗಿ ಸಾಗಿರಿ. ಶನಿಯು 2027ರ ಜೂನ್‌ನಲ್ಲಿ ಮೀನ ರಾಶಿಯನ್ನು ದಾಟಿದ ಬಳಿಕ ಅಮೃತ ಘಳಿಗೆ ಶುರುವಾಗುತ್ತದೆ. ಶನಿಯನ್ನು ಪೂಜಿಸಿ. ಪ್ರದೋಷದಲ್ಲಿ ಶಿವನಿಗೆ ಪಂಚಾಮೃತ ಅಭಿಷೇಕ ಮಾಡಿಸಿ.

ನೀವೂ ಪ್ರಶ್ನೆ ಕೇಳಬಹುದು...
ವಾಟ್ಸ್ಆ್ಯಪ್ ಸಂಖ್ಯೆ: 6366422240

ಪಂಚಾಂಗ 11-05-2026

ಪರಾಭವ ನಾಮ ಸಂವತ್ಸರ
ಅಯನ: ಉತ್ತರಾಯಣ.
ಋತು: ವಸಂತ. **ಮಾಸ:** ವೈಶಾಖ.
ಪಕ್ಷ: ಕೃಷ್ಣ. **ಮಳೆ ನಕ್ಷತ್ರ:** ಭರಣಿ.
ನಿತ್ಯನಕ್ಷತ್ರ: ಶತಭಿಷ.
ತಿಥಿ: ನವಮಿ. **ಯೋಗ:** ಐಂದ್ರ.
ಕರಣ: ಗರಜ.
ವಾರ: ಸೋಮವಾರ.

ರಾಹು ಕಾಲ: **ಬೆ. 7.30 - 9.00**
ಗುಳಿಕ ಕಾಲ: **ಮ. 1.30-3.00**
ಯಮಗಂಡ ಕಾಲ: **ಬೆ. 10.30-12.00**
ಸೂರ್ಯ ಉದಯ: **ಬೆ.5.56**
ಸೂರ್ಯ ಅಸ್ತ: **ಸಂ.6.35**

ಡಿವೈಎಸ್‌ಪಿ, ಇನ್‌ಸ್ಪೆಕ್ಟರ್‌ಗಳ ವರ್ಗಾವಣೆ

ಬೆಂಗಳೂರು: ರಾಜ್ಯ ಪೊಲೀಸ್ ಇಲಾಖೆಗೆ ಮೇಜರ್ ಸರ್ಜರಿ ಮಾಡಿರುವ ಸರಕಾರ, 74 ಮಂದಿ (ಸಿವಿಲ್) ಡಿವೈಎಸ್‌ಪಿ ಹಾಗೂ 293 ಮಂದಿ (ಸಿವಿಲ್) ಇನ್‌ಸ್ಪೆಕ್ಟರ್‌ಗಳನ್ನು ವರ್ಗಾವಣೆ ಮಾಡಿ ಭಾನುವಾರ ಆದೇಶ ಹೊರಡಿಸಿದೆ.

ಬಾಂಬ್ ಬೆದರಿಕೆ ಕರೆ ಮಾಡಿದ್ದ ವ್ಯಕ್ತಿ ಪೊಲೀಸ್ ವಶಕ್ಕೆ | ಭದ್ರತಾ ಲೋಪದ ಆರೋಪ

ಪ್ರಧಾನಿ ಸಾಗುವ ಮಾರ್ಗದಲ್ಲಿ ಸ್ಫೋಟಕ ಪತ್ತೆ

■ **ವಿಕ ಸುದ್ದಿಲೋಕ** ಬೆಂಗಳೂರು/ಹಾರೋಹಳ್ಳಿ

ರಾಜ್ಯಕ್ಕೆ ಭಾನುವಾರ ಭೇಟಿ ಕೊಟ್ಟಿದ್ದ ಪ್ರಧಾನಿ ನರೇಂದ್ರ ಮೋದಿ ಅವರ ಪ್ರವಾಸದ ವೇಳೆ ಬೆಂಗಳೂರು ಹೊರವಲಯದ ಕಗ್ಗಲೀಪುರ ಗ್ರಾಮದ ತಾತಗುಣಿ ಬಳಿ ಜಿಲೆಟಿನ್ ಕಡ್ಡಿಗಳು ಪತ್ತೆಯಾಗಿದ್ದು, ಭದ್ರತಾ ಲೋಪದ ಆರೋಪ ಕೇಳಿ ಬಂದಿದೆ.

ಬೆಂಗಳೂರಿನ ಎಚ್‌ಎಎಲ್ ಮತ್ತು ಕನಕಪುರ ರಸ್ತೆಯ ಆರ್ಟ್ ಆಫ್ ಲಿವಿಂಗ್ ಸೆಂಟರ್‌ನಲ್ಲಿ ಭಾನುವಾರ ನಿಗದಿಯಾಗಿದ್ದ ಪ್ರಧಾನಿ ಕಾರ್ಯಕ್ರಮದ ಸ್ಥಳದಲ್ಲಿ ಬಾಂಬ್ ಸ್ಫೋಟಿಸುವುದಾಗಿ ವ್ಯಕ್ತಿಯೊಬ್ಬ ಪೊಲೀಸ್ ನಿಯಂತ್ರಣ ಕೊಠಡಿಗೆ ಕರೆ ಮಾಡಿ ಬೆದರಿಕೆ ಹಾಕಿ ಸಿಕ್ಕಿಬಿದ್ದಿದ್ದು, ಈ ವ್ಯಕ್ತಿಗೂ ಹಾಗೂ ಜಿಲೆಟಿನ್ ಕಡ್ಡಿ ಪತ್ತೆಯಾಗಿರುವ ಪ್ರಕರಣಕ್ಕೂ ನಂಟಿರುವ ಶಂಕೆ ವ್ಯಕ್ತವಾಗಿದೆ.

ಅಪರಿಚಿತ ವ್ಯಕ್ತಿಯ ಕರೆ ಬೆನ್ನಲ್ಲೇ ಪೊಲೀಸರು ತಪಾಸಣೆ ನಡೆಸಿದಾಗ ಎಚ್‌ಎಎಲ್ ಸಮೀಪ ಸ್ಫೋಟಕ ವಸ್ತುಗಳು ಪತ್ತೆಯಾಗಲಿಲ್ಲ. ಆದರೆ, ಆರ್ಟ್ ಆಫ್ ಲಿವಿಂಗ್‌ನಿಂದ ಸುಮಾರು ಒಂದೂವರೆ ಕಿ.ಮೀ. ದೂರದ ವಡೇರಹಳ್ಳಿ ಗೇಟ್ ಬಳಿ ರಸ್ತೆಯಿಂದ ಸುಮಾರು 30 ಮೀಟರ್ ದೂರದ ಕಾಂಪೌಂಡ್ ಬಳಿ ಅನುಮಾನಾಸ್ಪದವಾಗಿ ಬಿದ್ದಿದ್ದ ಪ್ಲಾಸ್ಟಿಕ್ ಕವರ್ ಭದ್ರತೆಗೆ ನಿಯೋಜಿಸಿದ್ದ ಕಾನ್‌ಸ್ಟೆಬಲ್ ಕಣ್ಣಿಗೆ ಬಿದ್ದಿತ್ತು. ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಿದಾಗ ಸ್ಥಳಕ್ಕೆ ಬಂದ ಬಾಂಬ್ ನಿಷ್ಕ್ರಿಯ ದಳ ಪರಿಶೀಲಿಸಿದಾಗ ಜಿಲೆಟಿನ್ ಕಡ್ಡಿಗಳು ಪತ್ತೆಯಾಗಿವೆ.

ಇದರ ಬೆನ್ನಲ್ಲೇ ಸ್ಥಳಕ್ಕೆ ದೌಡಾಯಿಸಿದ ಎಸ್‌ಪಿಜಿ, ಬಾಂಬ್ ನಿಷ್ಕ್ರಿಯ ದಳ, ಶ್ವಾನದಳ, ವಿಧಿ ವಿಜ್ಞಾನ ಪ್ರಯೋಗಾಲಯ (ಎಫ್‌ಎಸ್‌ಎಲ್) ಮತ್ತು ಪೊಲೀಸ್ ಸಿಬ್ಬಂದಿ ಆರ್ಟ್ ಆಫ್ ಲಿವಿಂಗ್ ಸುತ್ತಮುತ್ತ ಹಾಗೂ ಜಿಲೆಟಿನ್ ಕಡ್ಡಿಗಳು ಪತ್ತೆಯಾದ ಸ್ಥಳದಲ್ಲಿ ಮತ್ತೊಮ್ಮೆ ಸಂಪೂರ್ಣವಾಗಿ ಪರಿಶೀಲಿಸಿ ಯಾವುದೇ ಭದ್ರತಾ ಸಮಸ್ಯೆಯಿಲ್ಲ ಎಂಬುದನ್ನು ಖಾತ್ರಿಪಡಿಸಿಕೊಂಡರು. ಆ ಬಳಿಕವೇ ಮೋದಿ ಅವರು ಆರ್ಟ್ ಆಫ್ ಲಿವಿಂಗ್ ಕೇಂದ್ರಕ್ಕೆ ಬಂದು ಕಾರ್ಯಕ್ರಮದಲ್ಲಿ ಭಾಗಿಯಾದರು.



ಪ್ರಧಾನಿ ಹಾಗೂ ಅವರ ಬೆಂಗಾವಲು ಪಡೆ ಸಾಗುವ ರಸ್ತೆಯಿಂದ ಸ್ವಲ್ಪ ದೂರದಲ್ಲಿ ಜಿಲೆಟಿನ್ ಕಡ್ಡಿಗಳು ಪತ್ತೆಯಾಗಿವೆ. ಪೊಲೀಸರಿಗೆ ಕರೆ ಮಾಡಿದ್ದ ವ್ಯಕ್ತಿ ಈ ಬಗ್ಗೆ ತಿಳಿಸಿದ್ದ. ಜಿಲೆಟಿನ್ ಕಡ್ಡಿ ಇಟ್ಟವರು ಯಾರೆಂದು ಗೊತ್ತಾಗಿಲ್ಲ, ತನಿಖೆ ಮಾಡಲಾಗುತ್ತಿದೆ.

-ಎಸ್.ಗಿರೀಶ್ ಡಿಐಜಿ, ಕೇಂದ್ರ ವಲಯ

ವ್ಯಕ್ತಿ ವಶಕ್ಕೆ: ಬಾಂಬ್ ಸ್ಫೋಟದ ಬೆದರಿಕೆ ಕರೆಯ ಜಾಡು ಹಿಡಿದು ಲೋಹಿತ್ ಎಂಬಾತನನ್ನು ಬನ್ನೇರುಘಟ್ಟ ರಸ್ತೆಯ ಮಸೀದಿ ಬಳಿ ವಶಕ್ಕೆ ತೆಗೆದುಕೊಳ್ಳಲಾಗಿದೆ. ಆತ ಮಾನಸಿಕ ಅಸ್ವಸ್ಥನಂತೆ ವರ್ತಿಸುತ್ತಿದ್ದಾನೆ. ಈತ ಈ ಹಿಂದೆ ದೇಶದ ಗಣ್ಯ ವ್ಯಕ್ತಿಗಳು ಬೆಂಗಳೂರಿಗೆ ಆಗಮಿಸಿದ್ದಾಗಲೂ ಇದೇ ರೀತಿ ಬೆದರಿಕೆ ಕರೆ ಮಾಡಿದ್ದ ಎಂದು ಉನ್ನತ ಪೊಲೀಸ್ ಮೂಲಗಳು ಹೇಳಿವೆ.

ಕಾಗದದಲ್ಲಿ ಸುತ್ತಿತ್ತು: ಪ್ರಧಾನಿ ಸಾಗಬೇಕಿದ್ದ ರಸ್ತೆಯಿಂದ ಸುಮಾರು 25 ಅಡಿ ದೂರದಲ್ಲಿ ಸಿಕ್ಕ ಜಿಲೆಟಿನ್ ಕಡ್ಡಿಗಳನ್ನು ಕಾಗದಲ್ಲಿ ಸುತ್ತಿ ಬಿಸಾಡಲಾಗಿತ್ತು. ಜಿಲೆಟಿನ್ ಕಡ್ಡಿ ಹೊರತುಪಡಿಸಿ ಡಿಟೋನೇಟರ್ ಹಾಗೂ ಯಾವುದೇ ಸ್ಫೋಟಕ ವಸ್ತುಗಳು ಸಿಕ್ಕಿಲ್ಲ. ಈ ಪ್ರಕರಣಕ್ಕೂ ಲೋಹಿತ್‌ಗೂ ನಂಟು ಇದೆಯೇ ಎಂದು ಆರಂಭದಲ್ಲಿ ಅನುಮಾನವಿತ್ತು. ಆದರೆ, ವಿಚಾರಣೆ ಬಳಿಕ ಆತನಿಗೂ ಜಿಲೆಟಿನ್ ಕಡ್ಡಿಗಳು ಸಿಕ್ಕಿರುವುದಕ್ಕೂ ಸಂಬಂಧವಿಲ್ಲ ಎಂದು ಮೇಲ್ನೋಟಕ್ಕೆ ದೃಢಪಟ್ಟಿದೆ. ಸುಮಾರು 40 ವರ್ಷ ವಯಸ್ಸಿನ ಲೋಹಿತ್, ಕೋರಮಂಗಲ ನಿವಾಸಿ. ಅಜ್ಞಾತ ಸ್ಥಳದಲ್ಲಿ ಆತನ ವಿಚಾರಣೆ ನಡೆಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ಜಂಟಿ ತನಿಖೆ: ಪ್ರಕರಣ ಸಂಬಂಧ ಸ್ಫೋಟಕ ವಸ್ತುಗಳ ಕಾಯಿದೆಯಡಿ ಕಗ್ಗಲೀಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ. ಮೋದಿ ಅವರ ವಾಹನ ಸಾಗುವ ಮಾರ್ಗದಲ್ಲಿ ಎಸ್‌ಪಿಜಿ ಹಾಗೂ ರಾಜ್ಯದ ಪೊಲೀಸರು ಹಲವು ಬಾರಿ ತಪಾಸಣೆ ನಡೆಸಿದ ನಂತರವೂ ರಸ್ತೆ ಬದಿಯಲ್ಲಿ ಜಿಲೆಟಿನ್ ಕಡ್ಡಿ ತಂದು ಇಟ್ಟವರು ಯಾರು, ಇದರ ಹಿಂದಿನ ಉದ್ದೇಶವೇನು, ಭದ್ರತಾ ಲೋಪವಾಗಿದೆಯೇ ಸೇರಿದಂತೆ ಹಲವು ಆಯಾಮಗಳಲ್ಲಿ ಬೆಂಗಳೂರು ಆಗ್ನೇಯ ವಿಭಾಗ ಹಾಗೂ ಬೆಂಗಳೂರು ದಕ್ಷಿಣ ಜಿಲ್ಲಾ ಪೊಲೀಸರು ಜಂಟಿ ತನಿಖೆ ನಡೆಸುತ್ತಿದ್ದಾರೆ. ರಾಮನಗರ ಡಿವೈಎಸ್‌ಪಿ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ ಸಹ ರಚಿಸಲಾಗಿದೆ. ಜಿಲೆಟಿನ್ ಕಡ್ಡಿ ಪತ್ತೆಯಾಗಿರುವ ಸ್ಥಳದ ಸುತ್ತಮುತ್ತ ಹಾಗೂ ಬೆಂಗಳೂರು ದಕ್ಷಿಣ ಜಿಲ್ಲೆಯ ವಿವಿಧೆಡೆ ಇರುವ ಕಲ್ಲುಕ್ವಾರಿಗಳಲ್ಲಿನ ಜಿಲೆಟಿನ್ ದಾಸ್ತಾನು, ಜಿಲೆಟಿನ್ ಕಡ್ಡಿಗಳನ್ನು ಸರಬರಾಜು ಮಾಡಿರುವ ವಿತರಕರ ವಿವರ ಹಾಗೂ ಗೋದಾಮುಗಳಲ್ಲಿನ ದಾಸ್ತಾನಿನ ಬಗ್ಗೆ ಪೊಲೀಸರು ತನಿಖೆ ಮಾಡುತ್ತಿದ್ದಾರೆ.

ನಾಗಮಲೆಯಲ್ಲಿ ಚಿರತೆ ದಾಳಿ: ಬಾಲಕ ಬಲಿ

■ ಭಕ್ತರ ಗುಂಪಿನಲ್ಲಿದ್ದವನ್ನು ಕಾಡಿಗೆ ಎಳೆದೊಯ್ದ ಚಿರತೆ
■ ತಾಯಿಯ ಕಣ್ಣೆದುರೇ 10 ವರ್ಷದ ಬಾಲಕ ಸಾವು

■ **ವಿಕ ಸುದ್ದಿಲೋಕ** ಹನೂರು (ಚಾಮರಾಜನಗರ)

ಮಲೆ ಮಹದೇಶ್ವರ ಬೆಟ್ಟ ಸಮೀಪದ ನಾಗಮಲೆ ಮಾರ್ಗದಲ್ಲಿ ಭಾನುವಾರ ಬೆಳಗ್ಗೆ ಕುಟುಂಬದೊಂದಿಗೆ ಕಾಲ್ನಡಿಗೆಯಲ್ಲಿ ತೆರಳುತ್ತಿದ್ದ ಬಾಲಕನನ್ನು ಚಿರತೆ ಎಳೆದೊಯ್ದು ಕೊಂದು ಹಾಕಿದೆ. ಬೆಂಗಳೂರು ಮೂಲದ ಲಗ್ಗೆರೆಯ ಸುರೇಶ್ ಎಂಬುವವರ ಪುತ್ರ ಹರ್ಷಿತ್ (10) ಮೃತ ಬಾಲಕ.

ಶನಿವಾರ ಮಲೆಮಹದೇಶ್ವರ ಬೆಟ್ಟಕ್ಕೆ ಆಗಮಿಸಿದ್ದ ಸುರೇಶ್ ಅವರ ಕುಟುಂಬ ಭಾನುವಾರ ಬೆಳಗ್ಗೆ ನಾಗಮಲೆಯ ದರ್ಶನಕ್ಕಾಗಿ ಕಾಲ್ನಡಿಗೆಯಲ್ಲಿ ತೆರಳುತ್ತಿದ್ದಾಗ ಈ ದುರ್ಘಟನೆ ಸಂಭವಿಸಿದೆ. ಇಂಡಿಗನತ್ತ ಗ್ರಾಮದ ಸಮೀಪದ ಅರಣ್ಯ ಪ್ರದೇಶದಲ್ಲಿ 15ಕ್ಕೂ ಹೆಚ್ಚು ಭಕ್ತರು ಸಾಗುತ್ತಿದ್ದ ವೇಳೆ ಏಕಾಏಕಿ ಚಿರತೆ ದಾಳಿ ನಡೆಸಿ, ಬಾಲಕನನ್ನು ಕಾಡಿನೊಳಗೆ ಎಳೆದೊಯ್ದು ಕೊಂದು ಹಾಕಿದೆ. ಅರಣ್ಯ ಇಲಾಖೆ ಸಿಬ್ಬಂದಿ ಕಾಡಿನೊಳಗೆ ತೆರಳಿ ಬಾಲಕನ ಮೃತದೇಹವನ್ನು ಹೊರ ತಂದರು. ಘಟನೆ ಸಂಬಂಧ ಮಲೆ ಮಹದೇಶ್ವರಬೆಟ್ಟ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಘಟನಾ ಸ್ಥಳಕ್ಕೆ ಅಧಿಕಾರಿಗಳು ಭೇಟಿ ನೀಡಿದಾಗ ಬಾಲಕನ ತಾಯಿ ಪವಿತ್ರಾ ಅವರ ಆಕ್ರೋಶ ಮುಗಿಲು ಮುಟ್ಟಿತ್ತು. ''ನಿಮ್ಮ 20 ಲಕ್ಷ ರೂಪಾಯಿ ಪರಿಹಾರ ನಮಗೆ ಬೇಡ, ನನ್ನ ಮಗನನ್ನು ಬದುಕಿಸಿಕೊಡಿ,'' ಎಂದು ಕಣ್ಣೀರು ಹಾಕುತ್ತಾ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಪ್ರಸಂಗ ನೆರೆದಿದ್ದವರ ಕಣ್ಣಾಲಿಗಳನ್ನು ಒದ್ದೆ ಮಾಡಿತು.

ಮಲೆಮಹದೇಶ್ವರ ಬೆಟ್ಟ ಸಮೀಪದ ನಾಗಮಲೆ ಮಾರ್ಗದಲ್ಲಿ ಭಾನುವಾರ ಬೆಳಗ್ಗೆ ಚಿರತೆ ದಾಳಿಗೆ ಬಲಿಯಾದ ಬಾಲಕನ ಮೃತದೇಹವನ್ನು ಅರಣ್ಯ ಇಲಾಖೆ ಸಿಬ್ಬಂದಿ ಕಾಡಿನಿಂದ ಹೊತ್ತು ತಂದರು.

ಕೊಟ್ಟೂರಿನಿಂದ ಚಾಲನೆ | ತನಿಖೆಗೆ ಇ.ಡಿ, ಆದಾಯ ತೆರಿಗೆ ಇಲಾಖೆಗೆ ದೂರು ನೀಡಲು ಚಿಂತನೆ

20ರಿಂದ ಲೆಕ್ಕ ಸಂಗ್ರಹ ಅಭಿಯಾನ

■ **ವಿಕ ಸುದ್ದಿಲೋಕ** ದಾವಣಗೆರೆ

''ಹರಿಹರ ಪಂಚಮಸಾಲಿ ಪೀಠಕ್ಕೆ ಯಾರು ಎಷ್ಟು ದೇಣಿಗೆ ನೀಡಿದ್ದಾರೆ ಎಂಬುದರ ಲೆಕ್ಕ ಸಂಗ್ರಹ ಅಭಿಯಾನವನ್ನು, ಮೇ 20ರಿಂದ ಕೊಟ್ಟೂರಿನ ಕೊಟ್ಟೂರೇಶ್ವರ ದೇವಸ್ಥಾನದಿಂದ ಆರಂಭಿಸಲಾಗುವುದು,'' ಎಂದು ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ಲೆಕ್ಕ ಕೊಡಿ ಹೋರಾಟ ಸಮಿತಿ ಅಧ್ಯಕ್ಷ ಎಂ.ಜಿ. ಪರಮೇಶ್ವರಗೌಡ ಹಾಗೂ ಮಾಜಿ ಶಾಸಕ ಎಚ್.ಎಸ್. ಶಿವಶಂಕರ್ ತಿಳಿಸಿದರು.

''ಪೀಠದ ಧರ್ಮದರ್ಶಿಗಳು ಆಗಮಿಸಿ ವಚನಾನಂದ ಸ್ವಾಮೀಜಿ ಅವರನ್ನು ಉಚ್ಚಾಟಿಸಿರುವ ನಿರ್ಣಯ ವಾಪಸ್ ಪಡೆಯಬೇಕು. ಬಿ.ಸಿ. ಉಮಾಪತಿ ಹೊರತುಪಡಿಸಿ ಉಳಿದ ಟ್ರಸ್ಟಿಗಳು ಹೊರಬರುವ ಷರತ್ತಿಗೆ ಬದ್ಧರಾಗಿ ಹಾಗೂ ಲೆಕ್ಕ ಕೊಟ್ಟಿರುವುದರಲ್ಲಿ ಅಲ್ಪಸ್ವಲ್ಪ ತಪ್ಪಾಗಿದೆ ಎಂಬುದನ್ನು ಒಪ್ಪಿಕೊಳ್ಳಬೇಕು. ನಮ್ಮ ಸಮಿತಿ ಬಗ್ಗೆ ಮಾಡಿರುವ ಅವಹೇಳನಕ್ಕೆ ಕ್ಷಮೆ ಕೇಳಿದರೆ ಪಂಚಮಸಾಲಿ ಪೀಠದ ಈ ಪ್ರಕರಣವನ್ನು ಇತ್ಯರ್ಥ ಪಡಿಸುವ ಬಗ್ಗೆ ನಿರ್ಧರಿಸಲಾಗುವುದು,'' ಎಂದು ಜಂಟಿ ಸುದ್ದಿಗೋಷ್ಠಿಯಲ್ಲಿ ಹೇಳಿದರು.

''ಟ್ರಸ್ಟಿಗಳು ಕ್ಷಮೆ ಯಾಚಿಸದಿದ್ದರೆ, ಈ ಬಗ್ಗೆ ತನಿಖೆ ನಡೆಸುವಂತೆ ಜಾರಿ ನಿರ್ದೇಶನಾಲಯ ಮತ್ತು ಆದಾಯ ತೆರಿಗೆ ಇಲಾಖೆಗೆ ಮೇ 21ರ ಬಳಿಕ ದೂರು ನೀಡಲಾಗುವುದು. ನಂತರದಲ್ಲಿ ನ್ಯಾಯಾಂಗ ಹೋರಾಟ ನಡೆಸಲು ಸಿದ್ಧರಿದ್ದೇವೆ,'' ಎಂದು ಎಚ್ಚರಿಕೆ ನೀಡಿದರು.

''ಇತ್ತೀಚೆಗೆ ಪೀಠದ ಆವರಣದಲ್ಲಿ ಟ್ರಸ್ಟಿಗಳು ಲೆಕ್ಕ ಕೊಡಲು ಆಯೋಜಿಸಿದ್ದ ಸಭೆಗೆ ನಮ್ಮನ್ನು ಆಹ್ವಾನಿಸಿರಲಿಲ್ಲ, ಟ್ರಸ್ಟಿಗಳು ಕೊಟ್ಟಿರುವ 27.61 ಕೋಟಿ ರೂ.ಗಳ ಲೆಕ್ಕದಲ್ಲಿ ದೇಣಿಗೆಯ ಲೆಕ್ಕ ಇಲ್ಲ ಎಂದು ಹಲವರು ಫೋನ್ ಮಾಡಿ ತಿಳಿಸಿದ್ದರಿಂದಲೇ 1.25 ಕೋಟಿ ರೂ. ವ್ಯತ್ಯಾಸ ಬರುತ್ತಿದೆ. ಅಲ್ಲದೆ, ಲಿಖಿತ ದಾಖಲೆ ಮೂಲಕ ಏಕೆ ಲೆಕ್ಕ ಕೊಡಲಿಲ್ಲ? ಇದರಿಂದಲೇ ಇದು ಸುಳ್ಳು ಲೆಕ್ಕ ಎಂದು ಗೊತ್ತಾಗುತ್ತಿದೆ. ತಮ್ಮ ಕಪ್ಪು ಹಣವನ್ನು ಬಿಳಿಯಾಗಿಸಿಕೊಳ್ಳಲು ಕೆಲ ಟ್ರಸ್ಟಿಗಳು ಹರಿಹರ ಪಂಚಮಸಾಲಿ ಪೀಠವನ್ನು ಬಳಸಿಕೊಳ್ಳುತ್ತಿರುವ ಗುಮಾನಿ ಇದೆ. ಹಾಗಾಗಿಯೇ ಲೆಕ್ಕ ಸಂಗ್ರಹ ಅಭಿಯಾನ ಆರಂಭಿಸುತ್ತಿದ್ದೇವೆ. ಇದಕ್ಕಾಗಿಯೇ ತಾಲೂಕುವಾರು 20 ಜನರ ಸಮಿತಿ ರಚಿಸಲಾಗಿದೆ'' ಎಂದು ಮಾಹಿತಿ ನೀಡಿದರು.

''ಟ್ರಸ್ಟ್‌ನ ಧರ್ಮದರ್ಶಿಗಳ ಮನವಿಯನ್ನು ಪುರಸ್ಕರಿಸಿ ಮಠದ ಸುತ್ತ ನಿಷೇಧಾಜ್ಞೆ ಜಾರಿ ಮಾಡಿರುವುದು ಏಕಪಕ್ಷೀಯ ಕ್ರಮವಾಗಿದ್ದು, ಇದನ್ನು ಕೂಡಲೇ ಜಿಲ್ಲಾಧಿಕಾರಿಗಳು ತೆರವು ಮಾಡಬೇಕು,'' ಎಂದು ಮಾಜಿ ಶಾಸಕ ಎಚ್.ಎಸ್. ಶಿವಶಂಕರ್ ಒತ್ತಾಯಿಸಿದರು.

ಪಂಚಮಸಾಲಿ ಶ್ರೀಗೆ ಭದ್ರತೆ ಒದಗಿಸಲು ಸಿಎಂಗೆ ಮನವಿ

ದಾವಣಗೆರೆ: ಹರಿಹರ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ವಿಷಯದಲ್ಲಿ ಗೊಂದಲ ಉಂಟಾಗಿರುವ ಹಿನ್ನೆಲೆಯಲ್ಲಿ ವಚನಾನಂದ ಸ್ವಾಮೀಜಿ ಅವರಿಗೆ ಬೆದರಿಕೆಯಿದ್ದು, ಶ್ರೀಗಳಿಗೆ ಭದ್ರತೆ ನೀಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಪಂಚಮಸಾಲಿ ಸಮುದಾಯದ ಮುಖಂಡರು ಮನವಿ ಮಾಡಿದ್ದಾರೆ. ''ಏ.13ರಂದು ಪಂಚಮಸಾಲಿ ಪೀಠದ ಟ್ರಸ್ಟ್‌ನ ಕೆಲ ಸದಸ್ಯರು ಪೊಲೀಸ್ ರಕ್ಷಣೆಯಲ್ಲಿ ಮಠಕ್ಕೆ ಬಂದು ಸಭೆ ನಡೆಸಿ, ಶ್ರೀಗಳ ವಿರುದ್ಧ ಇಲ್ಲಸಲ್ಲದ ಆರೋಪ ಮಾಡಿದ್ದರಿಂದ ಅನಾವಶ್ಯಕ ಗೊಂದಲ ಉಂಟಾಗಿದೆ. ಟ್ರಸ್ಟ್‌ನ ಸದಸ್ಯರಿಗೆ ಯಾವುದೇ ಅಧಿಕಾರ ಇಲ್ಲದಿದ್ದರೂ ಪೀಠದಿಂದ ಶ್ರೀಗಳನ್ನು ಉಚ್ಚಾಟನೆ ಮಾಡಿದ್ದಲ್ಲದೆ, ಸ್ವಾಮೀಜಿ ಅವರನ್ನು ಒತ್ತಾಯ ಪೂರ್ವಕವಾಗಿ ಹೊರ ಹಾಕುವುದಾಗಿ ಬೆದರಿಕೆ ಹಾಕಿದ್ದಾರೆ. ಹಾಗಾಗಿ ಸ್ವಾಮೀಜಿಯವರಿಗೆ ಭದ್ರತೆ ನೀಡಬೇಕು,'' ಎಂದು ಒತ್ತಾಯಿಸಿ ವಿಧಾನ ಪರಿಷತ್ ಮಾಜಿ ಸದಸ್ಯ ಸೋಮಣ್ಣ ಬೇವಿನಮರದ್, ಮಾಜಿ ಶಾಸಕರಾದ ಎಚ್.ಎಸ್. ಶಿವಶಂಕರ್, ಅರುಣ್‌ಕುಮಾರ್ ಪೂಜಾರ್, ಮಾಜಿ ಮೇಯರ್ ಬಿ.ಜಿ. ಅಜಯ್‌ಕುಮಾರ್, ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ಲೆಕ್ಕಕೊಡಿ ಹೋರಾಟ ಸಮಿತಿ ಅಧ್ಯಕ್ಷ ಎಂ.ಜಿ. ಪರಮೇಶ್ವರಗೌಡ ಅವರು ಸಿಎಂ, ಗೃಹ ಸಚಿವರಿಗೆ ಮನವಿ ಪತ್ರ ರವಾನಿಸಿದ್ದಾರೆ.

ಮಲೆ ಮಾದಪ್ಪನ ಭಕ್ತರಿಗಿಲ್ಲ ಸುರಕ್ಷತೆ

ಮರುಕಳಿಸಿದ ಚಿರತೆ ದಾಳಿ | ಯಾತ್ರಾರ್ಥಿಗಳಿಗೆ ಪರ್ಯಾಯವೇನು?

■ **ಫಾಲಲೋಚನ ಆರಾಧ್ಯ**
ಚಾಮರಾಜನಗರ
phalalochanaradhya.ks@timesofindia.com

ಮಲೆ ಮಹದೇಶ್ವರಬೆಟ್ಟ ವನ್ಯಧಾಮದ ವ್ಯಾಪ್ತಿಯಲ್ಲಿ ಮಾದಪ್ಪನ ಭಕ್ತರ ಮೇಲೆ ಚಿರತೆ ದಾಳಿ ಮರುಕಳಿಸಿದ್ದು, ಪಾದಯಾತ್ರಿಗಳ ಸುರಕ್ಷತೆಗೆ ಪರ್ಯಾಯವೇನು ಎಂಬ ಪ್ರಶ್ನೆ ಮೂಡಿದೆ.

ಕಳೆದ ಜನವರಿಯಲ್ಲಿ ಮಲೆ ಮಹದೇಶ್ವರ ಬೆಟ್ಟಕ್ಕೆ ಪಾದಯಾತ್ರೆ ಹೊರಟಿದ್ದ ಮಂಡ್ಯ ಮೂಲದ ಯುವಕನನ್ನು ಚಿರತೆ ಎಳೆದೊಯ್ದು ಕೊಂದು ಹಾಕಿತ್ತು. ಆದಾದ ಕೆಲವೇ ದಿನಗಳಲ್ಲೇ ಬಾಲಕನ ಮೇಲೆ ಚಿರತೆ ದಾಳಿಗೆ ಯತ್ನಿಸಿತ್ತು. ಈಗ ನಾಗಮಲೆಗೆ ಹೊರಟಿದ್ದ ಭಕ್ತರ ಗುಂಪಿನಲ್ಲಿದ್ದ ಬಾಲಕನನ್ನು ಚಿರತೆ ಎಳೆದೊಯ್ದು ಕೊಂದು ಹಾಕಿದೆ. ಇಂಥ ಘಟನೆಗಳು ಪದೇಪದೆ ನಡೆಯುತ್ತಿದ್ದರೆ ಭಕ್ತರಿಗೆ ಸುರಕ್ಷತೆ ಹೇಗೆ? ಶಾಶ್ವತ ಪರ್ಯಾಯ ಕ್ರಮಗಳನ್ನು ಸರಕಾರ ರೂಪಿಸಬೇಕಿದೆ ಎಂಬ ಒತ್ತಾಯ ಕೇಳಿ ಬಂದಿದೆ.

ಶಿವರಾತ್ರಿ ವೇಳೆ ಯುವಕನನ್ನು ಕೊಂದು ಹಾಕಿದ್ದ ಚಿರತೆಯನ್ನು ಅರಣ್ಯ ಇಲಾಖೆಯವರು ಸೆರೆ ಹಿಡಿದಿದ್ದರು. ಈ ಘಟನೆ ನಂತರ ಪಾದಯಾತ್ರೆ ಸಮಯ ನಿಗದಿಯಾಗಿತ್ತು. ಜಾತ್ರೆ ವೇಳೆಯಲ್ಲಿ ಇಲಾಖೆ ಸಿಬ್ಬಂದಿ ಬಂದೋಬಸ್ತ್‌ನಲ್ಲಿ ಪಾದಯಾತ್ರಿಗಳನ್ನು ಕರೆದೊಯ್ಯಲಾಗಿತ್ತು. ಆದರೆ, ಕಾಲಕ್ರಮೇಣ ಸಮಯ ನಿಗದಿ ಇಲ್ಲವಾಯಿತೇ? ಇಲಾಖೆ ತಾತ್ಸಾರ ಮಾಡಿತೇ? ಇದು ಇಂದಿನ ದಾಳಿಗೆ ಕಾರಣವಾಯಿತೆ ಎಂಬ ಪ್ರಶ್ನೆ ಎದ್ದಿದೆ.

ಸಂಘರ್ಷ ಹೆಚ್ಚಬಹುದು: ಬೇಸಿಗೆ ಸಂದರ್ಭದಲ್ಲಿ ಅರಣ್ಯದೊಳಗೆ ನೀರಿನ ಮೂಲಗಳು ಬತ್ತಿದಾಗ ಅಥವಾ ಆಹಾರದ ಕೊರತೆಯಾದಾಗ ವನ್ಯಜೀವಿಗಳು ಜನನಿಬಿಡ ಪಾದಚಾರಿ ಮಾರ್ಗಗಳಿಗೆ ಲಗ್ಗೆ ಇಡುತ್ತವೆ. ಹಾಗಾಗಿ ಪಾದಯಾತ್ರಿಗಳ ಮೇಲೆ ಇಂಥ ದಾಳಿ ಹೆಚ್ಚಾಗಬಹುದಾದ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಅದರಲ್ಲೂ ವಿಶೇಷವಾಗಿ ಚಿರತೆಗಳು ರಾತ್ರಿ ಮತ್ತು ಮುಂಜಾನೆ ವೇಳೆಯಲ್ಲಿ ಹೆಚ್ಚು ಸಕ್ರಿಯವಾಗಿರುತ್ತವೆ. ಯಾತ್ರಾರ್ಥಿಗಳು ಬಿಸಿಲಿನ ತಾಪ ತಪ್ಪಿಸಲು ಮುಂಜಾನೆ ಅಥವಾ ರಾತ್ರಿ ವೇಳೆಯಲ್ಲೂ ಕಾಲ್ನಡಿಗೆಯಲ್ಲಿ ಸಾಗುತ್ತಾರೆ.

ಸಾಂದರ್ಭಿಕ ಚಿತ್ರ

ಮುಂದೆ ಇಂಥ ಘಟನೆಗಳು ಮರುಕಳಿಸದಂತೆ ಶಾಶ್ವತವಾದ ಪರಿಹಾರೋಪಾಯಗಳ ಬಗ್ಗೆ ಸರಕಾರದ ಮಟ್ಟದಲ್ಲಿ ಚರ್ಚಿಸಲಾಗುವುದು. ಭಕ್ತರಿಗೆ ಸೂಕ್ತ ರಕ್ಷಣೆ ನೀಡುವಂತೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದೇನೆ. ರಾತ್ರಿ , ಬೆಳಗಿನ ಜಾವ ಪ್ರಾಣಿಗಳ ಚಲನವಲನ ಹೆಚ್ಚಿದ್ದು, ಈ ವೇಳೆ ಭಕ್ತರು ಪಾದಯಾತ್ರೆ ಕೈಗೊಳ್ಳದಂತೆ ಜಾಗೃತಿ ಮೂಡಿಸಲಾಗುವುದು.

-ಎಂ.ಆರ್.ಮಂಜುನಾಥ್ ಶಾಸಕ, ಹನೂರು

ಭಕ್ತಿ ಮತ್ತು ಪ್ರಕೃತಿ ಎರಡೂ ಪೂರಕವಾಗಿರಬೇಕೇ ಹೊರತು ಸಂಘರ್ಷಕ್ಕೀಡಾಗಬಾರದು. ಮಲೆ ಮಹದೇಶ್ವರ ಬೆಟ್ಟದ ಆಡಳಿತ ಮಂಡಳಿ ಮತ್ತು ಅರಣ್ಯ ಇಲಾಖೆ ಸಮನ್ವಯತೆಯಿಂದ ಕೆಲಸ ಮಾಡಿ, ನಾಗಮಲೆ ಮಾರ್ಗವನ್ನು ಸುರಕ್ಷಿತವಾಗಿಸದಿದ್ದರೆ ಭಕ್ತರಲ್ಲಿ ಭಯ ಮನೆ ಮಾಡುವುದು ಖಚಿತ. ಪ್ರಾಣ ಹೋದ ಮೇಲೆ ಪರಿಹಾರ ನೀಡುವುದಕ್ಕಿಂತ, ಮುನ್ನೆಚ್ಚರಿಕೆ ಕ್ರಮಗಳೇ ಇಂದಿನ ತುರ್ತು ಅಗತ್ಯ.

-ಮುತ್ತಯ್ಯ ಮುಖಂಡ, ಬುಡಕಟ್ಟು ಅಭಿವೃದ್ಧಿ ಸಂಘ

ಸಮಯ ನಿಗದಿ, ಬಂದೋಬಸ್ತ್

ಮಲೆ ಮಹದೇಶ್ವರಬೆಟ್ಟ ವನ್ಯಧಾಮ ದಟ್ಟವಾಗಿದ್ದು, ಬೆಳಗ್ಗೆ 7ರಿಂದ ಸಂಜೆ 5ರವರೆಗೆ ಮಾತ್ರ ಪಾದಯಾತ್ರೆಗೆ ಅವಕಾಶ ನೀಡಲಾಗಿತ್ತು. ನಂತರದಲ್ಲಿ ಅರಣ್ಯದೊಳಗಿನ ಪಾದಯಾತ್ರೆಯನ್ನು ಪೂರ್ಣ ನಿರ್ಬಂಧಿಸಲಾಗಿತ್ತು. ಆದರೆ, ಇದು ಒಂದೆರಡು ವಾರಕ್ಕೆ ಸೀಮಿತವಾಯಿತು. ಸೂಕ್ಷ್ಮ ಪ್ರದೇಶಗಳಲ್ಲಿ ಮತ್ತು ಚಿರತೆ ದಾಳಿ ನಡೆದ ಜಾಗಗಳಲ್ಲಿ ಅರಣ್ಯ ಇಲಾಖೆಯ ಸಿಬ್ಬಂದಿ ಗಸ್ತು ತಿರುಗಬೇಕು. ಈ ಕ್ರಮ ಸಹ ಸ್ವಲ್ಪ ದಿನಗಳು ಮಾತ್ರ ಪಾಲನೆಯಾಯಿತು.

Published for the Proprietors, Metropolitan Media Company Limited, by Lokesh K V at No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011. (Ph: 08040877666) and printed by him at Bennett Coleman & Co Ltd., The Times of India Press, No. 9/10/11A, 4th Main, KIADB Bommasandra Industrial Area, Anekal Taluk, Bangalore 560 099 (Ph: 08042200500) Regd. Office: No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011 (Ph: 08040877666), Editor: Sudarshan Channangihalli – responsible for selection of news under PRB Act. ©All Rights Reserved. Reproduction in whole or in part without written permission is prohibited.
RNI No. 71653/99
Vol. 27 Issue No. 130

ಬೆಂಗಳೂರು ಆಧ್ಯಾತ್ಮಿಕ ನಗರಿಯೂ ಹೌದು

ಪ್ರಧಾನಿ ಮೋದಿ ಬಣ್ಣನೆ | ಆರ್ಟ್ ಆಫ್ ಲಿವಿಂಗ್‌ನ ಧ್ಯಾನ ಮಂದಿರ ಲೋಕಾರ್ಪಣೆ



ಬೆಂಗಳೂರಿನಲ್ಲಿ ಭಾನುವಾರ ಆರ್ಟ್ ಆಫ್ ಲಿವಿಂಗ್‌ನ ಧ್ಯಾನ ಮಂದಿರ ಉದ್ಘಾಟನಾ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಶ್ರೀಶ್ರೀ ರವಿಶಂಕರ ಗುರೂಜಿ ನೆನಪಿನ ಕಾಣಿಕೆ ನೀಡಿದರು.

ಧ್ಯಾನ ಮಂದಿರ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಭಕ್ತರ ಸಮೂಹ.

■ **ವಿಕ ಸುದ್ದಿಲೋಕ** ಬೆಂಗಳೂರು

ಪಿಶಿಷ್ಟವಾತಾವರಣ ಹೊಂದಿರುವ ಬೆಂಗಳೂರು ನಗರವು ಸಾಫ್ಟ್‌ವೇರ್ ಮತ್ತು ಸೇವೆಗಳಿಗೆ ಮಾತ್ರ ಜಾಗತಿಕ ಮನ್ನಣೆ ಪಡೆದಿಲ್ಲ. ಇದು ಸಾಂಸ್ಕೃತಿಕ ಅಸ್ಮಿತೆ ಮತ್ತು ಆಧ್ಯಾತ್ಮಿಕ ಪ್ರಜ್ಞೆಯನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯುವಲ್ಲಿ ಹೆಸರಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಬಣ್ಣಿಸಿದರು.

ಬೆಂಗಳೂರಿನ ಕನಕಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ಶ್ರೀಶ್ರೀ ರವಿಶಂಕರ್ ಗುರೂಜಿ ಅವರ 70ನೇ ಜನ್ಮ ದಿನಾಚರಣೆ ಹಾಗೂ ಸಂಸ್ಥೆಯ 45ನೇ ವಾರ್ಷಿಕೋತ್ಸವ ಸಂಭ್ರಮದಲ್ಲಿ ಪಾಲ್ಗೊಂಡು ನೂತನವಾಗಿ ನಿರ್ಮಿಸಲಾದ ಭವ್ಯ 'ದಿವ್ಯ ಧ್ಯಾನ ಮಂದಿರ' ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ಸಮಗ್ರ ಅಭಿವೃದ್ಧಿಗೆ ಆರ್ಟ್ ಆಫ್ ಲಿವಿಂಗ್‌ನಂತಹ ಸಂಸ್ಥೆಗಳ ಪಾತ್ರ ನಿರ್ಣಾಯಕ

''ಸೇವೆಯೇ ಪರಧರ್ಮ. ನಮ್ಮ ಸಮಾಜದಲ್ಲಿ ಅದು ಅಂತರ್ಗತವಾಗಿದೆ. ಸ್ವಚ್ಛ ಭಾರತ ಕಾರ್ಯಕ್ರಮ ಕೇವಲ ಸರಕಾರದ ಕ್ರಮವಲ್ಲ, ಜನರ ಜೀವನದ ಸ್ವಾಭಾವಿಕ ಅಂಗವಾಗಿದೆ. ಭಾರತದ ಸಮಗ್ರ ಅಭಿವೃದ್ಧಿಗೆ ಆರ್ಟ್ ಆಫ್ ಲಿವಿಂಗ್‌ನಂತಹ ಸಂಸ್ಥೆಗಳು ನಿರ್ಣಾಯಕ ಪಾತ್ರ ವಹಿಸುತ್ತಿವೆ,'' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

''ರೈತರನ್ನು ನೈಸರ್ಗಿಕ ಕೃಷಿ ಪದ್ಧತಿಗಳತ್ತ ಆಕರ್ಷಿತರಾಗುವಂತೆ ಮಾಡುವುದರ ಜತೆಗೆ, ಪರಿಸರ ಸಂರಕ್ಷಣೆ, ಸುಸ್ಥಿರ ಕೃಷಿ, ರಾಸಾಯನಿಕಗಳಿಂದ ಭೂಮಿತಾಯಿಯನ್ನು ಸಂರಕ್ಷಿಸುವ ಕೆಲಸವನ್ನು ಆರ್ಟ್ ಆಫ್ ಲಿವಿಂಗ್ ಮಾಡುತ್ತಿದೆ,'' ಎಂದು ಹೇಳಿದರು.

ಎಒಎಲ್ ಕಾರ್ಯಕ್ಕೆ ಶ್ಲಾಘನೆ: ''ಯೋಗ, ಧ್ಯಾನ ಮತ್ತು ಪ್ರಾಣಾಯಾಮದ ಆಳವಾದ ಬೇರುಗಳು ಭಾರತದ ಮೌಲ್ಯಗಳ ಅವಿಭಾಜ್ಯ ಅಂಗಗಳಾಗಿವೆ. ಭಾರತದ ಆಧ್ಯಾತ್ಮಿಕ ಪರಂಪರೆ ಜಾಗತಿಕ ಪ್ರಭಾವ ಬೀರುತ್ತಿದೆ. ಇಂದು ಪ್ರಪಂಚದಾದ್ಯಂತ ಜನರು ಭಾರತದ ಆಧ್ಯಾತ್ಮಿಕ ಮೌಲ್ಯಗಳಿಂದ ಪ್ರಭಾವಿತರಾಗಿದ್ದಾರೆ ಮತ್ತು ಈ ಪ್ರಾಚೀನ ಮೌಲ್ಯಗಳಿಂದ ಭಾರತದ ಅನೇಕ ಸಂಸ್ಥೆಗಳೂ ಸ್ಫೂರ್ತಿ ಪಡೆಯುತ್ತಿವೆ. ಇದರಿಂದ ಪ್ರೇರಿತರಾಗಿ ಗುರೂಜಿ 45 ವರ್ಷಗಳ ಹಿಂದೆ ಆರ್ಟ್ ಆಫ್ ಲಿವಿಂಗ್‌ನ ಬೀಜ ಬಿತ್ತಿದರು. ಈಗ ಬೃಹದಾಕಾರವಾಗಿ ಬೆಳೆದಿದೆ. ಅದರ ಸಾವಿರಾರು ಶಾಖೆಗಳು ವಿಶ್ವದಾದ್ಯಂತ ಅಸಂಖ್ಯಾತ ಜನರ ಜೀವನವನ್ನು ಸ್ಪರ್ಶಿಸುತ್ತಿವೆ,'' ಎಂದು ಮೋದಿ ಹೇಳಿದರು.

ಸದೃಢ ಯುವ ಜನತೆ ಬೆಳೆಸಲು ಕರೆ: ''ಭಾರತದ ಅಭಿವೃದ್ಧಿ ಹೊಂದಿದ ಭವಿಷ್ಯವು ಮಾನಸಿಕವಾಗಿ ಶಾಂತಿಯುತ, ಸಾಮಾಜಿಕವಾಗಿ ಜವಾಬ್ದಾರಿಯುತ ಮತ್ತು ಸಾಮಾಜಿಕ ಅಗತ್ಯಗಳಿಗೆ ಸೂಕ್ಷ್ಮವಾಗಿರುವ ಯುವಕರನ್ನು ಬೆಳೆಸುವುದರ ಮೇಲೆ ಅವಲಂಬಿತವಾಗಿದೆ. ಈ ನಿಟ್ಟಿನಲ್ಲಿ ಕೇಂದ್ರ ಸರಕಾರ ಯುವ ಸಬಲೀಕರಣಕ್ಕೆ ಆದ್ಯತೆ ನೀಡುತ್ತಿದೆ,'' ಎಂದು ಪ್ರಧಾನಿ ಹೇಳಿದರು.

''ವೈಜ್ಞಾನಿಕ ಪ್ರಗತಿ ಮತ್ತು ನಾವೀನ್ಯತೆಯಿಂದ ನಡೆಸಲ್ಪಡುವ ಇಂದಿನ ತ್ವರಿತ ಜಾಗತಿಕ ಪರಿವರ್ತನೆಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾಗಿದೆ. ಡಿಜಿಟಲ್ ಪಾವತಿ, ಮೂಲಸೌಕರ್ಯ ವಿಸ್ತರಣೆ ಮತ್ತು ನವೋದ್ಯಮ ಪೂರಕ ವ್ಯವಸ್ಥೆಗಳಲ್ಲಿ ನಿರ್ದಿಷ್ಟ ಸಾಧನೆಗಳೊಂದಿಗೆ ಹಲವು ಕ್ಷೇತ್ರಗಳಲ್ಲಿ ಭಾರತ ಮುಂಚೂಣಿಯಲ್ಲಿದೆ. ಯುವಕರು ಬಾಹ್ಯಾಕಾಶ ತಂತ್ರಜ್ಞಾನದಲ್ಲಿ ಪ್ರವರ್ತಕರಾಗಿದ್ದಾರೆ. ಭಾರತವು ಈ ಬದಲಾವಣೆಯಲ್ಲಿ ಭಾಗವಹಿಸುವುದಷ್ಟೇ ಅಲ್ಲ, ಅನೇಕ ಕ್ಷೇತ್ರಗಳಲ್ಲಿಯೂ ಮುಂಚೂಣಿಯಲ್ಲಿದೆ,'' ಎಂದರು.

''ಸಂಪರ್ಕ, ಬಂಧುತ್ವ ಮತ್ತು ಸಾಮೂಹಿಕ ಜವಾಬ್ದಾರಿಯನ್ನು ಬೆಳೆಸುವಲ್ಲಿ ಆಧ್ಯಾತ್ಮಿಕ ಯೋಗ ಕ್ಷೇಮ, ಮಾನಸಿಕ ಆರೋಗ್ಯ, ಯೋಗ ಮತ್ತು ಧ್ಯಾನದ ಮೇಲೆ ಕೆಲಸ ಮಾಡುವ ಸಂಸ್ಥೆಗಳು ನಿರ್ಣಾಯಕ ಪಾತ್ರ ವಹಿಸುತ್ತಿವೆ. ಮಾನಸಿಕವಾಗಿ ಶಾಂತಿಯುತ, ಸಾಮಾಜಿಕವಾಗಿ ಜವಾಬ್ದಾರಿಯುತ ಮತ್ತು ಸಮಾಜದ ಬಗ್ಗೆ ಸೂಕ್ಷ್ಮತೆ ಹೊಂದಿರುವ ಯುವಕರ ಮೂಲಕ ವಿಕಸಿತ ಭಾರತ ನಿರ್ಮಿಸಲಾಗುವುದು,'' ಎಂದು ಪ್ರಧಾನಿ ಪ್ರತಿಪಾದಿಸಿದರು.

ಪ್ರೀತಿ, ಕರುಣೆ ನಮ್ಮನ್ನು ರಕ್ಷಿಸಬಲ್ಲವು

''ಆಧ್ಯಾತ್ಮಿಕತೆಯೇ ಬದುಕಿನ ದಾರಿ, ಮನುಷ್ಯನು ಬಾಹ್ಯ ಸುಖಗಳಿಗಿಂತ ಒಳಗಿನ ಶಾಂತಿಯನ್ನು ಕಂಡುಕೊಳ್ಳಬೇಕು. ಧ್ಯಾನ ಎಂಬುದು ಕೇವಲ ಕಣ್ಣುಮುಚ್ಚಿ ಕುಳಿತುಕೊಳ್ಳುವುದಲ್ಲ, ಅದು ನಮ್ಮ ಆತ್ಮದೊಂದಿಗೆ ಅನುಸಂಧಾನ ಮಾಡುವ ಪ್ರಕ್ರಿಯೆ. ಜಗತ್ತು ಇಂದು ಯುದ್ಧ ಮತ್ತು ಆತಂಕಗಳ ಸುಳಿಯಲ್ಲಿದೆ. ಇಂತಹ ಸಮಯದಲ್ಲಿ ಪ್ರೀತಿ ಮತ್ತು ಕರುಣೆ ಮಾತ್ರ ನಮ್ಮನ್ನು ರಕ್ಷಿಸಬಲ್ಲವು,'' ಎಂದು ಆರ್ಟ್ ಆಫ್ ಲಿವಿಂಗ್‌ನ ಶ್ರೀ ಶ್ರೀ ರವಿಶಂಕರ್ ಗುರೂಜಿ ಹೇಳಿದರು. ''ಈ ಹಿಂದೆ ದೇಶವನ್ನು ಕಾಡುತ್ತಿದ್ದ ಭಯೋತ್ಪಾದನೆಯ ಕರಿನೆರಳು ದೂರವಾಗಿದ್ದು, ಇಂದು ಜನತೆ ಸುರಕ್ಷಿತ ಭಾವನೆಯಲ್ಲಿದ್ದಾರೆ. ರಾಮಮಂದಿರ ನಿರ್ಮಾಣಕ್ಕೆ ಶಿಲೆ ಮತ್ತು ಶಿಲ್ಪಿಯು ಕೊಡುಗೆ ಕರ್ನಾಟಕಕ್ಕೆ ಹೆಮ್ಮೆಯ ವಿಷಯ,'' ಎಂದರು. ''ಭಾರತದ ಹಳ್ಳಿಗಳು ಸಮೃದ್ಧವಾದರೆ ಇಡೀ ದೇಶ ಸುಭಿಕ್ಷವಾಗುತ್ತದೆ. ಗಲೀಜು, ಬಡತನ ಮತ್ತು ಅವ್ಯವಸ್ಥೆಯಿಂದ ಕೂಡಿದ್ದ ದೇಶಕ್ಕೆ ಮೋದಿ 'ಸ್ವಚ್ಛ ಭಾರತ' ಅಭಿಯಾನದ ಮೂಲಕ ಹೊಸ ರೂಪ ನೀಡಿದ್ದಾರೆ. ಹಿಂದೆ 14ನೇ ಸ್ಥಾನದಲ್ಲಿದ್ದ ಭಾರತ ಇಂದು ಆರ್ಥಿಕವಾಗಿ 6ನೇ ಸ್ಥಾನಕ್ಕೇರಿದೆ,'' ಎಂದು ಗುರೂಜಿ ಹೇಳಿದರು. ''ಯೋಗ ಮತ್ತು ಆಯುರ್ವೇದಕ್ಕೆ ಜಾಗತಿಕ ಮನ್ನಣೆ ದೊರಕಿಸಿಕೊಟ್ಟ ಕೀರ್ತಿ ಮೋದಿ ಅವರಿಗೆ ಸಲ್ಲುತ್ತದೆ. ಆಯುಷ್ ಸಚಿವಾಲಯದ ಸ್ಥಾಪನೆಯು ಆಯುರ್ವೇದದ ಪುನರುತ್ಥಾನಕ್ಕೆ ಕಾರಣವಾಗಿದೆ. ಕಾಶಿಯನ್ನು ಅದ್ಭುತವಾಗಿ ಅಭಿವೃದ್ಧಿ ಮಾಡಲಾಗಿದ್ದು, ರಾಜ್ಯದ ಜನರು ತಮ್ಮ ಕುಟುಂಬದೊಂದಿಗೆ ಅಲ್ಲಿಗೆ ಭೇಟಿ ನೀಡಬೇಕು,'' ಎಂದು ಕರೆ ನೀಡಿದರು.

ಧ್ಯಾನ ಮಂದಿರ ಉದ್ಘಾಟನೆ

ಇದೇ ವೇಳೆ ಪ್ರಧಾನಿ ನೂತನವಾಗಿ ನಿರ್ಮಿಸಲಾದ ಭವ್ಯ 'ದಿವ್ಯ ಧ್ಯಾನ ಮಂದಿರ' ಲೋಕಾರ್ಪಣೆಗೊಳಿಸಿ, ಎಒಎಲ್‌ನ ಹಲವು ಸೇವಾ ಉಪಕ್ರಮಗಳಿಗೆ ಚಾಲನೆ ನೀಡಿದರು.

ಬೆಂಗಳೂರಿನ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಹಿರಿಮೆ ಕೊಂಡಾಡಿದ ಪ್ರಧಾನಿ, ''ಹೊಸ ಧ್ಯಾನ ಮಂದಿರವು ಸಾವಿರಾರು ಜನರಿಗೆ ಶಾಂತಿ ಮತ್ತು ನೆಮ್ಮದಿಯ ಪವಿತ್ರ ಸ್ಥಳವಾಗಿ ಕಾರ್ಯನಿರ್ವಹಿಸುತ್ತದೆ,'' ಎಂದು ವಿಶ್ವಾಸ ವ್ಯಕ್ತಪಡಿಸಿದರು. ಇದು ವಿಶ್ವದ ಅತಿದೊಡ್ಡ ಧ್ಯಾನ ಕೇಂದ್ರವಾಗಿದೆ.

AMITY UNIVERSITY BENGALURU

LAW

PROGRAMMES OFFERED
- B.A, LL.B (Hons)*
- LL.B (Hons)* (*Approved by BCI)
- LL.M

To apply visit: amity.edu/bengaluru by: 16th May 2026

7303-399-000

The Amity Bengaluru Advantage
- Placements in leading entities such as SBI Mutual Fund, ICICI Lombard, Sheenlac Paints, Policy Bazaar, DCB Bank, Trellis Analytics, HiveMinds...
- Distinguished faculty comprising eminent visiting jurists & policy makers
- Regular visits to Courts, Lok Adalats, Tribunals, Jails, Forensics Labs and Police Stations
- Practical exposure through legal aid camps, pro-bono services, case presentations, moot court competitions, legal quiz...
- Centre for Research in Corporate Law & Entrepreneurial Practices
- Value-added courses such as foreign languages, specialized courses to enhance communication skills
- Eminent law experts visiting the campus include SC Judges, HC Judges, Lokayukta officials, Business Law Chamber Associates...

Amity University Bengaluru, NH 648, Devanahalli-Doddaballapur Rd, Bengaluru | E: admissions.blr@amity.edu

ಒಂದು ವರ್ಷ ಚಿನ್ನ ಖರೀದಿಸ್ಬೇಡಿ...

ಮೋದಿ ಹೇಳಿದ ಆರ್ಟ್ ಆಫ್ ಲಿವಿಂಗ್ ಗುಟ್ಟುಗಳು

ಬೆಂಗಳೂರಿನಲ್ಲಿ ಆರ್ಟ್ ಆಫ್ ಲಿವಿಂಗ್ ಕಾರ್ಯಕ್ರಮ ಮುಗಿಸುತ್ತಲೇ ಪ್ರಧಾನಿ ಮೋದಿ ತೆರಳಿದ್ದು ಹೈದರಾಬಾದ್‌ಗೆ. ಅಲ್ಲಿನ ಬಿಜೆಪಿ ರ್‍ಯಾಲಿಯಲ್ಲಿ ಅವರು ಪ್ರತಿಪಾದಿಸಿದ್ದೂ ಇನ್ನೊಂದರ್ಥದ 'ಆರ್ಟ್ ಆಫ್ ಲಿವಿಂಗ್' ಅನ್ನೇ! ಯುದ್ಧದ ಬಿಕ್ಕಟ್ಟಿನ ಈ ಅವಧಿಯಲ್ಲಿ, ಬೆಲೆ ಏರಿಕೆಯ ಈ ದಿನಗಳಲ್ಲಿ ಬದುಕನ್ನು ಸರಳಗೊಳಿಸುವ ಕಲೆ ರೂಢಿಸಿಕೊಳ್ಳಲು ಪ್ರಧಾನಿಯವರು ನೀಡಿದ ಕರೆಗಳಿವು.

1 ಒಂದು ವರ್ಷ ಚಿನ್ನ ಖರೀದಿಸಬೇಡಿ
ಚಿನ್ನದ ಆಮದಿಗೆ ಗಣನೀಯ ಪ್ರಮಾಣದ ವಿದೇಶಿ ಕರೆನ್ಸಿ ಬಳಕೆಯಾಗುತ್ತಿದೆ. ರಾಷ್ಟ್ರದ ಹಿತದೃಷ್ಟಿಯಿಂದ, ಜನರು ಒಂದು ವರ್ಷದ ಕಾಲ ಚಿನ್ನ ಖರೀದಿಸುವುದರಿಂದ ಅಥವಾ ದಾನ ಮಾಡುವುದರಿಂದ ದೂರವಿರಬೇಕು.

2 ಪೆಟ್ರೋಲ್ ಮತ್ತು ಡೀಸೆಲ್ ಉಳಿಸಿ
ಅನಗತ್ಯ ವಾಹನ ಬಳಕೆ ಕಡಿಮೆ ಮಾಡಿ, ಮೆಟ್ರೊ ರೈಲುಗಳಲ್ಲಿ ಪ್ರಯಾಣಿಸಿ. ನಿಮ್ಮ ಜತೆಗೆ ಸಾಧ್ಯವಾದಷ್ಟು ಪ್ರಯಾಣಿಕರನ್ನು ಕರೆದೊಯ್ಯಿರಿ. ಕಂಪನಿಗಳು ವರ್ಕ್ ಫ್ರಮ್ ಹೋಮ್ ಬಗ್ಗೆ ಹೆಚ್ಚು ಯೋಚಿಸಲಿ.

3 ಖಾದ್ಯ ಎಣ್ಣೆ ಬಳಕೆ ತಗ್ಗಿಸಿ
ಪ್ರತಿಯೊಂದು ಕುಟುಂಬವು ಖಾದ್ಯ ಎಣ್ಣೆಯ ಬಳಕೆಯನ್ನು ಸ್ವಲ್ಪ ಕಡಿಮೆ ಮಾಡಿದರೆ, ವಿದೇಶಿ ವಿನಿಮಯ ಉಳಿತಾಯವಾಗುತ್ತದೆ ಮತ್ತು ಜನರ ಆರೋಗ್ಯವೂ ಸುಧಾರಿಸುತ್ತದೆ.

4 ವಿದೇಶ ಪ್ರಯಾಣ ಮುಂದೂಡಿ
ಜಾಗತಿಕ ಪರಿಸ್ಥಿತಿಗಳು ಮತ್ತು ಹೆಚ್ಚಿನ ಇಂಧನ ಬೆಲೆಗಳು ಭಾರತದ ಮೇಲೆ ಆರ್ಥಿಕ ಒತ್ತಡವನ್ನು ಹೆಚ್ಚಿಸುತ್ತಿವೆ. ಆದ್ದರಿಂದ, ಮದುವೆಗಳು, ರಜಾದಿನಗಳು ಮತ್ತು ಇತರ ಕಾರಣಗಳಿಗಾಗಿ ವಿದೇಶ ಪ್ರಯಾಣವನ್ನು ತಾತ್ಕಾಲಿಕವಾಗಿ ಮುಂದೂಡುವುದು ರಾಷ್ಟ್ರೀಯ ಹಿತಾಸಕ್ತಿಗೆ ಒಳ್ಳೆಯದು.

5 ರಾಸಾಯನಿಕ ಗೊಬ್ಬರ ಕಡಿಮೆ ಮಾಡಿ
ನೈಸರ್ಗಿಕ ಕೃಷಿಯನ್ನು ಹೆಚ್ಚು ಅಳವಡಿಸಿಕೊಳ್ಳಿ. ದೇಶವು ರಾಸಾಯನಿಕ ಗೊಬ್ಬರಗಳ ಬಳಕೆಯನ್ನು ಅರ್ಧದಷ್ಟು ಕಡಿಮೆ ಮಾಡಿ ನೈಸರ್ಗಿಕ ಕೃಷಿಯತ್ತ ವೇಗವಾಗಿ ಸಾಗುವ ಗುರಿಯನ್ನು ಹೊಂದಿರಬೇಕು.

ಎಐ ಬರೆದ ಕೋಡನ್ನು ಪರಿಶೀಲಿಸುವ ಎಐ

ಆಗ್ಮೆಂಟ್ ಕೋಡ್, ಸ್ವೀಪ್, ವಿಂಡ್‌ಸರ್ಫ್, ಕಿರೊ, ಆ್ಯಕ್ಸಿಮ್, ಮೊದಲಾದವೆಲ್ಲ ಅತ್ಯಾಧುನಿಕ ಜೆನ್-ಎಐ ಸಾಫ್ಟ್‌ವೇರ್ ಟೂಲ್‌ಗಳು. ಇವುಗಳ ಕೆಲಸವೇನು ಗೊತ್ತೆ? ರಚನಾಶೀಲ ಕೃತಕ ಬುದ್ಧಿಮತ್ತೆ ಬರೆದಿರುವ ಕೋಡ್‌ಗಳನ್ನು ಪರೀಕ್ಷಿಸುವುದು. ಮನುಷ್ಯರ ಹಾಗೆ ಕೋಡ್ ಬರೆಯುವುದೇ ಒಂದು ಅದ್ಭುತ ತಂತ್ರಜ್ಞಾನ ಎನಿಸಿರುವಾಗ ಇನ್ನು ಆ ಎಲ್ಲ ಕೋಡ್‌ಗಳ ಸಮೂಹವನ್ನು ಒಟ್ಟುಗೂಡಿಸಿ, ಪರೀಕ್ಷಿಸಿ, ತಪ್ಪನ್ನು ತಿದ್ದುಪಡಿ ಮಾಡಿ ಅದು ನಿರ್ಧಾರಿತ ಕೆಲಸವನ್ನು ಮಾಡುವಷ್ಟು ಸಿದ್ಧ ಮಾಡಬಲ್ಲ ತಂತ್ರಜ್ಞಾನ ಹೇಗಿರಬೇಕು ನೀವೇ ಊಹಿಸಿ. ಕೋಡಿಂಗ್ ಮಾಡಲು 'ಸಾಫ್ಟ್‌ವೇರ್ ಎಂಜಿನಿಯರ್‌ಗಳೇ ಬೇಡ' ಎಂದುಕೊಂಡು ಈಗಾಗಲೇ ಸಾಫ್ಟ್‌ವೇರ್ ಕಂಪನಿಗಳ ಷೇರುಗಳ ಬೆಲೆ ನೆಲಕ್ಕಚ್ಚಿವೆ, ಇನ್ನು ಸಂಪೂರ್ಣ ಸಾಫ್ಟ್‌ವೇರ್ ಸ್ಟ್ಯಾಕ್ ತಯಾರಿಸಬಲ್ಲ ತಂತ್ರಜ್ಞಾನವು ಜನರ ಕೈಗೆ ಸಿಕ್ಕರೆ? 'ಜೆಟ್ ಬ್ರೇನ್' ಬಳಕೆದಾರರಿಗೆ ಅಂತ ತಯಾರು ಮಾಡಿದ 'ಸ್ವೀಪ್ ಎಐ'ಯು ಮನುಷ್ಯರಿಗಿಂತ ಹತ್ತು ಪಟ್ಟು ವೇಗದಲ್ಲಿ ಕೋಡಿಂಗ್ ಮಾಡಬಲ್ಲ ಸಾಮರ್ಥ್ಯ ಹೊಂದಿದೆ. ಅದರಲ್ಲಿನ 'ಕಸ್ಟಮ್ ಟ್ಯಾಬ್ ಮಾಡೆಲ್' ಕೋಡ್‌ನಲ್ಲಿ ಆಗಬೇಕಾದ ಬದಲಾವಣೆಗಳನ್ನು ಮಿಲಿ ಸೆಕೆಂಡುಗಳಲ್ಲಿ ಹೇಳಬಹುದಾಗಿದೆ. ಇದು ಜನಸಾಮಾನ್ಯರಿಗಿಂತ ಸಾಫ್ಟ್‌ವೇರ್ ವೃತ್ತಿಪರರಿಗೆ ಹೆಚ್ಚು ಅನುಕೂಲವಾದ ಪರಿಕರಗಳಲ್ಲೊಂದು!



ಸ್ಕ್ಯಾನ್ ಮಾಡಿ ಎಐ ಕುರಿತು ಪ್ರಶ್ನೆ ಕೇಳಿ

■ **ವಿಕ್ರಂ ಜೋಶಿ** ಎಐ ವಿಶ್ಲೇಷಕರು

ಧಾರವಾಡ ಜಿಲ್ಲೆ ವಿಕ ಸೂಪರ್ ಸ್ಟಾರ್ ರೈತರು

ಧಾರವಾಡ ಜಿಲ್ಲೆಯ ಕುಂದಗೋಳ ಪಟ್ಟಣದಲ್ಲಿ ಭಾನುವಾರ ನಡೆದ ಜಿಲ್ಲಾ ಮಟ್ಟದ ವಿಕ ಸೂಪರ್ ಸ್ಟಾರ್ ರೈತ ಕಾರ್ಯಕ್ರಮದಲ್ಲಿ ಅಣ್ಣಿಗೇರಿ ತಾಲೂಕಿನ ಶಿವಲೀಲಾ ಶಿವಬಸಯ್ಯ ಹಿತ್ತಲಮನಿ, ಕುಂದಗೋಳದ ಸೂರಜ್ ನಾಗರಾಜ ದೇಶಪಾಂಡೆ, ಕಲಘಟಗಿ ತಾಲೂಕಿನ ಶಿವಪ್ಪ ವೀರನಗೌಡ ಸೋಮಣ್ಣವರ, ಧಾರವಾಡ ತಾಲೂಕಿನ ಸಂತೋಷ ಮಡಿವಾಳಪ್ಪ ಹೊನ್ನಣ್ಣವರ, ಹುಬ್ಬಳ್ಳಿ ತಾಲೂಕಿನ ಬಸವರಾಜ ಕಲ್ಲಪ್ಪಸಾಲಿ, ನವಲಗುಂದ ತಾಲೂಕಿನ ಯಲ್ಲಪ್ಪ ಹುಚ್ಚಪ್ಪ ಗೊರವರ ಅವರಿಗೆ ವಿಕ ಸೂಪರ್ ಸ್ಟಾರ್ ರೈತ ಪ್ರಶಸ್ತಿ ಪ್ರದಾನ ಮಾಡಲಾಯಿತು. ಶಿರಹಟ್ಟಿಯ ಫಕೀರೇಶ್ವರ ಭಾವೈಕ್ಯತಾ ಸಂಸ್ಥಾನ ಮಠದ ಫಕೀರ ದಿಂಗಾಲೇಶ್ವರ ಸ್ವಾಮೀಜಿ, ಕುಂದಗೋಳ ಕಲ್ಯಾಣಪುರ ಮಠದ ಬಸವಣ್ಣಜ್ಜನವರು, ಶಾಸಕ ಎಂ.ಆರ್.ಪಾಟೀಲ, ಜಿಲ್ಲಾ ಗ್ರಾಮೀಣ ಕಾಂಗ್ರೆಸ್ ವಕ್ತಾರ ಚಂದ್ರಶೇಖರ ಜುಟ್ಟಲ, ರಾಜ್ಯ ರೈತ ಸಂಘದ ಕಾರ್ಯಾಧ್ಯಕ್ಷ ಗಿರೀಶ್ ಗದಿಗೆಪ್ಪಗೌಡರ, ಕೃಷಿಕ ಸಮಾಜದ ರಾಜ್ಯ ಪ್ರತಿನಿಧಿ ಡಾ.ಅರವಿಂದಪ್ಪ ಎಂ.ಕಟಗಿ, ಕೃಷಿ ಅಧಿಕಾರಿಗಳಾದ ಮಂಜುನಾಥ ಹೂಗಾರ, ರೇಖಾ ಗಡ್ಡದವರ, ರೈತ ಮುಖಂಡರಾದ ಸೋಮರಾವ್ ದೇಸಾಯಿ, ಮಾಣಿಕ್ಯ ಚಿಲ್ಲೂರ, ಗುರುಪಾದಪ್ಪ ಬಂಕದ ಇದ್ದರು.

ಶುಲ್ಕ ಮರುಪಾವತಿಗೆ ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಬೆಂಗಳೂರು: 2025-26ನೇ ಸಾಲಿನ ಹಿಂದುಳಿದ ವರ್ಗಗಳ ಮತ್ತು ಪ್ರವರ್ಗ-1ರ ಅಲೆಮಾರಿ ಜನಾಂಗದ ಮೆಟ್ರಿಕ್ ನಂತರದ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿಗೆ ಅರ್ಜಿ ಸಲ್ಲಿಸುವ ದಿನಾಂಕವನ್ನು ವಿಸ್ತರಿಸಲಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ತಿಳಿಸಿದೆ.

ಮೆಟ್ರಿಕ್ ನಂತರದ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ-1ರ ಅಲೆಮಾರಿ, ಅರೆ ಅಲೆಮಾರಿ ವಿದ್ಯಾರ್ಥಿಗಳು ಮೇ 16ರವರೆಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ. ಪೋಷಕರು, ವಿದ್ಯಾರ್ಥಿಗಳ ಮನವಿ ಮೇರೆಗೆ ದಿನಾಂಕ ವಿಸ್ತರಿಸಲಾಗಿದೆ. ವಿದ್ಯಾರ್ಥಿಗಳು ನಿಗದಿತ ದಿನಾಂಕದೊಳಗಾಗಿ ಇಲಾಖೆಯ ಅಧಿಕೃತ ವೆಬ್‌ಸೈಟ್ ಮೂಲಕ ಅರ್ಜಿ ಸಲ್ಲಿಸಬೇಕು ಎಂದು ಇಲಾಖೆ ತಿಳಿಸಿದೆ.

ರಾಜ್ಯದ ಅಭಿವೃದ್ಧಿ ಸ್ಥಗಿತ

» ಮೊದಲ ಪುಟದಿಂದ

''40 ವರ್ಷದ ಹಿಂದೆ ಸಂಸತ್‌ನಲ್ಲಿ 400 ಸ್ಥಾನ ಹೊಂದಿದ್ದ ಕಾಂಗ್ರೆಸ್ ಈಗ 100 ಸೀಟು ಗೆಲ್ಲಲು ಪರದಾಡುತ್ತಿದೆ. ಹೀಗೆ ಕಾಂಗ್ರೆಸ್ ಪ್ರಾದೇಶಿಕ ಪಕ್ಷವಾಗುತ್ತಿದೆ. ಪರಿಸ್ಥಿತಿ ಹೀಗಿದ್ದರೂ ಕಾಂಗ್ರೆಸ್‌ನವರಿಗೆ ಭಾರಿ ಅಹಂಕಾರ. ತಮ್ಮ ಸೋಲಿಗಾಗಿ ಇಡೀ ಜಗತ್ತು, ಸಂವಿಧಾನ, ಪ್ರಜಾಪ್ರಭುತ್ವ ಸಾಂವಿಧಾನಿಕ ಪ್ರಕ್ರಿಯೆಗಳನ್ನು ದೂಷಿಸುತ್ತಾರೆ. ಕಾಂಗ್ರೆಸಿಗರು ನಿರಾಶೆ ಯಲ್ಲಿ ಮುಳುಗಿದ್ದಾರೆ. ಅವರ ಬಳಿಕ ಯಾವುದೇ ರೀತಿಯ ಸಕಾರಾತ್ಮಕ ಕಾರ್ಯಸೂಚಿಯಿಲ್ಲ'' ಎಂದು ಚಾಟಿ ಬೀಸಿದರು.

ಡಿಎಂಕೆಗೆ ವಿಶ್ವಾಸ ದ್ರೋಹ: ತಮಿಳುನಾಡಿನಲ್ಲಿ ಡಿಎಂಕೆಯೊಂದಿಗಿನ ಸಖ್ಯವನ್ನು ಕಡಿದುಕೊಂಡು ಟಿವಿಕೆಯೊಂದಿಗೆ ಕೈಜೋಡಿಸಿದ ಕಾಂಗ್ರೆಸ್‌ನ ನಡೆಯನ್ನು ಪ್ರಸ್ತಾಪಿಸಿದ ಅವರು, ''ಕಾಂಗ್ರೆಸ್‌ಗೆ ಡಿಎಂಕೆ ಎಷ್ಟೆಲ್ಲ ಸಹಕಾರ ನೀಡಿತ್ತು. ಕೇಂದ್ರದಲ್ಲಿ 10 ವರ್ಷ ಯುಪಿಎನೊಂದಿಗಿತ್ತು. ಅಂತಹ ಮಿತ್ರಪಕ್ಷಕ್ಕೆ ಕಾಂಗ್ರೆಸ್ ಮಾಡಿದ್ದು ವಿಶ್ವಾಸ ದ್ರೋಹವಲ್ಲವಾ ?,'' ಎಂದು ಪ್ರಶ್ನಿಸಿದರು.

ಕಾಂಗ್ರೆಸ್ ಅಂದ್ರೆ ಲೂಟಿ: ''ಕಾಂಗ್ರೆಸ್ ಎಲ್ಲೇ ಅಧಿಕಾರಕ್ಕೆ ಬಂದರೂ ಕೆಲವೇ ತಿಂಗಳಲ್ಲಿ ಆಡಳಿತ ವಿರೋಧಿ ಅಲೆ ಎದುರಾಗುತ್ತದೆ. ಹಾಗಾಗಿ ಯಾವ ರಾಜ್ಯಗಳಲ್ಲೂ ಎರಡನೇ ಬಾರಿಗೆ (5 ವರ್ಷದ ಅಧಿಕಾರ ಅವಧಿ ಪೂರ್ಣಗೊಳಿಸಿದ ಬಳಿಕ) ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತಿಲ್ಲ. ಕಾಂಗ್ರೆಸ್ ಇರುವಲ್ಲಿ ಖಜಾನೆ ಲೂಟಿಯಾಗುತ್ತದೆ. ಲೂಟಿ ಮಾಡಿದ್ದನ್ನು ಪಡೆದುಕೊಳ್ಳಲು ಪರಸ್ಪರ ಸಂಘರ್ಷದಲ್ಲಿ ತೊಡಗುತ್ತಾರೆ,'' ಎಂದು ಪ್ರಧಾನಿ ಆರೋಪಿಸಿದರು.

3 ವರ್ಷದಿಂದ ರಾಜ್ಯದಲ್ಲಿ ಒಳಜಗಳ

ರಾಜ್ಯ ಕಾಂಗ್ರೆಸ್‌ನ ನಾಯಕತ್ವಗೊಂದಲದ ಬಗ್ಗೆ ಪ್ರಸ್ತಾಪಿಸಿದ ಪ್ರಧಾನಿ ಯವರು, ''ಕರ್ನಾಟಕದಲ್ಲಿ ಜನರ ಸಮಸ್ಯೆ ಪರಿಹಾರ ಕಂಡು ಹಿಡಿಯುವ ಬದಲು ಕಳೆದ 3 ವರ್ಷದಿಂದಲೂ ಪರಸ್ಪರ ಜಗಳವಾಡಲಾಗುತ್ತಿದೆ. ಇಲ್ಲಿನ ಸಿಎಂ ಎಷ್ಟು ದಿನ ಇರುತ್ತಾರೆ ಗೊತ್ತಿಲ್ಲ. ಇನ್ನೊಬ್ಬರಿಗೆ ಅವಕಾಶ ಸಿಗುತ್ತದಾ ಎಂಬುದೂ ಗೊತ್ತಿಲ್ಲ. ಕಾಂಗ್ರೆಸ್‌ನವರು ಸುಳ್ಳು ಹೇಳುತ್ತಾರೆ. ಇವರ ಗ್ಯಾರಂಟಿಗಳೂ ಸುಳ್ಳು. ಕಾಂಗ್ರೆಸ್‌ನ ಅಧಿಕಾರದ ನಿಘಂಟಿನಲ್ಲಿ ಆಡಳಿತದ ಅಧ್ಯಾಯದ ಪದವೇ ಇಲ್ಲ. ಹಿಮಾಚಲ ಪ್ರದೇಶದಲ್ಲಿ ಸರಕಾರಿ ನೌಕರರಿಗೆ ಸಂಬಳ ನೀಡಲಾಗದ ಪರಿಸ್ಥಿತಿಯಿದೆ,'' ಎಂದು ಆಪಾದಿಸಿದರು.

ನೀಟ್‌ನಲ್ಲಿ ಅಕ್ರಮ ಆರೋಪ, ತನಿಖೆ

ಬೆಂಗಳೂರು: ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಮೇ 3ರಂದು ನಡೆಸಿದ 'ನೀಟ್'ನಲ್ಲಿ ಅಕ್ರಮ ನಡೆದಿರುವ ಆರೋಪ ಕೇಳಿ ಬಂದಿದೆ. ಈ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಕೇಂದ್ರೀಯ ತನಿಖಾ ಸಂಸ್ಥೆಗಳಿಗೆ ಸೂಚಿಸಲಾಗಿದೆ ಎಂದು ಎನ್‌ಟಿಎ ಹೇಳಿದೆ. ಪ್ರವೇಶ ಪರೀಕ್ಷೆಯನ್ನು ಕಟ್ಟುನಿಟ್ಟಾಗಿ ನಡೆಸಲಾಗಿದೆ. ಜಿಪಿಎಸ್ ಇರುವ ವಾಹನಗಳ ಮೂಲಕ ಪ್ರಶ್ನೆಪತ್ರಿಕೆಗಳನ್ನು ಸಾಗಿಸಲಾಗಿದ್ದು, ವಾಟರ್ ಮಾರ್ಕ್ ಮೂಲಕ ಪಾರದರ್ಶಕತೆಗೆ ಆದ್ಯತೆ ನೀಡಲಾಗಿತ್ತು ಎಂದು ಎನ್‌ಟಿಎ ತಿಳಿಸಿದೆ.

ಪರೀಕ್ಷಾ ಕೇಂದ್ರಗಳಲ್ಲಿ ಎಐ ಆಧಾರಿತ ಸಿಸಿಟಿವಿ ಕ್ಯಾಮರಾ ಬಳಕೆ ಮಾಡಲಾಗಿತ್ತು. ಕಂಟ್ರೋಲ್ ರೂಮ್ ಮೂಲಕ ನಿಗಾ ಇಡಲಾಗಿತ್ತು. ಜತೆಗೆ, ಪ್ರತಿ ಅಭ್ಯರ್ಥಿಗೂ ಬಯೋಮೆಟ್ರಿಕ್ ಕಡ್ಡಾಯ ಮಾಡುವ ಮೂಲಕ ಯಾವುದೇ ಅಕ್ರಮ ನಡೆಯದಂತೆ ಮುನ್ನೆಚ್ಚರಿಕೆ ವಹಿಸಲಾಗಿತ್ತು ಎಂದು ಎನ್‌ಟಿಎ ಸ್ಪಷ್ಟನೆ ನೀಡಿದೆ. ಪಾರದರ್ಶಕ, ಸುರಕ್ಷಿತ ಪರೀಕ್ಷೆ ನಡೆಸಲು ಸಂಸ್ಥೆ ಬದ್ಧವಾಗಿದ್ದು, ಯಾವುದೇ ತನಿಖೆಗೆ ಸಂಸ್ಥೆ ಸಂಪೂರ್ಣ ಸಹಕಾರ ನೀಡಲಿದೆ ಎಂದು ತಿಳಿಸಿದೆ.

ರಾಜಸ್ಥಾನ ವಿಶೇಷ ಕಾರ್ಯಪಡೆಯ ಪರಿಶೀಲನೆ ಬಳಿಕ ಪರೀಕ್ಷೆಯಲ್ಲಿ ಅಕ್ರಮ ನಡೆದಿರುವ ಆರೋಪ ಕೇಳಿ ಬಂದಿದೆ.

ಇಂದಿನಿಂದ ಸಿಇಟಿ ದಾಖಲೆ ಪರಿಶೀಲನೆ

■ **ವಿಕ ಸುದ್ದಿಲೋಕ** ಬೆಂಗಳೂರು

2026ನೇ ಸಾಲಿನ ಯುಜಿ-ಸಿಇಟಿ ಅರ್ಜಿಯಲ್ಲಿ ಅರ್ಹತಾ ಕಂಡಿಕೆ ಎ 1, ಬಿ 1, ಸಿ, ಡಿ, ಇ, ಎಫ್, ಜಿ, ಎಚ್, ಐ, ಜೆ, ಕೆ, ಎಲ್, ಎಂ, ಎನ್ ಮತ್ತು ಒ ಎಂದು ಕ್ಲೇಮ್ ಮಾಡಿರುವ ಅಭ್ಯರ್ಥಿಗಳ ಮೂಲ ದಾಖಲೆಗಳ ಪರಿಶೀಲನೆಯನ್ನು ಮೇ 11 ರಿಂದ 22ರವರೆಗೆ ನಡೆಸಲಾಗುವುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ತಿಳಿಸಿದೆ.

ಮಲ್ಲೇಶ್ವರದ ಕೆಇಎ ಕಚೇರಿಯಲ್ಲಿ ದಾಖಲೆ ಪರಿಶೀಲನೆ ನಡೆಯಲಿದೆ. ಪರಿಶೀಲನೆಗೆ ಮೊದಲು ಅಭ್ಯರ್ಥಿಗಳು ವೆಬ್‌ಸೈಟ್‌ನಲ್ಲಿ ನೀಡಿರುವ ಲಿಂಕ್ ಮೂಲಕ ಸ್ಲಾಟ್ ಕಾಯ್ದಿರಿಸಿಕೊಂಡು ಬರಬೇಕು ಎಂದು ಕೆಇಎ ತಿಳಿಸಿದೆ.

ಅಭ್ಯರ್ಥಿಗಳೇ ಖುದ್ದು ಹಾಜರಾಗಿ ದಾಖಲೆಗಳನ್ನು ಪರಿಶೀಲನೆ ಮಾಡಿಸಿಕೊಳ್ಳಬೇಕು. ಅಗತ್ಯ ದಾಖಲೆಗಳ ಜತೆ ಹಾಜರಾಗಬೇಕು ಎಂದು ಸೂಚಿಸಲಾಗಿದೆ. ಸಿಇಟಿ ಪ್ರವೇಶಪತ್ರ ಮತ್ತು ಅರ್ಜಿ, ಆಧಾರ್ ಕಾರ್ಡ್, 10 ಮತ್ತು 12ನೇ ತರಗತಿಯ ಅಂಕಪಟ್ಟಿ, ವ್ಯಾಸಂಗ ಪ್ರಮಾಣಪತ್ರ, ಪೋಷಕರ ಪ್ರಮಾಣಪತ್ರಗಳು ಸೇರಿ ಅಗತ್ಯ ದಾಖಲೆಗಳ ಒಂದು ಸೆಟ್ ನಕಲು ಪ್ರತಿಗಳೊಂದಿಗೆ ಪರಿಶೀಲನೆಗೆ ಹಾಜರಾಗುವಂತೆ ಕೆಇಎ ತಿಳಿಸಿದೆ. ದಾಖಲೆಗಳ ಪರಿಶೀಲನೆಗೆ ಹಾಜರಾಗಿ ಅರ್ಹತೆ ಪಡೆಯುವ ಅಭ್ಯರ್ಥಿಗಳಿಗೆ ಮಾತ್ರ ಆನ್‌ಲೈನ್ ಸೀಟು ಹಂಚಿಕೆಯಲ್ಲಿ ಭಾಗವಹಿಸಲು ಹಾಗೂ ಆಯ್ಕೆ ದಾಖಲಿಸಲು ಅವಕಾಶ ಇರಲಿದೆ. ವೈ ಅರ್ಹತಾ ಕಂಡಿಕೆಯ ಅಭ್ಯರ್ಥಿಗಳು ದಾಖಲೆಗಳ ಪರಿಶೀಲನೆಗೆ ಹಾಜರಾಗಬೇಕಿಲ್ಲ ಎಂದು ಕೆಇಎ ಸ್ಪಷ್ಟಪಡಿಸಿದೆ.

ಮದ್ಯಪ್ರಿಯರ ಏಪ್ರಿಲ್ ಕೊಡುಗೆ!

ಬೊಕ್ಕಸಕ್ಕೆ ಹರಿದುಬಂತು ₹3,688 ಕೋಟಿ ಆದಾಯ | 13 ವರ್ಷಗಳ ದಾಖಲೆ ಉಡೀಸ್

■ **ಜಿ.ಆರ್.ಗಿರೀಶ್** ಬೆಂಗಳೂರು
girish.jr@timesofindia.com

ರಾಜ್ಯದಲ್ಲಿ ಕಳೆದ ತಿಂಗಳು(ಏಪ್ರಿಲ್) ಮದ್ಯದ ವಹಿವಾಟು ದಾಖಲೆ ಬರೆದಿದ್ದು, ಸರಕಾರದ ಬೊಕ್ಕಸಕ್ಕೆ ಬರೋಬ್ಬರಿ 3,688 ಕೋಟಿ ರೂ. ಆದಾಯ ಹರಿದು ಬಂದಿದೆ. ಕಳೆದ 13 ವರ್ಷಗಳ ಇತಿಹಾಸದಲ್ಲೇ ಅಬಕಾರಿ ಇಲಾಖೆಯು ಒಂದೇ ತಿಂಗಳಲ್ಲಿ ಭಾರಿ ಪ್ರಮಾಣದಲ್ಲಿ ಮದ್ಯ ಮಾರಾಟ ಮಾಡಿರುವುದು ಐತಿಹಾಸಿಕ ದಾಖಲೆಯಾಗಿದೆ.

ಬೇಸಿಗೆಯ ಪರಿಣಾಮವೋ ಅಥವಾ ಜನರ ಮದ್ಯದ ದಾಸ್ಯವೋ ಗೊತ್ತಿಲ್ಲ, ರಾಜ್ಯದೆಲ್ಲೆಡೆ ಏಪ್ರಿಲ್‌ನಲ್ಲಿ ಬಿಯರ್ ಹಾಗೂ ದೇಶೀಯ ಮದ್ಯದ (ಐಎಂಎಲ್) ಮಾರಾಟವು ಗಣನೀಯ ಜಿಗಿತ ಕಂಡಿದೆ. ಗುಂಡು ಪ್ರಿಯರು ದರ ಹೆಚ್ಚಳವನ್ನೂ ಲೆಕ್ಕಿಸದೆ ಸಿಕ್ಕಾಪಟ್ಟೆ ಕಿಕ್ ಏರಿಸಿದ್ದಾರೆ. ಬ್ರಾಂದಿ, ವಿಸ್ಕಿ, ರಮ್, ಜಿನ್ ಸೇರಿದಂತೆ ದೇಶೀಯ ಮದ್ಯ, ಬಿಯರ್, ಐಎಂಎಲ್ ಸೇರಿದಂತೆ ಎಲ್ಲದರ ಮಾರಾಟವೂ ಗಮನಾರ್ಹವಾಗಿದೆ. ತಿಂಗಳೊಂದರಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಮದ್ಯ ಮಾರಾಟವಾಗಿರುವುದು ಸಾರ್ವಕಾಲಿಕ ದಾಖಲೆಯಾಗಿದೆ.

13 ವರ್ಷಗಳ ದಾಖಲೆ: 2013ರಿಂದ ಈಚೆಗೆ ಯಾವುದೇ ತಿಂಗಳಲ್ಲಿ ಈ ಪ್ರಮಾಣದಲ್ಲಿ ಮದ್ಯ ಮಾರಾಟವಾಗಿಲ್ಲ ಎಂಬುದು ವಿಶೇಷ. 2023ರ ಜುಲೈನಲ್ಲಿ 572.14 ಲಕ್ಷ ಲೀ. (66.22 ಲಕ್ಷ ಪೆಟ್ಟಿಗೆ) ಐಎಂಎಲ್ ಮಾರಾಟವಾಗಿದ್ದೇ ಕಳೆದ 13 ವರ್ಷಗಳ ದಾಖಲೆಯಾಗಿತ್ತು. ಪ್ರಸಕ್ತ ಏಪ್ರಿಲ್‌ನಲ್ಲಿ ಒಟ್ಟಾರೆ ಮದ್ಯದ ವಹಿವಾಟು ಶೇ.21.13ರಷ್ಟು ವೃದ್ಧಿಯಾಗಿದ್ದು, ಈ ಮೂಲಕ 13 ವರ್ಷಗಳ ದಾಖಲೆಯನ್ನು ಸರಿಗಟ್ಟಿದೆ.

ಚಿಲ್ಡ್ ಬಿಯರ್‌ಗೆ ಫುಲ್ ಡಿಮ್ಯಾಂಡ್: ರಾಜ್ಯದಲ್ಲಿ ಬಿರು ಬೇಸಿಗೆಯ ಹೊಡೆತಕ್ಕೆ ಜನರು ತಂಪು ಪಾನೀಯಗಳ ಮೊರೆ ಹೋಗಿದ್ದರೆ, ಮದ್ಯಪ್ರಿಯರು ಕೋಲ್ಡ್ ಬಿಯರ್‌ನತ್ತ ವಾಲಿದ್ದಾರೆ. ಬೇಸಿಗೆ ಹಿನ್ನೆಲೆಯಲ್ಲಿ ನಗರ ಮತ್ತು ಗ್ರಾಮೀಣ ಭಾಗದಲ್ಲಿ ಚಿಲ್ಡ್ ಬಿಯರ್ ಮದ್ಯಪ್ರಿಯರ ಆಯ್ಕೆಯ ಪಾನೀಯವಾಗಿದೆ. ರಾಜ್ಯದಲ್ಲಿ ಮಾರ್ಚ್‌ನ ನಂತರ ತಾಪಮಾನ ಏರಿಕೆಯಾಗಿರುವುದರಿಂದ ಬಿಯರ್ ಸೇವನೆ ಹೆಚ್ಚಳವಾಗಿದೆ. ಜತೆಗೆ, ಸಾಲು ಸಾಲು ರಜೆ, ಊರ ಹಬ್ಬಗಳೂ ಸೇರಿದಂತೆ ಹಲವು ಕಾರಣಗಳಿಂದ ಬಿಯರ್ ಮಾರಾಟ ಏರಿಕೆಯಾಗಿದೆ.

''ತಾಪಮಾನ ಹೆಚ್ಚಳದ ಕಾರಣಕ್ಕೆ ಬಿಯರ್‌ಗೆ ಬೇಡಿಕೆ ಹೆಚ್ಚಳವಾಗಿದೆ. ಜತೆಗೆ, ಏಪ್ರಿಲ್‌ನಲ್ಲಿ ಸಾಲು ಸಾಲು ರಜೆಗಳು, ಗ್ರಾಮೀಣ ಊರ ಹಬ್ಬ ಮತ್ತು ಜಾತ್ರೆಗಳಿದ್ದ ಕಾರಣಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಬಿಯರ್ ಮಾರಾಟವಾಗಿದೆ,'' ಎಂದು ಅಬಕಾರಿ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ದರ ಏರಿದರೂ ತಗ್ಗದ ಖರೀದಿ: ಪಂಚ ಗ್ಯಾರಂಟಿ ಯೋಜನೆಗಳಿಗೆ ಆರ್ಥಿಕ ಸಂಪನ್ಮೂಲಗಳನ್ನು ಕ್ರೋಡೀಕರಿಸಲು ತೀವ್ರ ಕಸರತ್ತು ನಡೆಸಿರುವ ರಾಜ್ಯ ಸರಕಾರ ಪ್ರಸಕ್ತ ಹಣಕಾಸು ವರ್ಷದಲ್ಲಿ ಅಬಕಾರಿ ಇಲಾಖೆಯ ಆದಾಯ ಸಂಗ್ರಹಣೆ ಗುರಿಯನ್ನು 45 ಸಾವಿರ ಕೋಟಿ ರೂ.ಗೆ ಹೆಚ್ಚಿಸಿದ್ದು, ಬಿಯರ್ ಹಾಗೂ ದೇಶೀಯ ಮದ್ಯಗಳ ಬೆಲೆ ಗಣನೀಯವಾಗಿ ಏರಿಕೆಯಾಗಿದೆ. ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ನಂತರ ಕಳೆದ ಮೂರು ವರ್ಷದಲ್ಲಿ ಮದ್ಯದ ಮೇಲಿನ ಎಐಡಿಯನ್ನು ಆರು ಬಾರಿ ಹೆಚ್ಚಿಸಿದೆ. ಅಲ್ಲದೆ, ಮೂಲ ಅಬಕಾರಿ ಸುಂಕವನ್ನು ಸಹ ಪರಿಷ್ಕರಿಸಲಾಗಿದೆ. ಇದರಿಂದ ಬಡ ಹಾಗೂ ಮಧ್ಯಮ ವರ್ಗದ ಜನರು ಹೆಚ್ಚಾಗಿ ಸೇವಿಸುವ ಅಗ್ಗದ ಮದ್ಯಗಳ ಬೆಲೆ ಗಣನೀಯವಾಗಿ ಏರಿಕೆಯಾಗಿದೆ. ಆದರೂ ಮದ್ಯ ಖರೀದಿ ಮಾತ್ರ ತಗ್ಗಿಲ್ಲ.

ವರ್ಷ	ಏಪ್ರಿಲ್‌ನಲ್ಲಿ ಮಾರಾಟವಾದ ಮದ್ಯ (ಲಕ್ಷಲೀ.ಗಳಲ್ಲಿ)	ಆದಾಯ (ಕೋಟಿ ರೂ.ಗಳಲ್ಲಿ)
2023-24	758.05	2,308
2024-25	858.34	2,264
2025-26	820.76	2,904
2026-27	982.02	3,688

ಸಾರ್ವಕಾಲಿಕ ಏಪ್ರಿಲ್ ದಾಖಲೆ !

- ಒಟ್ಟು ಆದಾಯ: 3,688 ಕೋಟಿ ರೂ.
- ಒಟ್ಟು ಮದ್ಯ ಮಾರಾಟ: 982.02 ಲಕ್ಷ ಲೀಟರ್(118.56 ಲಕ್ಷ ಪೆಟ್ಟಿಗೆ)
- ದೇಶೀಯ ಮದ್ಯ: 588.98 ಲಕ್ಷ ಲೀಟರ್ (68.17 ಲಕ್ಷ ಪೆಟ್ಟಿಗೆ)
- ಬಿಯರ್‌ಮಾರಾಟ: 393.04 ಲಕ್ಷ ಲೀಟರ್ (50.39 ಲಕ್ಷ ಪೆಟ್ಟಿಗೆ)

ದಾಖಲೆ ಮಾರಾಟಕ್ಕೆ ಏನು ಕಾರಣ?

- ನೆರೆ ರಾಜ್ಯಗಳಾದ ಕೇರಳ ಮತ್ತು ತಮಿಳುನಾಡಿನಲ್ಲಿ ಚುನಾವಣೆ ನಡೆದ ಕಾರಣ, ಅಲ್ಲಿ ಮದ್ಯ ಮಾರಾಟ ನಿಷೇಧವಿತ್ತು. ಹೀಗಾಗಿ ಗಡಿ ಭಾಗದ ಜನ ಕರ್ನಾಟಕದ ಮದ್ಯದ ಮೊರೆ ಹೋಗಿದ್ದಾರೆ.
- ಬಿಸಿಲಿನಿಂದಾಗಿ ಮೃದು ಪಾನೀಯಗಳಂತೆ ಬಿಯರ್‌ಮಾರಾಟ ಹೆಚ್ಚಳ ಕಂಡಿದೆ.
- ಏಪ್ರಿಲ್‌ನಲ್ಲಿ ಸಾಲು ಸಾಲು ಸರಕಾರಿ ರಜೆಗಳು ಮತ್ತು ಗ್ರಾಮೀಣ ಭಾಗದ ಜಾತ್ರೆಗಳಿದ್ದದ್ದು ವ್ಯಾಪಾರಕ್ಕೆ ಪೂರಕವಾಯಿತು.

राष्ट्रीय उर्दू भाषा विकास परिषद् قومی کونسل برائے فروغِ اردو زبان
NATIONAL COUNCIL FOR PROMOTION OF URDU LANGUAGE
Ministry of Education,Department of Higher Education, Government of India
Farogh-e-Urdu Bhawan,FC-33/9,Institutional Area,Jasola,New Delhi-110 025 (Ph: 011-35151992)

Admission Notice

Diploma in "Computer Applications, Business Accounting and Multilingual DTP"- CABA-MDTP

Joint Certification by NCPUL (Ministry of Education) & NIELIT Chandigarh (Ministry of Electronics and Information Technology, Govt. of India)

Last date for Submission of form : 5th June, 2026 || Interview Date : 8th & 9th June, 2026
Duration: one year. || No. of seats: 40
Fee: Rs: 250/- p.m. In case of 'A class' cities, Rs.500/- p.m.

Course Contents:
Module I: Fundamentals of Information Technology **Module II:** Internet Technology and Web Designing **Module III:** Financial Accounting Using Tally & Personality Development **Module IV:** Emerging trends in IT **Module V:** Multilingual DTP (Part-1) and Multilingual DTP Part-2 (Urdu DTP-Bilingual Edition) **Module VI:** Artificial intelligence and Machine Learning Python **Module VII:** Practical & Project Work.
Eligibility: Matric or recognized equivalent qualifications.

For Admission, please visit nearest CABA-MDTP centres. To find nearest CABA-MDTP Centres and other information, please visit NCPUL's website www.urducouncil.nic.in

Director

ಸೋರಿಯಾಸಿಸ್‌ಗೆ ಪರಿಣಾಮಕಾರಿ ಚಿಕಿತ್ಸೆ

ವ್ಯಕ್ತಿಯ ದೈಹಿಕ ಹಾಗೂ ಮಾನಸಿಕ ಸ್ಥಿತಿಯ ಮೇಲೆ ಪರಿಣಾಮ ಬೀರುವ ಕಾಯಿಲೆಗಳಲ್ಲಿ ಸೋರಿಯಾಸಿಸ್ ಕೂಡ ಒಂದು. ಹಾಗಂತ ಇದು ಒಬ್ಬರಿಂದ ಇನ್ನೊಬ್ಬರಿಗೆ ಹರಡುವುದಿಲ್ಲ. ಈ ಕಾಯಿಲೆಗೆ ಚರ್ಮದ ತಳದ ಪದರುಗಳ ಜೀವಕೋಶ ವಿಪರೀತ ವಿಭಜನೆಯಾಗುವುದೇ ಕಾರಣ. ಸಾಮಾನ್ಯವಾಗಿ ಚರ್ಮವು ಹಳೆಯ ಪದರ ತೆಗೆದುಹಾಕಿ ಹೊಸ ಪದರ ರೂಪಿಸಿಕೊಳ್ಳುವುದಕ್ಕೆ ಕೆಲವು ದಿನಗಳ ಸಮಯ ತೆಗೆದುಕೊಳ್ಳುತ್ತದೆ. ಆದರೆ ಈ ಕ್ರಿಯೆ ಸೋರಿಯಾಸಿಸ್‌ನಲ್ಲಿ ಬಲು ಬೇಗ ಮುಗಿಯುತ್ತದೆ ಹಾಗೂ ಈ ಸಮಯದಲ್ಲಿ ಉದುರಿ ಹೋಗಬೇಕಾದ ಹಳೆಯ ಚರ್ಮದ ಪದರವು ಹಾಗೇ ಉಳಿದು ಹೊಸ ಚರ್ಮದ ಪದರ ರಚನೆಯಾಗುತ್ತದೆ. ಇದರಿಂದ ಚರ್ಮದ ಮಡಿಕೆಗಳು ನಿರ್ಮಾಣವಾಗುತ್ತವೆ.

ಐದು ವಿಧ: ಕೆಲವು ಗುಣ ಲಕ್ಷಣಗಳನ್ನು ಆಧರಿಸಿ ಸೋರಿಯಾಸಿಸ್ ಅನ್ನು ಪ್ಲೇಕ್ ಸೋರಿಯಾಸಿಸ್, ಗಟ್ಟೇಟ್ ಸೋರಿಯಾಸಿಸ್, ಪುಸ್ಟ್ಯೂಲರ್ ಸೋರಿಯಾಸಿಸ್, ಇನ್ವರ್ಸ್ ಸೋರಿಯಾಸಿಸ್, ಎರಿಥ್ರೋಡರ್ಮಿಕ್ ಸೋರಿಯಾಸಿಸ್ ಎಂಬ ಐದು ವಿಧಗಳನ್ನಾಗಿ ವಿಂಗಡಿಸಲಾಗಿದೆ.

ಡಾ. ಶ್ರೀಕಾಂತ್ ಮೋರ್ಲಾವರ್
ಹೋಮಿಯೋಕೇರ್ ಇಂಟರ್‌ನ್ಯಾಷನಲ್ ಸಂಸ್ಥೆಯ ಅಧ್ಯಕ್ಷ

ಪ್ರಮುಖ ಲಕ್ಷಣ: ತಲೆ, ಮೊಣಕೈ, ಮೊಣಕಾಲು, ಅಂಗೈ, ಪಾದ ಹಾಗೂ ಹೊಟ್ಟೆಯ ಮೇಲ್ಭಾಗದ ಚರ್ಮದ ಮೇಲಿನ ಚರ್ಮ ಕೆಂಪಗಾಗುವುದು, ಸಾಧಾರಣದಿಂದ ಅತಿ ತೀವ್ರ ತುರಿಕೆ, ಚರ್ಮ ಒಡೆದು ತೀವ್ರ ನೋವು, ಸೋರಿಯಾಸಿಸ್ ತಲೆಯಲ್ಲಿದ್ದರೆ ಹೊಟ್ಟು ಹಾಗೂ ಕೂದಲು ಉದುರುವಿಕೆ, ಅಂಗೈ ಪಾದಗಳ ಚರ್ಮ ಹೊಟ್ಟಿನ ರೂಪದಲ್ಲಿ ಉದುರುವುದು ಮತ್ತು ಸೋರಿಯಾಸಿಸ್ ತೀವ್ರವಿದ್ದಾಗ ಕೀಲುಗಳಲ್ಲಿ ನೋವು ಕಾಣಿಸಿಕೊಳ್ಳುತ್ತದೆ.

ಹೋಮಿಯೋಕೇರ್ ಚಿಕಿತ್ಸೆ: ಹೋಮಿಯೋಕೇರ್‌ನಲ್ಲಿರುವ ಕಾನ್ಸ್ಟಿಟ್ಯೂಷನಲ್ ಚಿಕಿತ್ಸೆಯು ರೋಗಿಯ ದೈಹಿಕ ಸಮಸ್ಯೆ ಮತ್ತು ಮಾನಸಿಕ ಬದಲಾವಣೆಗಳು ಹಾಗೂ ಭಾವನಾತ್ಮಕ ಪರಿಸ್ಥಿತಿಗಳನ್ನು ಅಧ್ಯಯನ ಮಾಡಿ ನೀಡುವಂಥದ್ದಾಗಿದೆ. ಇದು ಕೇವಲ ರೋಗ ಲಕ್ಷಣವಷ್ಟೇ ಅಲ್ಲದೆ ರೋಗಿಯ ಸಂಪೂರ್ಣ ಆರೋಗ್ಯಕ್ಕೆ ಕಾರಣವಾಗುತ್ತದೆ. ಈ ರೀತಿಯ ರೋಗ ಲಕ್ಷಣಗಳಿಂದ ಬಳಲುತ್ತಿದ್ದ ಅನೇಕರು ಹೋಮಿಯೋಕೇರ್ ಚಿಕಿತ್ಸೆಯಿಂದ ಗುಣಮುಖರಾಗಿದ್ದಾರೆ ಎಂದಿದ್ದಾರೆ ಈ ಸಂಸ್ಥೆಯ ತಜ್ಞರು.

ಹೋಮಿಯೋಕೇರ್ ಇಂಟರ್‌ನ್ಯಾಷನಲ್: ಕರ್ನಾಟಕದಲ್ಲಿನ ಶಾಖೆಗಳು ಬೆಂಗಳೂರು (ಜಯನಗರ, ಮಲ್ಲೇಶ್ವರ, ಇಂದಿರಾನಗರ, ಎಚ್‌ಎಸ್‌ಆರ್ ಲೇಔಟ್), ಮೈಸೂರು, ಹುಬ್ಬಳ್ಳಿ, ಮಂಗಳೂರು, ಬಳ್ಳಾರಿ, ದಾವಣಗೆರೆ, ಬೆಳಗಾವಿ, ಬಿಜಾಪುರ, ಬೀದರ್, ಕಲಬುರಗಿ, ಶಿವಮೊಗ್ಗ, ತುಮಕೂರು, ಹಾಸನ. ತೆಲಂಗಾಣ, ಆಂಧ್ರಪ್ರದೇಶ, ತಮಿಳುನಾಡು, ಪುದುಚೇರಿ.

ಉಚಿತ ಸಮಾಲೋಚನೆ: 9550001133
ಉಚಿತ ಕರೆಗೆ: 1800 108 1212
ವೆಬ್‌ಸೈಟ್: www.homeocare.in

(ಈ ಕ್ಷೇತ್ರದಲ್ಲಿ ತಜ್ಞರ ತಿಳಿವಳಿಕೆಯನ್ನು ಆಧರಿಸಿದ ಬರಹ)

ಸೋರಿಯಾಸಿಸ್‌ಗೆ ಕಾರಣ

ಎಚ್‌ಐವಿ, ಸ್ಟ್ರೆಪ್ಟೋಕೋಕಲ್ ಸೋಂಕು, ಅತಿ ಚಳಿ, ದೈಹಿಕ ಗಾಯ, ಮಾನಸಿಕ ಒತ್ತಡ, ದೈಹಿಕ ವ್ಯಾಯಾಮದ ಕೊರತೆ, ದೇಹದ ರೋಗ ನಿರೋಧಕ ಶಕ್ತಿ ಕುಗ್ಗುವುದು ಸೋರಿಯಾಸಿಸ್‌ಗೆ ಕಾರಣವಾಗಿವೆ. ಸಂಶೋಧಕರ ಪ್ರಕಾರ, ತದ್ರೂಪಿ ಅವಳಿಯಲ್ಲಿ ಈ ಸಮಸ್ಯೆ ಶೇ. 70ರಷ್ಟು ಕಂಡುಬಂದರೆ, ಅವಳಿಯಲ್ಲದವರಲ್ಲಿ ಶೇ.30ರಷ್ಟು ಅಪಾಯದ ಸಾಧ್ಯತೆ ಇದೆ. ಜೀವನಶೈಲಿಯೂ ಇದಕ್ಕೆ ಕಾರಣವಾಗಿದ್ದು ವಿಪರೀತ ಮದ್ಯಪಾನ, ಧೂಮಪಾನ ಮತ್ತು ಬೊಜ್ಜಿನಿಂದ ಈ ಸಮಸ್ಯೆ ತಲೆದೋರುತ್ತದೆ. ಕೆಲವು ಔಷಧಗಳ ದೀರ್ಘಕಾಲದ ಸೇವನೆ ಕೂಡ ಸೋರಿಯಾಸಿಸ್‌ಗೆ ಪ್ರೇರೇಪಣೆ ನೀಡುತ್ತದೆ.

ಲವಲVK ಫಿಟ್ನೆಸ್ ಫಂಡಾ

ಪಾರ್ಕ್ ವ್ಯಾಯಾಮ ಸಲಕರಣೆಗಳ ಬಗ್ಗೆ ಇರಲಿ ಸ್ಪಷ್ಟತೆ

ಪಾರ್ಕ್‌ಗಳಲ್ಲಿ ಇರುವ ವ್ಯಾಯಾಮ ಸಲಕರಣೆಗಳ ಬಗ್ಗೆ ಸ್ವಲ್ಪ ಸ್ಪಷ್ಟತೆ ಅಗತ್ಯ. ಬಹಳ ಮಂದಿ ಆ ಉಪಕರಣಗಳನ್ನು ಬಳಸುವುದರಿಂದ ಸ್ಟ್ರೆಂತ್ ಬರುತ್ತದೆ ಎಂದು ಭಾವಿಸುತ್ತಾರೆ. ಆದರೆ ವಾಸ್ತವದಲ್ಲಿ ಆ ಸಾಧನಗಳನ್ನು ಹೆಚ್ಚು ಮೊಬಿಲಿಟಿ, ಜಾಯಿಂಟ್ ಮೂವ್‌ಮೆಂಟ್ ಮತ್ತು ಫ್ಲೆಕ್ಸಿಬಿಲಿಟಿ ಹೆಚ್ಚಿಸಲು ವಿನ್ಯಾಸಗೊಳಿಸಲಾಗಿರುತ್ತದೆ. ಅವು ಸ್ನಾಯುಗಳ ಮೇಲೆ ಸಾಕಷ್ಟು ಒತ್ತಡ ಅಥವಾ ಪ್ರತಿರೋಧ ನೀಡುವುದಿಲ್ಲ. ಆದ್ದರಿಂದ ಮಸಲ್ ಬಿಲ್ಡ್ ಮಾಡಲು ಸ್ಟ್ರೆಂತ್ ಮತ್ತು ಎಂಡುರನ್ಸ್ ಹೆಚ್ಚಿಸಲು ಅವು ಹೆಚ್ಚು ಪರಿಣಾಮಕಾರಿ ಅಲ್ಲ, ಸಮತೋಲಿತ ಫಿಟ್ನೆಸ್ ರುಟೀನ್‌ನಲ್ಲಿ ವಾಕಿಂಗ್ ಜತೆಗೆ ಸ್ಟ್ರೆಂತ್ ಟ್ರೇನಿಂಗ್ ಅನ್ನು ಸೇರಿಸಿದಾಗ ಮಾತ್ರ ದೇಹ ಸಂಪೂರ್ಣ ಬಲಿಷ್ಠವಾಗುತ್ತದೆ ಮತ್ತು ದೀರ್ಘಕಾಲ ಆರೋಗ್ಯವಂತರಾಗಲು ಸಾಧ್ಯವಾಗುತ್ತದೆ. ಜತೆಗೆ ಪಾರ್ಕ್‌ನಲ್ಲಿ ಸೈಡ್ ವಾಕಿಂಗ್, ಬ್ಯಾಕ್ ವಾಕಿಂಗ್ ಮಾಡಬಹುದು. ಇದನ್ನು ಮಾಡುವಾಗ ತುಸು ಎಚ್ಚರಿಕೆ ವಹಿಸುವುದು ಮುಖ್ಯ. ಬ್ಯಾಕ್ ವಾಕಿಂಗ್ ಮಾಡುವುದರಿಂದ ಬ್ಯಾಕ್ ಮಸಲ್ ಬಲಿಷ್ಠವಾಗುತ್ತದೆ. ಇದು ಕ್ಯಾಲೊರಿ ಬರ್ನ್‌ಗೆ ಕೂಡ ಸಹಕಾರಿ. ಸೈಡ್ ಸೈಡ್ ವಾಕಿಂಗ್ ಮಾಡುವ ಜತೆಗೆ ಲ್ಯಾಟರಲ್ ವಾಕಿಂಗ್ ಹಾಗೂ ಕೊಬ್ಬು ಕರಗಿಸಲು ಸಹಕಾರಿಯಾದ ಜಪಾನೀಸ್ ವಾಕಿಂಗ್ ಕೂಡ ಪ್ರಯೋಜನಕಾರಿ. ಮಾಮೂಲಿ ವಾಕಿಂಗ್ ಜತೆ ಇಂತಹ ವೈವಿಧ್ಯಮಯ ವಾಕಿಂಗ್ ಸ್ಟೈಲ್‌ಗಳನ್ನು ಅಳವಡಿಸಿಕೊಂಡರೆ ನಡಿಗೆಯಲ್ಲಿ ಏಕತಾನತೆ ಇರುವುದಿಲ್ಲ. ಜತೆಗೆ ಸ್ನಾಯುಖಂಡಗಳು ಹೆಚ್ಚು ಶಕ್ತಿಯುತವಾಗುತ್ತವೆ.



ವನಿತಾ ಅಶೋಕ್
ಫಿಟ್ ಇಂಡಿಯಾ ರಾಯಭಾರಿ

ದಿನ ಭವಿಷ್ಯ

ಶ್ರೀಪತಿ ಭಟ್ ಆಚಾರ್ಯ, ಬೆಂಗಳೂರು

ನಿಮ್ಮ ರಾಶಿಚಕ್ರಕ್ಕೆ ಅನುಗುಣವಾಗಿ ಸೂಕ್ತವಾದ ರತ್ನಗಳು, ಶಿಕ್ಷಣ, ವೃತ್ತಿಜೀವನ, ವಿವಾಹ, ಸಂತಾನ, ಆರೋಗ್ಯ, ಆರ್ಥಿಕ ಸ್ಥಿತಿ ಮತ್ತು ಇನ್ನಿತರ ವಿಷಯಗಳ ಬಗ್ಗೆ ವಿವರಗಳಿಗಾಗಿ ಹಾಗೆಯೇ ಸಮಸ್ಯೆಗಳಿಗೆ ಪರಿಹಾರ ರೂಪದ ಪೂಜೆಗಳು, ವಿವಾಹ ಹೊಂದಾಣಿಕೆ, ಮಕ್ಕಳ ಜಾತಕ ಮತ್ತು ಶೈಕ್ಷಣಿಕ ಪ್ರಗತಿಯ ಬಗ್ಗೆ ಮಾಹಿತಿಗಾಗಿ ದಯವಿಟ್ಟು ಖುದ್ದಾಗಿ ಭೇಟಿ ನೀಡಿ.
ದೂ: 9513747474

ಸಿಂಹ, ತುಲಾ -ಈ ರಾಶಿಯವರಿಗೆ ಬಹು ವಿಧ ಯೋಗ

ಮೇಷ: ತಿಳಿ ಮನಸ್ಸಿನಿಂದ ಆಲೋಚಿಸಿ ಅಥವಾ ಅನುಭವಸ್ಥರ ಅಭಿಪ್ರಾಯ ತಿಳಿದು ನಿರ್ಧಾರ ಕೈಗೊಳ್ಳಿ. ಮಕ್ಕಳ ವಿದ್ಯಾಭ್ಯಾಸವು ಉತ್ತಮವಾಗಿ ಸುಖ, ಶಾಂತಿ ತುಂಬಿರುತ್ತದೆ. **ಶುಭ ಸಂಖ್ಯೆ:** 2, **ಬಣ್ಣ:** ನೀಲಿ
(**ನಾಮಾಕ್ಷರ:** ಚು, ಚೆ, ಚೊ, ಲ, ಲಿ, ಲು, ಲೆ, ಲೊ, ಅ) ಅಶ್ವಿನಿ, ಭರಣಿ, ಕೃತ್ತಿಕಾ 1ನೇ ಪಾದ

ವೃಷಭ: ಮಾನಸಿಕ ಒತ್ತಡ, ಶತ್ರು ನಿವಾರಣೆಗೆ ಕುಲದೇವರ ದರ್ಶನ ಉಪಕಾರಿಯಾಗುವುದು. ವಾಹನದ ಬಿಡಿ ಭಾಗ ಮಾರಾಟಗಾರರಿಗೆ ಹೆಚ್ಚು ಲಾಭವಿದೆ. ಹೈನುಗಾರಿಕೆಯನ್ನು ಉಪ ವೃತ್ತಿಯಾಗಿ ಮಾಡಿಕೊಳ್ಳಬಹುದು. **ಶುಭ ಸಂಖ್ಯೆ:** 4, **ಬಣ್ಣ:** ಕಂದು
(ಇ, ಉ, ಎ, ಒ, ವ, ವಿ, ವು, ವೆ, ವೊ) ಕೃತ್ತಿಕಾ 2, 3, 4ನೇ ಪಾದ, ರೋಹಿಣಿ, ಮೃಗಶಿರ 1, 2ನೇ ಪಾದ

ಮಿಥುನ: ಅಧ್ಯಯನದಲ್ಲಿ ಆಸಕ್ತಿ ಹೆಚ್ಚುವುದು ಮತ್ತು ಉತ್ತಮ ಜ್ಞಾನಾರ್ಜನೆ ಆಗುವುದು. ಜೀವನ ಸಂಗಾತಿಯ ಆಯ್ಕೆ ವಿಚಾರದಲ್ಲಿ ಹಿರಿಯರ ಮಾತಿನತ್ತ ಗಮನ ಕೊಡಿ. ಚಿತ್ರ ವಿತರಕರಿಗೆ ಹೆಚ್ಚಿನ ವರಮಾನದ ಸಾಧ್ಯತೆ ಇದೆ. **ಶುಭ ಸಂಖ್ಯೆ:** 6, **ಬಣ್ಣ:** ಕಿತ್ತಳೆ
(ಕ, ಕಿ, ಕು, ಘ, ಙ, ಛ, ಕೆ, ಕೊ, ಹ) ಮೃಗಶಿರ 3, 4, ಆರ್ದ್ರೆ, ಪುನರ್ವಸು 1, 2, 3

ಕಟಕ: ನಿಮ್ಮ ಮಾರ್ಗದರ್ಶನ ಮತ್ತು ಸಲಹೆ ಸೂಚನೆಗಳಿಗಾಗಿ ಜನರು ಕಾಯುವುದನ್ನು ನೋಡಿ ಹೆಮ್ಮೆ ಪಡುವಿರಿ. ಗುತ್ತಿಗೆ ಆಧರಿತ ಉತ್ತಮ ಉದ್ಯೋಗ ದೊರೆಯಲಿದೆ. **ಶುಭ ಸಂಖ್ಯೆ:** 8, **ಬಣ್ಣ:** ಬಿಳಿ
(ಹಿ, ಹು, ಹೆ, ಹೊ, ಡ, ಡಿ, ಡು, ಡೆ, ಡೊ) ಪುನರ್ವಸು 4ನೇ ಪಾದ, ಪುಷ್ಯ, ಆಶ್ಲೇಷ

ಸಿಂಹ: ಕುಟುಂಬಕ್ಕೆ ಸಂಬಂಧಪಟ್ಟ ಮಹತ್ವದ ವಿಷಯಗಳನ್ನು ಗಂಭೀರವಾಗಿ ಚಿಂತಿಸಿ ನಿರ್ಧರಿಸುವುದು ಉತ್ತಮ. ಬದಲಾವಣೆಯನ್ನು ಬಯಸಿದ ನಿಮಗೆ ಇದು ಹರ್ಷದ ಸಮಯ. ಕೃಷಿ ಕೆಲಸಗಳು ಹೆಚ್ಚಲಿವೆ. **ಶುಭ ಸಂಖ್ಯೆ:** 1, **ಬಣ್ಣ:** ಹಸಿರು
(ಮ, ಮಿ, ಮು, ಮೆ, ಮೊ, ಟ, ಟಿ, ಟು, ಟೆ) ಮಖೆ, ಪುಬ್ಬೆ, ಉತ್ತರ ಫಲ್ಗುಣಿ 1ನೇ ಪಾದ

ಕನ್ಯಾ: ಧೈರ್ಯ ಮತ್ತು ಪ್ರೇರಣಾ ಶಕ್ತಿಯ ಭಾವವನ್ನು ಹೊಂದುವುದರಿಂದ ಸಮಸ್ಯೆಯನ್ನು ಸುಲಭವಾಗಿ ಎದುರಿಸಬಹುದು. ಇತರ ಯೋಜನೆಗಳ ನಡುವೆ ಮಾಡುವ ಕೆಲಸದಲ್ಲಿ ಗಮನವಿಲ್ಲದಿದ್ದರೆ ದಂಡ ತೆರುವಂತಾಗುವುದು. **ಶುಭ ಸಂಖ್ಯೆ:** 3, **ಬಣ್ಣ:** ಗಾಢ ನೀಲಿ
(ಟೊ, ಪ, ಪಿ, ಪು, ಷ, ಣ, ಠ, ಪೆ, ಪೊ) ಉತ್ತರ ಫಲ್ಗುಣಿ 2, 3, 4ನೇ ಪಾದ, ಹಸ್ತ, ಚಿತ್ತಾ 1, 2ನೇ ಪಾದ

ತುಲಾ: ಗಂಡ-ಹೆಂಡತಿ ನಡುವಿನ ವಾಕ್ಸಮರದಲ್ಲಿ ಮಧ್ಯ ಪ್ರವೇಶಿಸಿ ಸಮಸ್ಯೆಯನ್ನು ಬಿಗಡಾಯಿಸುವಿರಿ. ಕೌಟುಂಬಿಕ ಅಭಿವೃದ್ಧಿಯಂತಹ ವಿಷಯಗಳಿಂದ ಖುಷಿ ಸಿಗುವುದು. **ಶುಭ ಸಂಖ್ಯೆ:** 5, **ಬಣ್ಣ:** ಖಾಕಿ
(ರ, ರಿ, ರು, ರೆ, ರೊ, ತ, ತಿ, ತು, ತೆ) ಚಿತ್ತಾ 3, 4ನೇ ಪಾದ, ಸ್ವಾತಿ, ವಿಶಾಖ 1, 2, 3ನೇ ಪಾದ

ವೃಶ್ಚಿಕ: ಮಿತ್ರರಿಂದ ಮುಖ್ಯವಾದ ವ್ಯಕ್ತಿಯ ಪರಿಚಯ ಮತ್ತು ಅಭಿವೃದ್ಧಿಯ ಮಾಹಿತಿ ದೊರೆಯಲಿದೆ. ಆಹಾರದಲ್ಲಿ ವಿಷದ ಅಂಶ ಸೇರಿ ಆರೋಗ್ಯ ಹದಗೆಡುವ ಸಾಧ್ಯತೆ ಇದೆ. **ಶುಭ ಸಂಖ್ಯೆ:** 7, **ಬಣ್ಣ:** ಕಪ್ಪು
(ತೊ, ನ, ನಿ, ನು, ನೆ, ನೊ, ಯ, ಯಿ, ಯು) ವಿಶಾಖ 4ನೇ ಪಾದ, ಅನುರಾಧ, ಜ್ಯೇಷ್ಠ

ಧನುಸ್ಸು: ರಾಜಕೀಯದವರಿಗೆ ಜನಪ್ರಿಯತೆ ಹೆಚ್ಚುವುದರಿಂದ ಶತ್ರು ಬಾಧೆ ಕಂಡುಬರಲಿದೆ. ಲೇಖನ ಮಾಲೆ ಸಿದ್ಧಪಡಿಸುವ ನಿಮ್ಮ ಹಲವು ದಿನಗಳ ಕನಸು ಈಡೇರಲಿದೆ. ಹಾಡುಗಾರರಿಗೆ ಜನಪ್ರಿಯತೆ ಹೆಚ್ಚುತ್ತದೆ. **ಶುಭ ಸಂಖ್ಯೆ:** 9, **ಬಣ್ಣ:** ಆಲಿವ್
(ಯೆ, ಯೊ, ಬ, ಬಿ, ಬು, ಧ, ಭ, ಢ, ಬೆ) ಮೂಲ, ಪೂರ್ವಾಷಾಢ, ಉತ್ತರಾಷಾಢ 1ನೇ ಪಾದ

ಮಕರ: ನಿಮ್ಮ ಭರವಸೆಯ ಮಾತುಗಳು ಸಹೋದ್ಯೋಗಿಯೊಬ್ಬರಿಗೆ ಆತ್ಮಸ್ಥೈರ್ಯ ಕೊಡುವುದು. ಧಾರ್ಮಿಕ ಕೆಲಸಗಳನ್ನು ಮಾಡುವ ಅವಕಾಶ ಸಿಗುವುದು. ಸಂತಾನ ಅಪೇಕ್ಷಿಗಳಿಗೆ ಶುಭ ಸುದ್ದಿ ಇದೆ. **ಶುಭ ಸಂಖ್ಯೆ:** 6, **ಬಣ್ಣ:** ಗುಲಾಬಿ
(ಬೊ, ಜ, ಜಿ, ಶಿ, ಶು, ಶೆ, ಶೊ, ಗ, ಗಿ) ಉತ್ತರಾಷಾಢ 2, 3, 4 ನೇ ಪಾದ, ಶ್ರವಣ, ಧನಿಷ್ಠ 1, 2ನೇ ಪಾದ

ಕುಂಭ: ಮನೆಯ ಪತ್ರ ಅಥವಾ ಕಂದಾಯ ಇಲಾಖೆಯ ವ್ಯವಹಾರದಲ್ಲಿ ಸಂಕಷ್ಟದ ಪರಿಸ್ಥಿತಿ ಎದುರಾಗಲಿದೆ. ಅಪರೂಪದ ವ್ಯಕ್ತಿಯನ್ನು ಭೇಟಿಯಾಗುವ ಸಂದರ್ಭ ಬರಲಿದೆ. ಸರ್ವತೋಮುಖ ಬೆಳವಣಿಗೆ ಕಾಣುವಿರಿ. **ಶುಭ ಸಂಖ್ಯೆ:** 1, **ಬಣ್ಣ:** ನೀಲಿ
(ಗು, ಗೆ, ಗೊ, ಸ, ಸಿ, ಸು, ಸೆ, ಸೊ, ದ) ಧನಿಷ್ಠ 3, 4ನೇ ಪಾದ, ಶತಭಿಷ, ಪೂರ್ವಾಭಾದ್ರ 1, 2, 3ನೇ ಪಾದ

ಮೀನ: ಪರಿಶ್ರಮಕ್ಕೆ ತಕ್ಕ ಆದಾಯವಿಲ್ಲದೆ ಸೊರಗಿರುವ ನಿಮಗೆ ಕನಸುಗಳು ಈಡೇರುವ ಅವಕಾಶವನ್ನು ಅಪರಿಚಿತ ವ್ಯಕ್ತಿಯೊಬ್ಬರು ತೋರುವರು. ವಾತಾವರಣದ ಬದಲಾವಣೆ ಆರೋಗ್ಯದ ಮೇಲೆ ಪ್ರಭಾವ ಬೀರಲಿದೆ. **ಶುಭ ಸಂಖ್ಯೆ:** 2, **ಬಣ್ಣ:** ಸಮುದ್ರ ನೀಲಿ
(ದಿ, ದು, ಖ, ಝ, ಥ, ದೆ, ದೊ, ಚ, ಚಿ) ಪೂರ್ವಾಭಾದ್ರ 4ನೇ ಪಾದ, ಉತ್ತರಾಭಾದ್ರ, ರೇವತಿ

ಲವಲVK ವೆಲ್ನೆಸ್ ಟಿಪ್ಸ್

ತ್ವಚೆಯ ಹೊಳಪಿಗೆ ರೋಸ್ ವಾಟರ್ ಟೋನರ್

ಬೇಸಿಗೆಯಲ್ಲಿ ತೇವಾಂಶವು ಚರ್ಮದ ಮೇಲೆ ಸಾಕಷ್ಟು ಪರಿಣಾಮ ಬೀರುತ್ತದೆ. ಈಗ ಚರ್ಮವನ್ನು ತಾಜಾ ಆಗಿಡಲು ರೋಸ್ ವಾಟರ್ ಆಧರಿತ ಟೋನರ್ ಬಳಕೆ ಉತ್ತಮ. ಇದರ ಕೆಲವು ವಿಧಗಳು ಹೀಗಿವೆ.

ಪ್ಲಮ್ ಬಲ್ಗೇರಿಯನ್ ರೋಸ್ ವಾಟರ್: ಇದರಲ್ಲಿ ಬಲ್ಗೇರಿಯನ್ ಗುಲಾಬಿ ಹೂವಿನ ಸಾರ ಮತ್ತು ಹೈಲುರಾನಿಕ್ ಆಮ್ಲವಿದೆ. ಇದರ ಟೋನರ್ ಚರ್ಮಕ್ಕೆ ಸರಿ ಪ್ರಮಾಣದ ತೇವಾಂಶ ನೀಡಿ ಮುಖ ತಾಜಾ ಮತ್ತು ಮೃದುವಾಗಿ ಕಾಣುವಂತೆ ಮಾಡುತ್ತದೆ.

ಆಯುರ್ವೇದಿಕ್ ಪ್ಯೂರ್ ರೋಸ್ ವಾಟರ್: ಕನೌಜ್ ಗುಲಾಬಿಗಳಿಂದ ತಯಾರಿಸಲ್ಪಟ್ಟ ಈ ಟೋನರ್ ಅತ್ಯಂತ ಮೃದುವಾಗಿದ್ದು, ಸೂಕ್ಷ್ಮ ಚರ್ಮದವರಿಗೆ ಸೂಕ್ತ. ಇದು ಚರ್ಮದ ಕಿರಿಕಿರಿ ಕಡಿಮೆ ಮಾಡಿ ನೈಸರ್ಗಿಕ ಸಮತೋಲನ ಕಾಪಾಡುತ್ತದೆ.

ಪ್ಯೂರ್ ರೋಸ್ ವಾಟರ್ ಫೇಸ್ ಮಿಸ್ಟ್: ಹಿಮಾಲಯದ ರೋಸ್‌ನಿಂದ ತಯಾರಾಗುವ ಇದು ಚರ್ಮದ ಕಾಂತಿ ಹೆಚ್ಚಿಸುತ್ತದೆ.

ಕನೌಜ್ ರೋಸ್ ವಾಟರ್ ಫೇಸ್ ಮಿಸ್ಟ್: ಶುದ್ಧ ಕನೌಜ್ ಗುಲಾಬಿ ಸಾರಗಳಿಂದ ತಯಾರಿಸಲಾಗುವ ಈ ಟೋನರ್ ಚರ್ಮಕ್ಕೆ ತಾಜಾತನ ನೀಡುತ್ತದೆ.

ನೈಸರ್ಗಿಕ ರೋಸ್ ವಾಟರ್: ಆ್ಯಂಟಿಆಕ್ಸಿಡೆಂಟ್‌ಗಳಿಂದ ಸಮೃದ್ಧ, ಚರ್ಮದ ಪಿಎಚ್ ಮಟ್ಟವನ್ನು ಸಮತೋಲನದಲ್ಲಿಡಲು ಸಹಾಯ ಮಾಡುತ್ತದೆ. ನಿತ್ಯದ ಬಳಕೆಗೆ ಸೂಕ್ತ.

ರೋಸ್ ವಾಟರ್ ಟೋನರ್ ಮಿಸ್ಟ್: ಸಾವಯವ ಸೌಂದರ್ಯ ಉತ್ಪನ್ನ ಇಷ್ಟಪಡುವವರಿಗೆ ಉತ್ತಮ ಆಯ್ಕೆ. ಇದು ಚರ್ಮದ ಬಣ್ಣ ತಿಳಿಯಾಗಿಸಲು, ಮೃದುವಾಗಿಸಲು ಸಹಕಾರಿ.

ವಿಜಯಬಂಧ - 7942



ಎಡದಿಂದ ಬಲಕ್ಕೆ
1 ಚಕಚಕನೆ ಸುತ್ತುವ ರಾಟೆ 2
4 ಮೀನನ್ನು ಕಬಳಿಸಲು ನೀರಿನ ಬಳಿ ನಿಂತ ಪಕ್ಷಿ 2
6 ತಿಂಗಳಿಗೊಮ್ಮೆ ಪ್ರಕಟವಾಗುವ ನಿಯತಕಾಲಿಕೆ 5
7 ಕರಡಿಯು ಕೈ ಹಿಡಿದು ಪಾವತಿಸಿದ ತೆರಿಗೆ 2
9 ಹತ್ತಾನೆಯುಷ್ಟು ಅಗಲವಾದ ಲಲಾಟ 2
10 ಸರಿಯಾಗಿ ಕುದುರೆ ಏರಿ ಮಾಡಿದ ಪಯಣ 3
12 ನಾರದರ ದನಿಯಲ್ಲೇ ಅಡಗಿರುವ ಧ್ವನಿ 3
14 ನೌಕರ ತಲೆಯ ಮೇಲಿರಿಸಿಕೊಂಡು ಕುಣಿಸಿದ ಹೂಕಲಶ 3
16 ಪದಗಳನ್ನು ದಾಖಲಿಸಿದ ಕಾಗದದ ಮಡಿಕೆ 3
18 ಹತ್ತಿರಕ್ಕೆ ಹೋಗಿ ತಂದ ಅರಳಿ 2
19 ಸಮರ ನೋಡಲು ಇಳಿದ ವೃಕ್ಷ 2
21 ಸಸ್ಯಗಳ ಸಂತತಿ ಅಭಿವೃದ್ಧಿಗೆ ಹೂವಿನ ಧೂಳಿ ನಡೆಸುವ ಪ್ರಕ್ರಿಯೆ 5
22 ಅಸ್ತವ್ಯಸ್ತವಾಗಿರುವ ಹಾದಿ 2
23 ಪಂಕಜ ಗಾಳಿ ಬೀಸಲು ಅಳವಡಿಸಿಕೊಂಡ ಉಪಕರಣ 2

ಮೇಲಿನಿಂದ ಕೆಳಕ್ಕೆ
1 ಚಮತ್ಕಾರ ತೋರಿದ ನೂಲು ತೆಗೆಯುವ ಉಪಕರಣ 3
2 ಅರಸನಿಗೆ ಪುರದಿಂದ ತಂದುಕೊಟ್ಟ ಮಾವಿನ ಜಾತಿ 4
3 ಅನಸೂಯೆಯ ಗಂಡ ಈ ಋಷಿ 4
5 ಕಲ್ಲಿನಿಂದ ಬೀಸಿ ಹೊಡೆಯುವ ಸಾಧನ 3
8 ಅರಸ ಸೇವಿಸಿದ ಸತ್ವವನ್ನು ಹೊಂದಿದ ದ್ರವ 2
9 ಮಳೆ ಅಳೆಯುವ ಪ್ರಮಾಣದಲ್ಲಿದೆ ಪಕ್ವತೆ 2
11 ನರರ ಜೊತೆ ಜೊತೆಯೇ ಬಂದ ಮಂಗ 3
13 ನಾಗರ ಮುಡಿದು ಬಂದ ದೇವಋಷಿ 3
14 ನಾಕ ಹತ್ತಿ ಹೋದಾಗ ಹಿಡಿದಿದ್ದ ಕಠಾರಿ 2
15 ಆನೆಗಳಲ್ಲಿ ಈ ಆನೆ ಅರಸನಂತೆ ಶೋಭಿಸಿದೆ 4
16 ಪರರ ಜೊತೆ ಒಬ್ಬರಿಗೊಬ್ಬರು ನೆರವಾದ ರೀತಿ 4
17 ಅರಮನೆಯಿಂದ ಇಳಿದು ಮರ ಹತ್ತಿದ ಲಕ್ಷ್ಮಿ 2
18 ಹರನ ಗುರು ಭಾರವೇ ಇಲ್ಲ 3
20 ಸರಸಿಯಾದ ಈತ ವಿಲಾಸಿ 3

ವಿಜಯಬಂಧ | 7941
ಎಡದಿಂದ ಬಲಕ್ಕೆ: 1.ಸರಸ 3.ಸಲಗ 5.ಕಾಡು 6.ಸುಮಾ 7.ಕವಾಲಿ 8.ಧಾವನ 10.ಕಮಲವನ 14.ವರಸಕರ 18.ಗವಸ 19.ಸಾಮಜ 20.ರಾತ್ರಿ 21.ಮಾರು 22.ಕಣಜ 23.ಹಣತಿ.
ಮೇಲಿನಿಂದ ಕೆಳಕ್ಕೆ: 1.ಸತ್ಯಕಥೆ 2.ಸಕಾಲಿಕ 3.ಸಮಾಧಾನ 4.ಗಜಾನನ 8.ಜಾಲ 11.ಮಧುರ 12.ವಣಿಕ 13.ನಾಗಲೋಕ 14.ವನರಾಜ 15.ನತ್ತು 16.ರಸಾರುಹ 17.ರಾಜನೀತಿ.

ಅ.ನಾ. ಪ್ರಹ್ಲಾದರಾವ್

ಮರಗಳಿಗೆ ಜಿಯೋ ಟ್ಯಾಗ್

ವಿಕ ಸುದ್ದಿಲೋಕ ಹಾಸನ

ಐದಳ್ಳ ಕಾವಲು, ರಾಮದೇವರಹಳ್ಳ ಕಾವಲು ಅರಣ್ಯ ಪ್ರದೇಶದಲ್ಲಿ ಶ್ರೀಗಂಧ, ತೇಗ, ಬೀಟೆ ಸೇರಿ ಬೆಲೆಬಾಳುವ ಮರಗಳಿಗೆ ಜಿಯೋ ಟ್ಯಾಗ್ ಮಾಡಿ ಸಂರಕ್ಷಿಸಬೇಕು. ಗಸ್ತು ನಿಯೋಜಿಸಬೇಕು ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಸೂಚಿಸಿದರು.

ಬೇಲೂರಿನಿಂದ ಬೆಂಗಳೂರಿಗೆ ಮರಳುವ ಮಾರ್ಗದಲ್ಲಿ ಎತ್ತಿನಹೊಳೆ ಯೋಜನೆ ಕಾಮಗಾರಿ ನಡೆಯುತ್ತಿರುವ ಅರಣ್ಯ ಪ್ರದೇಶ ಐದಳ್ಳ ಕಾವಲು, ರಾಮದೇವರಹಳ್ಳ ಅರಣ್ಯ ಪ್ರದೇಶಕ್ಕೆ ಅವರು ಭೇಟಿ ನೀಡಿ ಪರಿಶೀಲಿಸಿದರು.

''ರಾಮದೇವರ ಹಳ್ಳ ಪ್ರದೇಶದಲ್ಲಿ 9 ಸಾವಿರಕ್ಕೂ ಹೆಚ್ಚು ಎಕರೆ ಅರಣ್ಯ ಪ್ರದೇಶವಿದ್ದು, ಕೆಲವು ಕಡೆ ಅಕ್ರಮ ಮಂಜೂರಾತಿ ಆಗಿದೆ. ಪ್ರಸ್ತುತ ಖಾಲಿ ಇರುವ ಅರಣ್ಯ ಭೂಮಿಯನ್ನು ವಶಕ್ಕೆ ಪಡೆದು ಸಂರಕ್ಷಿಸಬೇಕು. ಒತ್ತುವರಿ ತೆರವು, ಅಕ್ರಮ ಮಂಜೂರಾತಿಯ ರದ್ದತಿಗೆ ಕಾನೂನು ರೀತ್ಯ ಕ್ರಮಕೈಗೊಳ್ಳಬೇಕು,'' ಎಂದು ಸೂಚನೆ ನೀಡಿದರು.

''2015ರ ನಂತರ ಆಗಿರುವ ಎಲ್ಲ ಅರಣ್ಯ ಭೂಮಿ ಒತ್ತುವರಿ ತೆರವಿಗೆ ಹಲವು ಬಾರಿ ಸೂಚಿಸಿದ್ದರೂ ಕ್ರಮ ಏಕೆ ಆಗಿಲ್ಲ,'' ಎಂದು ಪ್ರಶ್ನಿಸಿದ ಅವರು, ''ಪ್ರಕೃತಿ, ಪರಿಸರ ಉಳಿಸಲು ರಾಜ್ಯದ ಎಲ್ಲ ನಗರ ಮತ್ತು ಪಟ್ಟಣ ಪ್ರದೇಶದ ಸಮೀಪ ಇರುವ ಅರಣ್ಯ ಭೂಮಿ ಒತ್ತುವರಿ ಆಗದಂತೆ ಕಟ್ಟೆಚ್ಚರ ವಹಿಸಬೇಕು,'' ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಅರಣ್ಯ ಪಡೆ ಮುಖ್ಯಸ್ಥರಾದ ಮೀನಾಕ್ಷಿ ನೇಗಿ, ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಜಾಗೃತದಳ ಮತ್ತು ಸಾಮಾಜಿಕ ಅರಣ್ಯ) ಮನೋಜ್ ತ್ರಿಪಾಠಿ, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಶಿವಶಂಕರ್, ಡಿಸಿಎಫ್ ರವೀಂದ್ರ ಕುಮಾರ್, ಉಪ ಅರಣ್ಯ ಸಂರಕ್ಷಣಾಧಿಕಾರಿ ಸೌರಭ್ ಕುಮಾರ್ ಇದ್ದರು.

ಅರಣ್ಯ ಸಚಿವ ಖಂಡ್ರೆ ಸೂಚನೆ

ಹಾಸನದ ರಾಮದೇವರಹಳ್ಳ ಅರಣ್ಯ ಪ್ರದೇಶವನ್ನು ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು ಭಾನುವಾರ ಪರಿಶೀಲನೆ ನಡೆಸಿದರು.

ಮೂಡಿಗೆರೆಯಲ್ಲಿ 23ಕ್ಕೆ ಬಗರ್ ಹುಕುಂ ಸಂತ್ರಸ್ತರ ಸಮಾವೇಶ

ಕಡೂರು (ಚಿಕ್ಕಮಗಳೂರು)

ಬಗರ್‌ಹುಕುಂ ಮಂಜೂರಾತಿ ರದ್ದುಪಡಿಸಿರುವ ಸರಕಾರದ ರೈತ ವಿರೋಧಿ ನೀತಿಯ ವಿರುದ್ಧ ನ್ಯಾಯಾಂಗ ಹೋರಾಟಕ್ಕೆ ಮುನ್ನುಡಿ ಬರೆಯುವ ನಿಟ್ಟಿನಲ್ಲಿ ಮೇ 23ರಂದು ಮೂಡಿಗೆರೆಯಲ್ಲಿ 'ನಮ್ಮ ಭೂಮಿ ನಮ್ಮ ಹಕ್ಕು' ಹೆಸರಿನಲ್ಲಿ ಬಗರ್ ಹುಕುಂ ಸಂತ್ರಸ್ತರ ಸಮಾವೇಶ ಏರ್ಪಡಿಸಲಾಗಿದೆ ಎಂದು ಮಾಜಿ ಶಾಸಕ ವೈ.ಎಸ್.ವಿ.ದತ್ತ ತಿಳಿಸಿದರು.

''ಕಡೂರಿನ ಶಾಸಕರಾಗಿದ್ದ ಡಾ. ವೈ.ಸಿ.ವಿಶ್ವನಾಥ್, ಬೆಳ್ಳಿ ಪ್ರಕಾಶ್ ಹಾಗೂ ನನ್ನ ಅವಧಿಯಲ್ಲಿ ಬಗರ್‌ಹುಕುಂ ಸಾಗುವಳಿದಾರರಿಗೆ ನಿಯಮದ ಪ್ರಕಾರವೇ ಮಂಜೂರಾತಿ ನೀಡಲಾಗಿದೆ. ಆದರೆ, ಬಗರ್‌ಹುಕುಂ ಮಂಜೂರಾತಿಯಲ್ಲಿ ನಿಯಮ ಉಲ್ಲಂಘನೆಯಾಗಿದೆ ಎಂದು ಕಂದಾಯ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಮೂಲಕ ತನಿಖೆ ನಡೆಸಿ, ಮಂಜೂರಾತಿ ರದ್ದುಪಡಿಸಿ ಪಹಣಿ ವಜಾ ಮಾಡುತ್ತಿದೆ,'' ಎಂದು ಅಸಮಾಧಾನ ವ್ಯಕ್ತಪಡಿಸಿದರು.

''ಸರಕಾರದ ಈ ಆದೇಶಕ್ಕೆ ಮೂಡಿಗೆರೆಯ ಕೆಲ ರೈತರು ಹೈಕೋರ್ಟ್‌ನಿಂದ ತಡೆಯಾಜ್ಞೆ ತಂದಿದ್ದಾರೆ. ಕಡೂರಿನ ಸಂತ್ರಸ್ತ ರೈತರು ಸಹ ತಡೆಯಾಜ್ಞೆ ತರಬೇಕಿದೆ. ಮೂಡಿಗೆರೆಯಲ್ಲಿ 3 ಸಾವಿರ ಹಾಗೂ ಕಡೂರಿನಲ್ಲಿ 4 ಸಾವಿರ ಸಂತ್ರಸ್ತರಿದ್ದಾರೆ. ಇವರೆಲ್ಲರನ್ನು ಒಂದೆಡೆ ಸೇರಿಸಿ, ವಕಾಲತ್ತು ಹಾಕಿಸಿ, ನ್ಯಾಯಾಲಯದ ತಡೆಯಾಜ್ಞೆ ಎಲ್ಲರಿಗೂ ಅನ್ವಯವಾಗುವಂತೆ ಮಾಡುವುದು ನಮ್ಮೆಲ್ಲರ ಕರ್ತವ್ಯ,'' ಎಂದರು.

ಬಗರ್‌ಹುಕುಂ ಸಮಿತಿಗೆ ಶಾಸಕರು ಅಧ್ಯಕ್ಷರಾಗಿರುತ್ತಾರೆ. ತಹಸೀಲ್ದಾರ್ ಕಾರ್ಯದರ್ಶಿಯಾಗಿರುತ್ತಾರೆ. ಹಾಗಾಗಿ ಶಾಸಕನೊಬ್ಬನೇ ಏಕಪಕ್ಷೀಯ ನಿರ್ಧಾರ ಕೈಗೊಳ್ಳಲು ಸಾಧ್ಯವಿಲ್ಲ. ಯಾರೋ ಅಧಿಕಾರಿಗಳಿಂದ ಅಕ್ರಮ ಭೂ ಮಂಜೂರು ಆಗಿದ್ದರೆ ಅದನ್ನು ರದ್ದುಪಡಿಸಲಿ. ಅದನ್ನು ಬಿಟ್ಟು ಇಡೀ ಮಂಜೂರಾತಿಯನ್ನೇ ರದ್ದುಪಡಿಸುವುದು ಸರಿಯಲ್ಲ.
- ವೈ.ಎಸ್.ವಿ.ದತ್ತ
ಮಾಜಿ ಶಾಸಕ

ಕುಕ್ಕೆ ದೇವಳದ ಆದಾಯ ₹167.89 ಕೋಟಿಗೆ ಏರಿಕೆ

ಸುಬ್ರಹ್ಮಣ್ಯ (ದ.ಕ.): ಮುಜರಾಯಿ ಇಲಾಖೆ ಅಧೀನದಲ್ಲಿರುವ ಕುಕ್ಕೆ ಸುಬ್ರಹ್ಮಣ್ಯ ದೇವಾಲಯವು 2025-26ನೇ ಸಾಲಿನ ಆರ್ಥಿಕ ವರ್ಷದಲ್ಲಿ 167.89 ಕೋಟಿ ರೂಪಾಯಿಗೂ ಹೆಚ್ಚು ಆದಾಯ ಗಳಿಸಿ ಸತತ 15ನೇ ವರ್ಷವೂ ರಾಜ್ಯದ ಅತ್ಯಂತ ಶ್ರೀಮಂತ ದೇವಸ್ಥಾನವೆಂಬ ಶ್ರೇಯ ಉಳಿಸಿಕೊಂಡಿದೆ. 2025ರ ಏ.1ರಿಂದ 2026ರ ಮಾರ್ಚ್ 31ರವರೆಗೆ ಒಟ್ಟು 85.20 ಕೋಟಿ ರೂ. ಖರ್ಚಾಗಿದೆ.

ಗುತ್ತಿಗೆಗಳಿಂದ 2.53 ಕೋಟಿ ರೂ., ಧಾನ್ಯಗಳ ಇಳುವರಿ ಮತ್ತು ತೋಟದ ಉತ್ಪನ್ನದಿಂದ 10.50 ಲಕ್ಷ ರೂ., ಕಟ್ಟಡ ಮತ್ತು ಅಂಗಡಿಗಳ ಬಾಡಿಗೆಯಿಂದ 94.46 ಲಕ್ಷ ರೂ., ಕಾಣಿಕೆಯಿಂದ 5.47 ಕೋಟಿ ರೂ., ಇ-ಹುಂಡಿಯಿಂದ 38.01 ಲಕ್ಷ ರೂ., ಹುಂಡಿಯಿಂದ 24.69 ಕೋಟಿ ರೂ., ಹರಕೆ ಸೇವೆಗಳಿಂದ 64.08 ಕೋಟಿ ರೂ., ಅನುದಾನದಿಂದ 1.67 ಲಕ್ಷ ರೂ., ಹುಂಡಿ ಹಣದ ಮೇಲಿನ ಬಡ್ಡಿ 49.11 ಲಕ್ಷ ರೂ., ಉಳಿತಾಯ ಖಾತೆ ಹಾಗೂ ಇತರ ಬಡ್ಡಿ 41.80 ಲಕ್ಷ ರೂ., ಸ್ವೀಪ್ ವ್ಯವಹಾರದಿಂದ ಬಂದ ಬಡ್ಡಿ 12.90 ಲಕ್ಷ ರೂ., ಇತರ ಬಾಬ್ತುಗಳು 3.20 ಲಕ್ಷ ರೂ., ಛತ್ರ ಸಂರಕ್ಷಣಾ ವಂತಿಗೆ 6.93 ಲಕ್ಷ ರೂ., ಅನ್ನಸಂತರ್ಪಣೆ ನಿಧಿಯಿಂದ 9.14 ಲಕ್ಷ ರೂ., ಅಭಿವೃದ್ಧಿ ನಿಧಿ 14.17 ಲಕ್ಷ ರೂ., ಶಾಶ್ವತ ಸೇವಾ ಮೂಲಧನ 56.70 ಲಕ್ಷ ರೂ. ಹೀಗೆ ಒಟ್ಟು 167.89 ಕೋಟಿ ರೂಪಾಯಿಗೂ ಹೆಚ್ಚು ಆದಾಯ ಬಂದಿದೆ.

ಹುಲಿಗೆಮ್ಮ ದೇವಿ ರಥೋತ್ಸವ ಇಂದು

ಮುನಿರಾಬಾದ್ (ಕೊಪ್ಪಳ): ಹುಲಿಗಿಯ ಹುಲಿಗೆಮ್ಮದೇವಿ ಮಹಾರಥೋತ್ಸವ ಮೇ 11ರಂದು ಸಂಜೆ 5.30ಕ್ಕೆ ಜರುಗಲಿದೆ. ಮೇ 13ರಂದು ರಾತ್ರಿ 8ಕ್ಕೆ ಕೊಂಡದ ಪೂಜೆ, 9ಕ್ಕೆ ಹಿಡಿದಕ್ಷಿಣೆ ವಿತರಣೆ, ಮೇ 14ರಂದು ಬೆಳಗಿನ ಜಾವ ಗಂಗಾದೇವಿ ಪೂಜೆ ಹಾಗೂ 6.30ಕ್ಕೆ ಅಗ್ನಿಕೊಂಡ ನಡೆಯಲಿದೆ,'' ಎಂದು ದೇವಸ್ಥಾನದ ಆಡಳಿತ ಮಂಡಳಿ ತಿಳಿಸಿದೆ.

TIMES interact
Connecting People, Connecting Needs.
ನಿಮ್ಮ ಕ್ಲಾಸಿಫೈಡ್ ಜಾಹೀರಾತಿಗಾಗಿ ಸಂಪರ್ಕಿಸಿ
080-40877 666, 40877 543
ಕರೆ ಮಾಡಿ : 99160 79232
narasinha.kulkarni@timesofindia.com

ಉದ್ಯೋಗ RECRUITMENT

SITUATION VACANT

LEGAL

ADVOCATE

ಉದ್ಯೋಗವಕಾಶ ಬೆಂಗಳೂರಿನ ಹೆಸರಾಂತ ಕಂಪನಿಗೆ ನುರಿತ ಅನುಭವವುಳ್ಳ ವಕೀಲರು (Advocate) ಬೇಕಾಗಿದ್ದಾರೆ. ಸಂಪರ್ಕಿಸಿ: 9187534379

OTHER VACANCIES

DRIVERS

REQUIRED Commercial Driver (4 Wheeler) for Swastik Air Conditioners Jayanagar, Bangalore CONTACT: 6364940675

GENERAL

ಕೆಲಸ ಖಾಲಿ ಇದೆ: ಕರ್ನಾಟಕದಾದ್ಯಂತ ಎಂಎನ್‌ಸಿ ಕಂಪನಿಗಳಾದ ಟಿವಿಎಸ್, ಬ್ರಿಟಾನಿಯಾ ಡೈರಿಗಳಿಗೆ ಹಾಗೂ ಆಫೀಸ್‌ಗಳಿಗೆ 7ನೇ, 10ನೇ, 12ನೇ ತರಗತಿ, ಐಟಿಐ, ಎನಿ ಡಿಗ್ರಿಯವರಿಗೆ ಬಂದ ದಿನವೇ ನೇರ ಆಯ್ಕೆ (ಮಾರ್ಕೆಟಿಂಗ್ ಅಲ್ಲ). ವಸತಿಯೂಟವಿರುತ್ತದೆ. ಸಂಬಳ: ರೂ. 15,000 - 46,000/- ಸಂಪರ್ಕಿಸಿ: 77608 35029

MULTIPLE VACANCIES

ಬೆಂಗಳೂರಿನಲ್ಲಿರುವ ಕಂಪನಿಗೆ ಕೆಲಸ ಮಾಡಲು 18 ವರ್ಷ ಮೇಲ್ಪಟ್ಟ ಯುವಕರು ಬೇಕಾಗಿದ್ದಾರೆ. Drivers (Goods)-20,000, Electrician-20,000, Carpenter-20,000, Helpers-15,000 Female Accts admin asst B.Com with tally 3 yrs & exp. Male admin asst age b/w 45-50 salary 18,000 with good English & ಕಂಪ್ಯೂಟರ್ Knowledge Ph: 9845026220.

RETIRED PERSONS

WANTED Men, Women - Office work, Full /Part Time, Age 25 to 65, SSLC, PUC, Degree. Earn Monthly Rs. 1 Lakh +, Free Europe Trip. Ct:9980670027

WORK FROM HOME

EXCELLENT INCOME TOP MNC in BANGALORE Hiring Rtd Govt, Pvt, Defence, HNI, Bank, Teacher, VRS, NRI, IT, CA, Sr.CITIZEN, HOUSEWIFE Age 30-70 9845673443 8073400868

TIMES TRIBUTE PAYING HOMAGE TO THE DEPARTED SOUL ದಿನಪತ್ರಿಕೆಯಲ್ಲಿ ತುರ್ತು ಸ್ಮರಣೆ ಅಥವಾ ನಿಧನ ಜಾಹೀರಾತು ಪ್ರಕಟಿಸಲು ನಾವು ಲಭ್ಯ
ನಾವು ನಿಮ್ಮ ಮನವಿಯನ್ನು ಕರೆ/ಇಮೇಲ್/ವಾಟ್ಸಪ್ ಮೂಲಕ ಸ್ವೀಕರಿಸುತ್ತೇವೆ
ತ್ವರಿತಗತಿಯಲ್ಲಿ ನಿಮ್ಮ ಪ್ರಕಟಣೆ/ಜಾಹೀರಾತು ವಿನ್ಯಾಸ ಮಾಡಲಾಗುವುದು
ನೀವು ಅನುಮೋದಿಸಿದ ನಂತರ ಶುಲ್ಕವನ್ನು ಪೇಟಿಎಂ/ಎನ್‌ಇಎಫ್‌ಟಿ/ಆರ್‌ಟಿಜಿಎಸ್ ಮೂಲಕ ಪಾವತಿಸುವುದು.
ಸಂಪರ್ಕಿಸಿ: ನರಸಿಂಹ ಕುಲಕರ್ಣಿ-99160 79232
narasinha.kulkarni@timesofindia.com

ಆಸ್ತಿಗಳು PROPERTY

PROPERTY ANCILLARIES

OTHERS

HOSPITAL FOR LEASE / SALE in a prominent area in Bangalore. Contact 7795505525

ಪ್ರವಾಸ TRAVEL

PACKAGE TOURS

10.7.2026, ರಿಂದ 12 ದಿನ ಅಮರನಾಥ, ವೈಷ್ಣೋದೇವಿ, ಶ್ರೀನಗರ, ಅಮೃತಸರ, ಕುರುಕ್ಷೇತ್ರ, ಶ್ರೀಗಂಗಾ ಟೂರಿಸ್ಟ್, 94802 53807/81055 22123.

TOURS & TRAVELS

24-05-26 1 ದಿನ ಸಿದ್ದಗಂಗೆ, ದೇವರಾಯನ ದುರ್ಗ, ಗೊರವನಹಳ್ಳಿ 17-6-26 5 ದಿನ ಶ್ರೀರಂಗಂ, ಪಳನಿ ರಾಮೇಶ್ವರಂ, ಕನ್ಯಾಕುಮಾರಿ ಇತ್ಯಾದಿ ಶ್ರೀವಿನಾಯಕ ಟ್ರಾವೆಲ್ಸ್9972500645

ಚಾರ್ ಧಾಮ್ ಪ್ರವಾಸ 13 ದಿನಗಳು 26/5/26 ನೇಪಾಳ ಪ್ರವಾಸ 9 ದಿನ 4/6/26 ಅಸ್ಸಾಂ ಮೇಘಾಲಯ ಪ್ರವಾಸ 9 ದಿನ 10/6/26 ಸುವರ್ಣ ಯಾತ್ರ. 6360146483 / 9008381022

10.06.26 ಚಾರ್ಧಾಮ ಪ್ರವಾಸ. 1.7.26 ವೈಷ್ಣವಿದೇವಿ ಕಾಶ್ಮೀರ್ ಗುಲ್ಮಾರ್ಗ್ ಅಮರನಾಥ್ 15.07.26 ರಿಂದ 14/16 ದಿನ ಪುರಿಜಗನ್ನಾಥ್ ನೇಪಾಳ ಮುಕ್ತಿನಾಥ್. ಏಷ್ಯಯನ್ ಟೂರ್ಸ್ ಅಂಡ್ ಟ್ರಾವೆಲ್ಸ್ 9342287551 998662444, 9986254573

27/6/2026 ರಿಂದ ನೇಪಾಳ ಮುಕ್ತಿನಾಥ್ ಕಟ್ಮಾಂಡು ಅಯೋಧ್ಯೆ ಕಾಶಿ ಪ್ರಯಾಗ್ ರಾಜ್ ವಿಮಾನದಲ್ಲಿ ಎಲ್ಲಾ ಸೇರಿ ರೂ 55000/- ಸಂಪರ್ಕಿಸಿ ಶ್ರೀ ರಾಮ್ ಟೂರ್ಸ್ 9108933383

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ-ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ
-ಜಾಹೀರಾತು ವ್ಯವಸ್ಥಾಪಕರು

personal

CHANGE OF NAME

I, Narsu, F/o, JC 675944A-Nb Sub-Patil Ramesh Narsu, R/o, Teurwadi, Kolhapur, Chandgad, MH, changed name to Narsu Laxman Patil, for all purpose.

NAME Change I Kiran P R residing at 135, 22nd A Cross, Judicial Layout, GKVK Post, Bangalore - 560065. I have changed my daughter's name from Cherisya K Reddy to Charithra K Reddy vide affidavit dt: 30/03/2026 sworn before notary K V Nanjaiah, Bangalore.

I, JAMI CHANDINI, W/o [VENKATESH TANGUDU], aged 30 years, residing at [#205, Block-B, Sapthagiri Sannidhi, Laxminarayan Temple Road, Papaiah Reddy Layout, Munnekolal, Banaglore-560037], hereby declare that I have changed my name from JAMI CHANDINI to TANGUDU CHANDINI. From now onwards, I shall be known as TANGUDU CHANDINI for all purposes, including official records, passport, and legal documents

I, Salam Pasha S/o Dastagir, aged about 53 years, R/at A.K. Laya, Hullenahalli Post, Thippasandra Hobli, Magadi Tq., Bangalore South Dist. have changed my name from Salam to Salam Pasha & my date of birth from 09.07.1971 to 09.07.1973 & my father name from Dastageer Khan to Dastagir & my wife name from Shabana to Jameela Banu vide affidavit dt: 5.5.2026 before Kunigal notary B.R. Narayanagowda

I, formerly known as ABHIRAJ DHANRAJ PILLE, have changed my name to ABHIRAJ D. Father's name corrected from PILLE DHANRAJ BABURAO to DHANRAJ. Mother's name corrected from PILLE RANI DHANRAJ to RANI SHIVAJIRAO DONGARE. Both old and new names belong to the same persons.

I, Amruta kichloo, W/O; Sunny kichloo ,R/O: FTNO404,B Block MJ Lifestyle Astyllen ,MJ Nagar Rd, Near choodsandra Lake, huskur, Blr-560099, Have changed my name as Amruta Sunny kichloo

I Reesu Devi W/o Ravi Gandiboiena, Josh Elite Flat No 004 Bethal Nagar 1st Main Road, Ayyappa Nagar, Krishnarajapuram, Bangalore 560036. Karnataka have changed my name and shall here after be known as Gandiboiena Devi for all purposes

I, Sarita Kumari D/o Mr. Chitranjan Prasad Mecon colony, near 'M' block, Sail township road Doranda Ranchi Jharkhand. 834002 have changed my name to Sarita Kumari Singh for all purposes

I, formerly known as RANI DHANRAJ PILLE, have changed my name to RANI SHIVAJIRAO DONGARE. My spouse's name corrected from PILLE DHANRAJ BABURAO to DHANRAJ. Both old and new names refer to the same persons.

I Dharmendra Sundra Babu S/O, Sundra Babu R/o No.34,2nd Cross, raghavendra Layout, gubbalalu, subramanyapura Post, bengaluru- 560061, karnataka have changed my name to Dharmendra Sundara Babu.

I Swati Aditya Hegde r/o A1704, Keya Around the Life, SY No 90, Chaitanya Ananya Layout, Kadugodi, Hosakote Road, Seegehalli, Kannamangala Post, Bengaluru 560067. I have changed my name from Swati Bhat to Swati Aditya Hegde for all purposes vide affidavit dt 09.05.2026 sworn before Notary at Bengaluru.

I Eshwar Raghu R/o No 16/3 National Highschool Road V V Puram Basavanagudi Have changed my name to Eshwar Shadakshari Raghu

I Shanta R/o No 1727 Basava Nilaya 4th Blk BDA Doddabasti SMV Lyt Blore-56 Have changed my name to Shanta Gurubasayya Math.

I Arpitha P S/O, Puttaswamy Gowda R/o No.118/1, 1st Cross, 2nd Main, Syndicate Bank Layout, Andrahalli Main Road, Herohalli, Bengaluru - 560091 have changed my name to Arpith P.

I, Sushila, M/o, JC 675944A-Nb Sub-Patil Ramesh Narsu, R/o, Teurwadi, Kolhapur, Chandgad, MH, changed name to Sushila Narsu Patil, for all purpose.

I, Catherine priya william, Residing at no 34 kavalbyrasandra RT nagar Bengaluru 560032,I changed my name to Catherin priya william

OBITUARY

DEATH ANNOUNCEMENTS

ಪವಿತ್ರ ಸ್ಮರಣಾರ್ಥ



ಡಬ್ಲ್ಯೂ. ಎಂ. ಗುರುಮೂರ್ತಿ ಶಿವಾಚಾರ್ಯರು
ನಿವೃತ್ತ ಹಿರಿಯ ಸಹಾಯಕರು, ಕೆ.ಇ.ಬಿ., ಹರಪನಹಳ್ಳಿ
03 ಜನವರಿ 1933 – 04 ಮೇ 2026
ನಮ್ಮ ಮನೆಯ ದೀಪವಾಗಿದ್ದವರು ನೀವು, ನಮ್ಮ ಬದುಕಿನ ದಾರಿದೀಪವಾಗಿದ್ದವರು. ನಿಮ್ಮ ಮಾತುಗಳಲ್ಲಿ ಮಮತೆ ಇತ್ತು, ನಿಮ್ಮ ನಡೆಗಳಲ್ಲಿ ಧರ್ಮ ಇತ್ತು. ಭೌತಿಕ ಲೋಕ ತ್ಯಜಿಸಿದರೂ, ನಮ್ಮ ಹೃದಯಗಳಲ್ಲಿ ನೀವು ಅಮರರಾಗಿದ್ದೀರಿ.
ಅವರ ಪವಿತ್ರ ಸ್ಮರಣಾರ್ಥ ನಡೆಯುವ ಕೈಲಾಸ ಸಮಾರಾಧನೆ, ರುದ್ರಾಭಿಷೇಕ ಹಾಗೂ ಏಕಾದಶ ದಿನದ ವಿಧಿವಿಧಾನಗಳಿಗೆ ಬಂಧು-ಮಿತ್ರರನ್ನು ಸಾದರವಾಗಿ ಆಹ್ವಾನಿಸುತ್ತೇವೆ
ಗುರುವಾರ, 14 ಮೇ 2026.
ರುದ್ರಾಭಿಷೇಕ – ಬೆಳಿಗ್ಗೆ 8:30 ರಿಂದ
ಪ್ರಸಾದ / ಊಟ – ಮಧ್ಯಾಹ್ನ 1:00 ರಿಂದ
ಸ್ಥಳ: #455, "ಉಮಾಸಿರಿ", ಕೆಇಬಿ ಕಾಲೋನಿ ಸಮೀಪ, ಉಪ್ಪಾರಗೇರ, ಹರಪನಹಳ್ಳಿ – 583131, ವಿಜಯನಗರ ಜಿಲ್ಲೆ, ಕರ್ನಾಟಕ.
ನಿಮ್ಮ ಪ್ರೀತಿಯ ಕುಟುಂಬದವರು ಹಾಗೂ ಆತ್ಮೀಯರು
ಡಾ. ಶಿವಕುಮಾರ್ ಡಬ್ಲ್ಯೂ.ಎಂ.
+91 97390 42299

ಎಚ್ಚರಿಕೆ ನೋಟೀಸು
ಪ್ರಕಾಶಕರು ಪೂರ್ವ ಸೂಚನೆ ನೀಡದೆಯೇ ಮತ್ತು /ಅಥವಾ ಯಾವುದೇ ಕಾರಣ ನೀಡದೆ ಜಾಹೀರಾತುಗಳನ್ನು ತಡೆ ಹಿಡಿಯುವ / ರದ್ದುಪಡಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿರುತ್ತಾರೆ. ಹೀಗೆ ಪ್ರಕಟವಾಗದ ಜಾಹೀರಾತುಗಳು (ಇದ್ದಲ್ಲಿ) ಸಂಬಂಧಿತ ಮರುಪಾವತಿಗಳಿಗಾಗಿ ಬುಕಿಂಗ್ ಕಚೇರಿಗಳಲ್ಲಿ ಕ್ಲೇಮು ಸಲ್ಲಿಸಬೇಕು.

GALLERIA

Nirmala Travels® Presents
Ph No. 0824 2497051/54, 9663518877, 9663528877, 9686687771/2/3/4
visit us @ www.nirmalatravels.com
TRICHY RAMESHWARAM KANYAKUMARI 5 / 7* DAYS MAY: 16, 21, 26, 31* JUNE: 1, 6, 7*, 11, 14*, 16, 21*, 26, 28*
SHIRDI NASIK/PANCHA JYOTHIRLINGA* 7* DAYS MAY: 24, 25*, 31 JUNE: 1*, 7, 8*, 14, 18* 21, 28
KERALA SPECIAL/ COASTAL KARNATAKA* 7/4* DAYS MAY: 24, 27*, 31 JUNE: 3*, 7, 10*, 14, 17* 21, 28
GURUVAYUR TRIVENDRAM 7 DAYS MAY: 17, 24, 31 JUNE: 7, 14, 21
OOTY KODAIKANAL 5 DAYS MAY: 24
SOUTH INDIA 7 DAYS EX: MANGALORE MAY: 18, 25 JUNE: 1, 18, 25
SOUTH INDIA 9*/11 DAYS EX: HUBBALLI MAY: 26* 28 JUNE: 4*, 8, 19

ಜಯನಗರದ ಶಾಲಿನಿ ಮೈದಾನದಲ್ಲಿ ಬೃಹತ್ ಮರವೊಂದು ಧರೆಗೆ ಉರುಳಿದೆ.

ಜೂನ್‌ನಲ್ಲಿ ಮಾವಿನ ತೋಪಿಗೆ ಪ್ರವಾಸ »06

ಸಿಲಿಕಾನ್ ಸಿಟಿಗೆ ಮಹಾ ಮೆಟ್ರೊ

ಕಾಳೇನ ಅಗ್ರಹಾರ-ಕಾಡುಗೋಡಿ, ಜಿಗಣಿ-ಅತ್ತಿಬೆಲೆ ಸಂಪರ್ಕದ 73 ಕಿ.ಮೀ. ಉದ್ದದ ಮಾರ್ಗ

ಶೀಘ್ರದಲ್ಲೇ ಸರಕಾರಕ್ಕೆ ಕಾರ್ಯಸಾಧ್ಯತಾ ವರದಿ ಸಲ್ಲಿಕೆ

■ **ವಿಕ ಸುದ್ದಿಲೋಕ** ಬೆಂಗಳೂರು

ಬನ್ನೇರುಘಟ್ಟ ರಸ್ತೆಯ ಕಾಳೇನ ಅಗ್ರಹಾರದಿಂದ ಕಾಡುಗೋಡಿವರೆಗೆ ಹಾಗೂ ಜಿಗಣಿಯಿಂದ ಅತ್ತಿಬೆಲೆವರೆಗಿನ ಒಟ್ಟು 73 ಕಿ.ಮೀ ಉದ್ದದ ಮೆಟ್ರೊ ಮಾರ್ಗ ನಿರ್ಮಾಣ ಸಂಬಂಧ ಬೆಂಗಳೂರು ಮೆಟ್ರೊ ರೈಲು ನಿಗಮವು (ಬಿಎಂಆರ್‌ಸಿಎಲ್) ಕಾರ್ಯ ಸಾಧ್ಯತಾ ವರದಿಯನ್ನು ಸಿದ್ಧಪಡಿಸಿದ್ದು, ಶೀಘ್ರದಲ್ಲೇ ಸರಕಾರಕ್ಕೆ ಸಲ್ಲಿಸಲು ತೀರ್ಮಾನಿಸಿದೆ.

ಉದ್ದೇಶಿತ ಮಾರ್ಗವು ನಮ್ಮ ಮೆಟ್ರೊ ಜಾಲದ ಅತ್ಯಂತ ಉದ್ದದ ಮಾರ್ಗವಾಗಲಿದೆ. ಕಾಳೇನ ಅಗ್ರಹಾರದಿಂದ ಕಾಡುಗೋಡಿವರೆಗೆ 68 ಕಿ.ಮೀ ಉದ್ದದ ಮೆಟ್ರೊ ಮಾರ್ಗವನ್ನು ನಿರ್ಮಿಸಲು ನಿರ್ಧರಿಸಲಾಗಿದೆ. ಈ ಮಾರ್ಗವು ಜಿಗಣಿ ಬಳಿ ಕವಲೊಡೆದು 5 ಕಿ.ಮೀ ದೂರದ ಅತ್ತಿಬೆಲೆವರೆಗೆ ಸಾಗಲಿದೆ. ಇದು ಸರಕಾರ ಹೊಸದಾಗಿ ನಿರ್ಮಿಸಲು ಉದ್ದೇಶಿಸಿರುವ ಅಂತಾರಾಷ್ಟ್ರೀಯ ಕ್ರೀಡಾಂಗಣಕ್ಕೆ ಸಂಪರ್ಕ ಕಲ್ಪಿಸಲಿದೆ.

73 ಕಿ.ಮೀ ಉದ್ದದ ಮೆಟ್ರೊ ಮಾರ್ಗ ನಿರ್ಮಾಣ ಸಂಬಂಧ ಅಧ್ಯಯನ ನಡೆಸಿ ವರದಿ ಸಲ್ಲಿಸಲು ಇಂಟ್ರಾಸಾಫ್ಟ್ ಸೊಲ್ಯೂಷನ್ಸ್ ಎಂಬ ಕಂಪನಿಗೆ ಗುತ್ತಿಗೆ ನೀಡಲಾಗಿತ್ತು. ಕಂಪನಿಯು ವರದಿ ಸಲ್ಲಿಸಿದ್ದು, ಶೀಘ್ರದಲ್ಲೇ ಬಿಎಂಆರ್‌ಸಿಎಲ್ ಸರಕಾರಕ್ಕೆ ಒಪ್ಪಿಸಲಿದೆ. ಬಳಿಕ ಸಚಿವ ಸಂಪುಟದ ಅನುಮೋದನೆ ಪಡೆದು ನಂತರ ಡಿಪಿಆರ್ ತಯಾರಿಕೆಗೆ ಅಣಿಯಾಗಲಿದೆ. ಆ ಬಳಿಕ ಕೇಂದ್ರ ನಗರ ಮತ್ತು ವಸತಿ ವ್ಯವಹಾರಗಳ ಸಚಿವಾಲಯಕ್ಕೆ ವಿಸ್ತೃತ ಯೋಜನಾ ವರದಿಯನ್ನು (ಡಿಪಿಆರ್) ಸಲ್ಲಿಸಲಿದೆ. ಈ ಎಲ್ಲ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ, 2029ರಿಂದ ಕಾಮಗಾರಿ ಕೈಗೊಳ್ಳಲು ಉದ್ದೇಶಿಸಲಾಗಿದೆ.

ಬನ್ನೇರುಘಟ್ಟ, ಜಿಗಣಿ, ಅತ್ತಿಬೆಲೆ, ಸರ್ಜಾಪುರ, ದೊಮ್ಮಸಂದ್ರ ಮತ್ತು ವರ್ತೂರು ಸೇರಿದಂತೆ ಇತರೆ ಪ್ರದೇಶಗಳು ಶರವೇಗದಲ್ಲಿ ಅಭಿವೃದ್ಧಿ ಹೊಂದುತ್ತಿವೆ. ಅಲ್ಲದೇ ಐಟಿ-ಬಿಟಿ ಕಂಪನಿಗಳಿಂದ ಸುತ್ತುವರೆದಿವೆ.

50 ನಿಲ್ದಾಣ

ಹೊಸ ಮಾರ್ಗದಲ್ಲಿ ಒಟ್ಟು 50ಕ್ಕೂ ಅಧಿಕ ನಿಲ್ದಾಣಗಳನ್ನು ನಿರ್ಮಿಸಲು ಯೋಜಿಸಲಾಗಿದೆ. ಸದ್ಯದ ಮೆಟ್ರೊ ಮಾರ್ಗದಲ್ಲಿ ಒಂದು-ಒಂದೂವರೆ ಕಿ.ಮೀ ನಡುವೆ ನಿಲ್ದಾಣಗಳನ್ನು ನಿರ್ಮಿಸಲಾಗುತ್ತಿದೆ. ಆದರೆ, ಹೊಸ ಮಾರ್ಗದಲ್ಲಿ ನಿಲ್ದಾಣಗಳ ನಡುವೆ ಹೆಚ್ಚಿನ ಅಂತರವಿರಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದರು.

ಹೀಗಾಗಿ, ಈ ಪ್ರದೇಶಗಳಿಗೆ ಸಂಪರ್ಕ ಕಲ್ಪಿಸುವಂತೆ ಮಾರ್ಗ ನಿರ್ಮಿಸಲಾಗುತ್ತಿದೆ. ಇದು ಬೆಂಗಳೂರು ದಕ್ಷಿಣ ಹಾಗೂ ಪೂರ್ವ ಭಾಗದ ಪ್ರದೇಶಗಳ ಸಂಪರ್ಕದ ಕೊಂಡಿಯಾಗಲಿದೆ.

ಆನೇಕಲ್‌ನಲ್ಲಿ ಅಂತಾರಾಷ್ಟ್ರೀಯ ಮಟ್ಟದ 1.24 ಲಕ್ಷ ಚ.ಮೀ ವಿಸ್ತೀರ್ಣದ ಕ್ರೀಡಾಂಗಣ ನಿರ್ಮಿಸಲು ಕೆಎಚ್‌ಬಿ ಮೊದಲ ಹಂತದಲ್ಲಿ 943 ಕೋಟಿ ರೂ. ವೆಚ್ಚದ ಟೆಂಡರ್ ಕರೆದಿದೆ. ಇದಕ್ಕೆ ಮೆಟ್ರೊ ಸೌಕರ್ಯ ಅಗತ್ಯವೆಂಬುದನ್ನು ಮನಗಂಡು, ಹೆಚ್ಚುವರಿಯಾಗಿ 5 ಕಿ.ಮೀ ಮಾರ್ಗಕ್ಕೆ ವರದಿ ತಯಾರಿಸಲಾಗಿದೆ. ಈ ಮಾರ್ಗದ ಮಧ್ಯೆ ಇಂಡ್ಲವಾಡಿಯಲ್ಲಿ ನಿಲ್ದಾಣ ನಿರ್ಮಿಸಲು ಉದ್ದೇಶಿಸಲಾಗಿದೆ.

ಈ ಮಾರ್ಗ ಬೆಂಗಳೂರಿನ ಅಭಿವೃದ್ಧಿ ಹೊಂದುವ ಪ್ರದೇಶಗಳಿಗೆ ಸಂಪರ್ಕ ಕಲ್ಪಿಸುವುದರಿಂದ ತುಮಕೂರು, ಹೊಸಕೋಟೆ ಸೇರಿ ಇತರೆಡೆಯ ಉದ್ದೇಶಿತ ಮೆಟ್ರೊ ಮಾರ್ಗಕ್ಕಿಂತ ಹೆಚ್ಚು ಪ್ರಯೋಜನಕಾರಿಯಾಗಲಿದೆ ಎಂದು ನಗರ ಸಾರಿಗೆ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ನಗರದಲ್ಲಿ 210 ಕಿ.ಮೀ ವ್ಯಾಪ್ತಿಯಲ್ಲಿ ಮೆಟ್ರೊ ವಿಸ್ತರಣಾ ಯೋಜನೆಯ ಭಾಗವಾಗಿ ಈ ಹೊಸ ಮಾರ್ಗವನ್ನು ರೂಪಿಸಲಾಗಿದೆ. ಇತ್ತ ನೇರಳೆ ಮಾರ್ಗವು ವೈಟ್‌ಫೀಲ್ಡ್‌ನಲ್ಲಿ ಅಂತ್ಯಗೊಂಡಿದೆ. ಇದು ಗುಲಾಬಿ ಮಾರ್ಗದ ಕಾಳೇನ ಅಗ್ರಹಾರದವರೆಗೆ ಸಂಪರ್ಕ ಕಲ್ಪಿಸಲಿದೆ. ಹೀಗಾಗಿ, ಇವೆರಡು ನಿಲ್ದಾಣಗಳು ಇಂಟರ್ ಚೇಂಜ್ ಆಗಿ ಕಾರ್ಯ ನಿರ್ವಹಿಸಲಿವೆ. ಬೆಂಗಳೂರಿನ ಒಟ್ಟು ಮೆಟ್ರೊ ಜಾಲವನ್ನು ಸುಮಾರು 468 ಕಿ.ಮೀ ಗೆ ಹೆಚ್ಚಿಸುವ ಗುರಿ ಹೊಂದಲಾಗಿದೆ.

ಪ್ರಧಾನಿ ಭೇಟಿ: ಸಂಚಾರ ಅಸ್ತವ್ಯಸ್ತ

■ **ವಿಕ ಸುದ್ದಿಲೋಕ** ಬೆಂಗಳೂರು

ಪ್ರಧಾನಿ ನರೇಂದ್ರ ಮೋದಿ ಭೇಟಿ ಹಿನ್ನೆಲೆಯಲ್ಲಿ ರಾಜಧಾನಿಯ ಹಲವೆಡೆ ಭಾನುವಾರ ವಾಹನ ಸಂಚಾರ ಅಸ್ತವ್ಯಸ್ತವಾಯಿತು.

ನಗರದ ಎಚ್‌ಎಎಲ್ ಬಳಿ ಮತ್ತು ಕನಕಪುರ ರಸ್ತೆಯ ಆರ್ಟ್ ಆಫ್ ಲಿವಿಂಗ್‌ನಲ್ಲಿ ನಿಗದಿಯಾಗಿದ್ದ ಕಾರ್ಯಕ್ರಮಗಳಲ್ಲಿ ಭಾಗಿಯಾಗಲು ಮೋದಿ ಅವರು ಬೆಂಗಳೂರಿಗೆ ಆಗಮಿಸಿದ್ದರಿಂದ ಪೊಲೀಸರು ಭದ್ರತೆ ದೃಷ್ಟಿಯಿಂದ ಸಾಕಷ್ಟು ಕಡೆ ವಾಹನ ಸಂಚಾರ ಸಂಪೂರ್ಣ ನಿರ್ಬಂಧಿಸಿದರು. ಪರಿಣಾಮವಾಗಿ ಟ್ರಾಫಿಕ್ ಜಾಮ್ ಉಂಟಾಗಿ ವಾಹನ ಸವಾರರು ಹೈರಾಣಾದರು.

ಬಿಜೆಪಿ ರಾಜ್ಯ ಘಟಕವು ಎಚ್‌ಎಎಲ್ ಬಳಿ ಆಯೋಜಿಸಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಮೋದಿ ಪಾಲ್ಗೊಂಡರು. ಹೀಗಾಗಿ, ಎಚ್‌ಎಎಲ್ ವಿಮಾನ ನಿಲ್ದಾಣದ ನಿರ್ಗಮನ ಭಾಗದಲ್ಲಿ ಹಳೇ ವಿಮಾನ ನಿಲ್ದಾಣ ರಸ್ತೆಯಿಂದ ಡಿಜಿಸಿಎ ಕಚೇರಿವರೆಗೆ ಎಲ್ಲಾ ವಾಹನಗಳ ಸಂಚಾರವನ್ನು ಬೆಳಗಿನ ಜಾವ 5 ಗಂಟೆಯಿಂದಲೇ ನಿರ್ಬಂಧಿಸಲಾಗಿತ್ತು. ಈ ರಸ್ತೆಯ ಬದಲು ಪರ್ಯಾಯ ಮಾರ್ಗಗಳಲ್ಲಿ ಸಂಚರಿಸುವಂತೆ ಪೊಲೀಸರು ಸೂಚಿಸಿದ್ದರು. ಆದರೆ, ಪರ್ಯಾಯ ಮಾರ್ಗಗಳಲ್ಲಿ ವಾಹನ ದಟ್ಟಣೆ ಹೆಚ್ಚಿ ಕಿಲೋ ಮೀಟರ್ ಗಟ್ಟಲೇ ವಾಹನಗಳು ಸಾಲುಗಟ್ಟಿ ನಿಂತವು.

ನೈಸ್ ರಸ್ತೆ ಜಂಕ್ಷನ್ ಬಳಿ ಸಾಲುಗಟ್ಟಿ ನಿಂತ ವಾಹನಗಳು.

ನೈಸ್ ರಸ್ತೆಯಲ್ಲಿ ತಾತ್ಕಾಲಿಕವಾಗಿ ಎಲ್ಲಾ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿತ್ತು. ತುಮಕೂರು ರಸ್ತೆಯಿಂದ ನೈಸ್ ರಸ್ತೆ ಮೂಲಕ ಕನಕಪುರ ರಸ್ತೆ ಕಡೆಗೆ ಹೋಗುತ್ತಿದ್ದ ವಾಹನ ಸವಾರರು ಪರದಾಡಿದರು. ಸಿಎಂಟಿಐ ಜಂಕ್ಷನ್ ಬಳಿ ಬಲಕ್ಕೆ ತಿರುಗಿ ರಾಜ್‌ಕುಮಾರ್ ಪುಣ್ಯ ಭೂಮಿ ರಸ್ತೆ ಮೂಲಕ ಸಂಚರಿಸಲು ಅವಕಾಶ ಕಲ್ಪಿಸಲಾಗಿತ್ತು. ಆದರೆ, ಈ ಭಾಗದಲ್ಲೂ ವಾಹನ ದಟ್ಟಣೆ ಹೆಚ್ಚಿ ಸಂಚಾರ ಅಸ್ತವ್ಯಸ್ತವಾಯಿತು. ಕನಕಪುರ ರಸ್ತೆ, ಸುಮನಹಳ್ಳಿ ಜಂಕ್ಷನ್, ನಾಯಂಡಹಳ್ಳಿ ಜಂಕ್ಷನ್, ಹೊರ ವರ್ತುಲ ರಸ್ತೆ, ಕೆಂಗೇರಿಯ ವಿಷ್ಣುವರ್ಧನ್ ರಸ್ತೆಯಲ್ಲೂ ವಾಹನ ದಟ್ಟಣೆ ಉಂಟಾಗಿತ್ತು.

ದಟ್ಟಣೆಯಲ್ಲಿ ಸಿಲುಕಿದ ವಾಹನ ಸವಾರರು ಮುಂದೆಯೂ ಹೋಗಲಾಗದೆ ಹಿಂದೆಯೂ ಚಲಿಸಲಾರದೆ ಪರದಾಡಿದರು. ಬಿಸಿಲ ಝಳದ ನಡುವೆ ವಾಹನಗಳಲ್ಲಿ ಬಂದಿಯಾದ ಸವಾರರು ಸಂಚಾರ ಪೊಲೀಸರನ್ನು ಶಪಿಸುತ್ತಿದ್ದ ದೃಶ್ಯ ಎಲ್ಲೆಡೆ ಸಾಮಾನ್ಯವಾಗಿತ್ತು.

ಒತ್ತುವರಿ ತೆರವಿಗೆ ವಿಶೇಷ ಕಾರ್ಯಾಚರಣೆ

ಬೆಂಗಳೂರು: ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಒತ್ತುವರಿಯಾಗಿರುವ ಪಾದಚಾರಿ ಮಾರ್ಗ ತೆರವಿಗೆ ವಿಶೇಷ ಕಾರ್ಯಾಚರಣೆ ಕೈಗೊಳ್ಳಲಾಗಿದೆ. ಪ್ರತಿ ವಾರ್ಡ್ ವ್ಯಾಪ್ತಿಯಲ್ಲೂ ಪರಿಣಾಮಕಾರಿ ನಿರ್ವಹಣೆಗೆ ಪ್ರತ್ಯೇಕ ಸಿಬ್ಬಂದಿ, ಮತ್ತು ಯಂತ್ರೋಪಕರಣ ಒಳಗೊಂಡ ತಂಡಗಳನ್ನು ನಿಯೋಜಿಸಲಾಗಿದೆ ಎಂದು ಪಾಲಿಕೆ ಹೆಚ್ಚುವರಿ ಆಯುಕ್ತೆ ಲೋಖಂಡೆ ಸ್ನೇಹಲ್ ಸುಧಾಕರ್ ತಿಳಿಸಿದ್ದಾರೆ.

ಪ್ರತಿ ವಾರ್ಡ್ ವ್ಯಾಪ್ತಿಯಲ್ಲಿ ನಾಲ್ವರು ಮಾರ್ಷಲ್, 10 ಮಂದಿ ಕಾರ್ಮಿಕರು, ಮೂರು ಟ್ರ್ಯಾಕ್ಟರ್‌ಗಳು ಹಾಗೂ ಒಂದು ಜೆಸಿಬಿ ಯಂತ್ರದ ಮೂಲಕ ತೆರವು ಕಾರ್ಯಾಚರಣೆ ನಡೆಯಲಿದೆ. ಹೂಡಿ ವಿಭಾಗದ 5 ರಸ್ತೆಗಳು, ಕಾಡುಗೋಡಿ ವಿಭಾಗದ ನಾಲ್ಕು, ರಾಮಮೂರ್ತಿನಗರ ವಿಭಾಗದ 9 ರಸ್ತೆಗಳಲ್ಲಿ ಕಾರ್ಯಾಚರಣೆ ನಡೆಸಿ ಅಕ್ರಮ ಒತ್ತುವರಿ ತೆರವುಗೊಳಿಸಲಾಗಿದೆ. ಇನ್ಮುಂದೆ, ದೊಡ್ಡನೆಕ್ಕುಂದಿ ವಿಭಾಗದ ಏಳು ರಸ್ತೆಗಳು, ಹೊರಮಾವು ವಿಭಾಗದ 8, ವಿಜಿನಾಪುರ, ವರ್ತೂರು ವಿಭಾಗದ ತಲಾ 6, ಕೆ. ಆರ್.ಪುರ ವಿಭಾಗದ 5 ರಸ್ತೆಗಳಲ್ಲಿ ಒತ್ತುವರಿ ಪ್ರದೇಶವನ್ನು ವಿಶೇಷ ಕಾರ್ಯಾಚರಣೆ ನಡೆಸಿ, ತೆರವುಗೊಳಿಸಲಾಗುವುದು ಎಂದು ತಿಳಿಸಿದ್ದಾರೆ.

ದೇಶದ 1,008 ಪ್ರಕರಣಗಳ ಪೈಕಿ ನಗರದಲ್ಲೇ 878 ಕೇಸ್: ಎನ್‌ಸಿಆರ್‌ಬಿ ವರದಿ

ವರದಕ್ಷಿಣೆ ಕಿರುಕುಳ: ಬೆಂಗಳೂರಲ್ಲೇ ಹೆಚ್ಚು

■ **ವಿಕ ಸುದ್ದಿಲೋಕ** ಬೆಂಗಳೂರು

ಐಟಿ ಸಿಟಿ, ಸಿಲಿಕಾನ್ ಸಿಟಿ ಎಂದೆಲ್ಲ ಖ್ಯಾತಿ ಪಡೆದ ಬೆಂಗಳೂರಿನಲ್ಲಿ ವರದಕ್ಷಿಣೆ ಕಿರುಕುಳ ಪ್ರಕರಣಗಳು ಕೂಡ ಏರಿಕೆಯಾಗಿರುವುದು ಆತಂಕ ಸೃಷ್ಟಿಸಿದೆ. ದೇಶದ ಹಲವು ಮಹಾನಗರಗಳಲ್ಲಿನ ವರದಕ್ಷಿಣೆ ಪ್ರಕರಣಗಳ ಕುರಿತು ರಾಷ್ಟ್ರೀಯ ಅಪರಾಧಗಳ ದಾಖಲೆ ಬ್ಯೂರೋ (ಎನ್‌ಸಿಆರ್‌ಬಿ) ಬಿಡುಗಡೆಗೊಳಿಸಿರುವ ವರದಿಯಲ್ಲಿ ಈ ಮಾಹಿತಿ ಬಹಿರಂಗವಾಗಿದೆ.

ವರದಕ್ಷಿಣೆ ನಿಷೇಧ ಕಾಯಿದೆ-1961 ರಡಿ ವಿವಿಧ ನಗರಗಳಲ್ಲಿ 2024ರಲ್ಲಿ 1,008 ಪ್ರಕರಣಗಳು ದಾಖಲಾಗಿವೆ. ಈ ಪೈಕಿ ಬೆಂಗಳೂರಿನಲ್ಲಿ 878 (ಶೇ.87) ಪ್ರಕರಣ

ದಾಖಲಾಗಿವೆ. ವರದಕ್ಷಿಣೆ ಸಂಬಂಧಿತ ಪ್ರಕರಣಗಳಲ್ಲಿ 25 ಜನರು ಸಾವನ್ನಪ್ಪಿದ್ದಾರೆ. ದಕ್ಷಿಣ ಭಾರತದ ಇತರೆ ನಗರಗಳಾದ ಚೆನ್ನೈ, ಕೋಝಿಕೋಡ್, ಕೊಚ್ಚಿ, ಕೊಯಮತ್ತೂರು ನಗರಗಳಲ್ಲಿ ವರದಕ್ಷಿಣೆ ಸಂಬಂಧಿತ ಸಾವಿನ ಸಂಖ್ಯೆ ಶೂನ್ಯವಾಗಿದ್ದರೆ, ಹೈದರಾಬಾದ್‌ನಲ್ಲಿ 14 ಪ್ರಕರಣಗಳು ಮಾತ್ರ ದಾಖಲಾಗಿವೆ. ರಾಷ್ಟ್ರ ರಾಜಧಾನಿ ಹೊಸದಿಲ್ಲಿಯಲ್ಲಿ 109 ಪ್ರಕರಣ ದಾಖಲಾಗಿವೆ. ವರದಕ್ಷಿಣೆ ಸಂಬಂಧಿತ ಪ್ರಕರಣಗಳಲ್ಲಿ ಬೆಂಗಳೂರಿನ ಬಳಿಕ 48 ಪ್ರಕರಣಗಳು ದಾಖಲಾಗಿರುವ ಲಖನೌ ಎರಡನೇ ಸ್ಥಾನದಲ್ಲಿದೆ.

ದೌರ್ಜನ್ಯವೂ ಹೆಚ್ಚಳ

2024ರ ಅಪರಾಧ ದಾಖಲೆಗಳ ವರದಿಯ ಪ್ರಕಾರ, ವರದಕ್ಷಿಣೆ ಪ್ರಕರಣಗಳ ಜತೆಗೆ, ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳು ಕೂಡ ನಗರದಲ್ಲಿ ಏರಿಕೆ ಕಂಡಿವೆ. 1,051 ಮಹಿಳಾ ದೌರ್ಜನ್ಯ ಪ್ರಕರಣಗಳು ನಗರದಲ್ಲಿ ದಾಖಲಾಗಿದ್ದು, ವಿವಿಧ ಮಹಾನಗರಗಳ ಪೈಕಿ ಬೆಂಗಳೂರು ಮೊದಲ ಸ್ಥಾನದಲ್ಲಿದೆ. ಮುಂಬಯಿನಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯದಡಿ 857 ಪ್ರಕರಣ ದಾಖಲಾಗಿದ್ದರೆ, ಬೆಂಗಳೂರಿನಲ್ಲಿ 897 ಪ್ರಕರಣ ದಾಖಲಾಗಿವೆ. ಗಂಡನಿಂದ ಪತ್ನಿಯ ಮೇಲಾಗುವ ದೌರ್ಜನ್ಯ ಸಂಬಂಧ ರಾಜ್ಯದಲ್ಲಿ 2,947 ಪ್ರಕರಣಗಳು ದಾಖಲಾಗಿವೆ. ಉತ್ತರ ಪ್ರದೇಶದಲ್ಲಿ ಅತಿ ಹೆಚ್ಚು ಪ್ರಕರಣಗಳು ದಾಖಲಾಗಿದ್ದು, ಅಲ್ಲಿ 21,266 ಕೇಸ್‌ಗಳಿವೆ. ಉಳಿದಂತೆ ಮಹಾರಾಷ್ಟ್ರದಲ್ಲಿ 10,538 ಹಾಗೂ ರಾಜಸ್ಥಾನದಲ್ಲಿ 10,578 ಪ್ರಕರಣಗಳು ವರದಿಯಾಗಿವೆ.

ಜೀವಿತಾವಧಿವರೆಗೆ ಪತ್ನಿಗೆ ಜೀವನಾಂಶ ಪಾವತಿಸಲು ಆದೇಶ

■ **ವಿಕ ಸುದ್ದಿಲೋಕ** ಬೆಂಗಳೂರು

ಎರಡು ಪ್ರಕರಣಗಳಲ್ಲಿ ಸುಪ್ರೀಂಕೋರ್ಟ್ ನೀಡಿದ ತೀರ್ಪುಗಳನ್ನು ಉಲ್ಲೇಖಿಸಿರುವ ಹೈಕೋರ್ಟ್, ಪತ್ನಿಯ ಜೀವಿತಾವಧಿ ವರೆಗೆ ಮಾಸಿಕ 15,000 ರೂ. ಜೀವನಾಂಶ ಪಾವತಿಸುವಂತೆ ಬಿಎಚ್‌ಇಎಲ್ ಉದ್ಯೋಗಿಯೊಬ್ಬರಿಗೆ ನಿರ್ದೇಶಿಸಿದೆ.

ಪತ್ನಿ ಸಲ್ಲಿಸಿದ್ದ ಅರ್ಜಿಯನ್ನು ಮಾನ್ಯ ಮಾಡಿರುವ ನ್ಯಾಯಮೂರ್ತಿ ಕೆ.ಮನ್ಮಥ ರಾವ್ ಅವರಿದ್ದ ಏಕಸದಸ್ಯಪೀಠ ದಾಖಲೆಗಳನ್ನು ಪರಿಶೀಲಿಸಿದ ಬಳಿಕ ಜೀವನಾಂಶ ನೀಡುವಂತೆ ಆದೇಶಿಸಬೇಕಾಗುತ್ತದೆ ಎಂದು ಹೇಳಿದೆ.

ನ್ಯಾಯಪೀಠ, ಸುಪ್ರೀಂಕೋರ್ಟ್ ರಜತಿ ವರ್ಸಸ್ ಗಣೇಶನ್ ಪ್ರಕರಣದಲ್ಲಿ ಪತ್ನಿಯು ತನ್ನನ್ನು ತಾನು ಪೋಷಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂಬ ಹೇಳಿಕೆ ಸಾಕು ಮತ್ತು ಅದು ಇಲ್ಲದಿದ್ದರೆ ಸಾಬೀತುಪಡಿಸುವುದು ಪತಿಗೆ ಬಿಟ್ಟದ್ದು ಎಂದು ಅಭಿಪ್ರಾಯಪಟ್ಟಿದೆ.

ಬದಲಾಗಿ, ಸಿಆರ್‌ಪಿಸಿಯ ಸೆಕ್ಷನ್ 125ರಡಿಯಲ್ಲಿನ ಪ್ರಕರಣದಲ್ಲಿ ವಿಚಾರಣಾ ನ್ಯಾಯಾಲಯವು ವಿಷಯದ ಪ್ರಾಥಮಿಕ ದೂರದೃಷ್ಟಿಯನ್ನು ತೆಗೆದುಕೊಳ್ಳಬೇಕು ಮತ್ತು ನ್ಯಾಯಾಲಯವು ದಂಪತಿ ನಡುವಿನ ವೈವಾಹಿಕ ವ್ಯಾಜ್ಯಗಳನ್ನು ವಿವರವಾಗಿ ಪರಿಶೀಲಿಸುವ ಅಗತ್ಯವಿಲ್ಲ ಎಂದು ಹೇಳಿದೆ.

"ಶಾಸನಬದ್ಧ ಹಕ್ಕಿನ ವಿರುದ್ಧ ಯಾವುದೇ ವಿನಾಯಿತಿ ಇಲ್ಲ, »06

Children's Education Society® Estd: 1974
THE OXFORD EDUCATIONAL INSTITUTIONS
C.A. Site No. 40, 1st Phase, J.P. Nagar, Bangalore - 560 078, KARNATAKA
Ph: 080-61754510 / 501 / 502
E-mail:jpnagaradm@theoxford.edu; Web: www.theoxford.edu
ADMISSION NOTICE 2026-27
Recognised by Govt. of Karnataka, Concerned Board/University
PUC (PCMB, PCME, PCMCs, BEACs, SEBA & HEPS)
DIPLOMA IN ENGINEERING (DAY & EVENING)
· Computer Science · Electrical & Electronics
· Automobile · Civil · Electronics & Commn.
· Mechanical · Mechatronics
· Commercial Practice (English)
BHM | MTTM | B.Ed | D.El.Ed
PARAMEDICAL COURSES
· Diploma in Medical Lab Technology
· Diploma in Imaging Technology
PARENTS VISITING THE INSTITUTION IS HIGHLY APPRECIATED
www.theoxford.edu Dr. SNVL Narasimha Raju, President

ಸಂತ ಲಾರೆನ್ಸ್ ಇಂಡಿಯನ್ CBSE ರೆಸಿಡೆನ್ಶಿಯಲ್ ಸ್ಕೂಲ್
stlawrenceindianschool.com

ಮೇ 20ರ ಮೊದಲು ಪ್ರವೇಶ ಪಡೆದರೆ ಶಾಲಾ ಶುಲ್ಕದಲ್ಲಿ ಶೇ.10ರಷ್ಟು ವಿನಾಯಿತಿ

5ರಿಂದ 10ನೇ ತರಗತಿ ಪ್ರವೇಶಾತಿ ಆರಂಭ

ಕೇವಲ 100 ಸೀಟುಗಳು ಮಾತ್ರ ಲಭ್ಯ

ವಿಶೇಷತೆ
- ಇಂಗ್ಲಿಷ್ ಸ್ಪೀಕಿಂಗ್ ಕೋರ್ಸ್‌ನೊಂದಿಗೆ ಪಠ್ಯೇತರ ಚಟುವಟಿಕೆಗೆ ವಿಶೇಷ ಒತ್ತು.
- ಪೋಷಕರೊಂದಿಗೆ ಮಾತನಾಡಲು ವಾರಕ್ಕೊಮ್ಮೆ ವಾಟ್ಸ್ಯಾಪ್ ವಿಡಿಯೋ ಕಾಲ್ ಸಂಪರ್ಕ.
- ಸ್ಮಾರ್ಟ್ ಕ್ಲಾಸ್, ಪ್ರಯೋಗಾಲಯ, ಆಡಿಯೋ ವಿಡಿಯೋ ಕೊಠಡಿ.
- ಆಟದ ಮೈದಾನ ಹಾಗೂ ಮೆಡಿಟೇಷನ್. ಪ್ರತಿ ನಿತ್ಯ ಬೆಳಗ್ಗೆ ಯೋಗಾಭ್ಯಾಸ. ಹೈಜೆನಿಕ್‌ನಿಂದ ಕೂಡಿದ ಗ್ರೀನ್ ಕ್ಯಾಂಪಸ್.
- ಮಕ್ಕಳಿಗೆ ಸುಲಭವಾಗಿ ಪಾಠವನ್ನು ಅರ್ಥೈಸುವ ಉದ್ದೇಶದಿಂದ ಚಟುವಟಿಕೆ ಆಧರಿತ ತರಗತಿ.
- ಪ್ರತಿ ನಿತ್ಯ ಪೋಷಕರಿಗೆ ಮಕ್ಕಳ ವಿದ್ಯಾಭ್ಯಾಸದ ಕುರಿತು ವರದಿ.
- ರೆಸಿಡೆನ್ಸಿಯಲ್ ವಿದ್ಯಾರ್ಥಿಗಳಿಗೆ ಪ್ರತಿನಿತ್ಯ ಕೋಚಿಂಗ್.

ಚಟುವಟಿಕೆ ಆಧರಿತ ಶಿಕ್ಷಣ

ರೋಬೋಟಿಕ್ಸ್ ಎಐ ಮತ್ತು ಕೋಡಿಂಗ್ ವಿಶೇಷ ತರಬೇತಿ

ಏಕಾಗ್ರತೆಗಾಗಿ ಕರಾಟೆ, ಯೋಗ, ಡಾನ್ಸ್ ತರಬೇತಿ

STEM ಶಿಕ್ಷಣ ಭವಿಷ್ಯದ ಅಡಿಪಾಯ



ಫುಟ್ಬಾಲ್, ಬಾಸ್ಕೆಟ್ ಬಾಲ್, ಥ್ರೋ ಬಾಲ್ ತರಬೇತಿ

ಪ್ರತಿ ತರಗತಿಯಲ್ಲಿ ಗರಿಷ್ಠ 30 ವಿದ್ಯಾರ್ಥಿಗಳು

ಎಲ್ಲಿದೆ ಕ್ಯಾಂಪಸ್? ಮಂಗಳೂರು ನಗರದಿಂದ ಕೇವಲ 25 ಕಿ.ಮಿ., ಉಡುಪಿ ನಗರದಿಂದ 30 ಕಿ.ಮಿ., ಅತ್ಯಂತ ಪ್ರಸಿದ್ಧ ಯಾತ್ರಾಸ್ಥಳ ಕಟೀಲಿನಿಂದ 4 ಕಿ.ಮೀ., ಶೈಕ್ಷಣಿಕ ಕಾಶಿ ಮೂಡುಬಿದರೆಯಿಂದ 15 ಕಿ.ಮೀ., ಬಜಪೆ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ 14 ಕಿ.ಮೀ., ರಾಷ್ಟ್ರೀಯ ಹೆದ್ದಾರಿಯಿಂದ 7 ಕಿ.ಮೀ. ಹೀಗೆ ಎಲ್ಲ ಪ್ರಮುಖ ಸ್ಥಳಗಳ ನಡುವೆ ನಿಂತಿರುವ ಪ್ರದೇಶವೇ ಕಿನ್ನಿಗೋಳಿ. ಅತಿ ಹೆಚ್ಚು ಬ್ಯಾಂಕ್, ಎಟಿಎಂ ಹೊಂದಿರುವ ಪ್ರದೇಶ. ಅತೀ ಹೆಚ್ಚು ಎನ್‌ಆರ್‌ಐ ಗಳು ಇರುವ ಪ್ರದೇಶ. ಶೈಕ್ಷಣಿಕವಾಗಿ, ಆರ್ಥಿಕವಾಗಿ ಮುಂದಿರುವ ಪ್ರದೇಶ. ಅಂತಹ ನಾಡಿನಲ್ಲಿ ಕಳೆದ ಎರಡು ದಶಕದಿಂದ ಶೈಕ್ಷಣಿಕ ಕ್ರಾಂತಿಯನ್ನು ಸಂಸ್ಥೆ ಮಾಡಿದೆ.

ಕ್ಯಾಂಪಸ್‌ನೊಳಗೆ ಹಾಸ್ಟೆಲ್ ಸೌಲಭ್ಯ
ಸ್ಪರ್ಧಾತ್ಮಕ ಪರೀಕ್ಷೆಗೆ ಉಚಿತ ಕೋಚಿಂಗ್ (JEE, NEET, CET & NTSE)
ವಿದ್ಯಾರ್ಥಿವೇತನ ಸವಲತ್ತು

ST. LAWRENCE INDIAN SCHOOL
Mennabettu Village, Kinnigoli Post, Mulki Taluk, Mangalore D.K. District, Karnataka-574 150
8197399070
9945564949

ಚುನಾವಣೆಗೆ ವಿಳಂಬ ಮಾಡಿದರೆ ಜನರಿಂದಲೇ ಪಾಠ: ಮೊಯಿಲಿ

ಬೆಂಗಳೂರು: ನಗರ ಹಾಗೂ ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಕಾಲಮಿತಿಯೊಳಗೆ ಚುನಾವಣೆ ನಡೆಸಬೇಕು. ಹಿತಾಸಕ್ತಿಗಳಿಗೆ ಸಿಲುಕಿ ವಿಳಂಬ ಮಾಡುವ ಅಧಿಕಾರರೂಢ ಪಕ್ಷಗಳಿಗೆ ಜನರೇ ತಕ್ಕಪಾಠ ಕಲಿಸುತ್ತಾರೆ ಎಂದು ಮಾಜಿ ಮುಖ್ಯಮಂತ್ರಿ ಎಂ. ವೀರಪ್ಪ ಮೊಯಿಲಿ ಎಚ್ಚರಿಸಿದರು.

ಕರ್ನಾಟಕ ಪಂಚಾಯತ್‌ರಾಜ್ ಪರಿಷತ್ ಭಾನುವಾರ ಆಯೋಜಿಸಿದ್ದ 16ನೇ ಹಣಕಾಸು ಆಯೋಗ ಮತ್ತು 5ನೇ ರಾಜ್ಯ ಹಣಕಾಸು ಆಯೋಗದ ವರದಿಗಳ ಕುರಿತ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

''ಯಾವುದೇ ಪಕ್ಷದ ಸರಕಾರವಿದ್ದರೂ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ಅಡ್ಡಿ ಇದ್ದೇ ಇರುತ್ತದೆ. ನಾನು ಮುಖ್ಯಮಂತ್ರಿಯಾಗಿದ್ದಾಗಲೂ ಪಂಚಾಯಿತಿಗಳ ಚುನಾವಣೆಗೆ ಅಡ್ಡಿಯಾಗಿತ್ತು. ಆಗ ಪಂಚಾಯತ್‌ರಾಜ್ ಸಚಿವರಾಗಿದ್ದ ಎಂ.ವೈ. ಘೋರ್ಪಡೆ ರಾಜೀನಾಮೆ ನೀಡಿದ್ದರು. ಮರು ವರ್ಷ ನಡೆದ ವಿಧಾನಸಭೆ ಚುನಾವಣೆಯಲ್ಲಿ ನಾವು ಕಡಿಮೆ ಸ್ಥಾನ ಪಡೆಯಬೇಕಾಯಿತು. ತಮಿಳುನಾಡಿನಲ್ಲೂ ಈಗ ಹೇಗೆ ಸರಕಾರ ಬದಲಿಸಿದರು ಎನ್ನುವ ಅರಿವು ಆಡಳಿತ ನಡೆಸುವವರಿಗೆ ಇರಬೇಕಾಗುತ್ತದೆ,'' ಎಂದರು.

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಅಡ್ಮಿನಿಸ್ಟ್ರೇಷನ್‌ನ ಪ್ರಾಧ್ಯಾಪಕ ವಿ.ಎನ್.ಅಲೋಕ್ ಮಾತನಾಡಿ, ''16ನೇ ಹಣಕಾಸು ಆಯೋಗವು 8 ಲಕ್ಷ ಕೋಟಿ ರೂ. ಅನುದಾನ ನೀಡಲಿದ್ದು, ಇದರಲ್ಲಿ ನಗರಾಭಿವೃದ್ಧಿ ಹಾಗೂ ಗ್ರಾಮೀಣಾಭಿವೃದ್ಧಿಗೆ ಶೇ. 50ರಷ್ಟು ಮೀಸಲಿಡಲಾಗಿದೆ. ಸಚಿವಾಲಯಗಳಿಂದ ಸೂಚನೆಗಳು ಬರುವವರೆಗೂ ರಾಜ್ಯಗಳು ಕಾಯಬಾರದು,'' ಎಂದು ಸಲಹೆ ನೀಡಿದರು.

ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ.ಆರ್.ಪಾಟೀಲ್, ಕರ್ನಾಟಕದ 5ನೇ ಹಣಕಾಸು ಆಯೋಗದ ಅಧ್ಯಕ್ಷ ಸಿ.ನಾರಾಯಣಸ್ವಾಮಿ, ಯೋಜನೆ ಇಲಾಖೆ ಕಾರ್ಯದರ್ಶಿ ಎಂ.ವಿ.ವೆಂಕಟೇಶ್, ನಿವೃತ್ತ ಐಎಎಸ್ ಅಧಿಕಾರಿಗಳಾದ ಮೀನಾಕ್ಷಿಸುಂದರಂ, ಎಂ.ಆರ್. ಶ್ರೀನಿವಾಸಮೂರ್ತಿ, ಮೊಹಮ್ಮದ್ ಸನಾವುಲ್ಲಾ, ತಜ್ಞರಾದ ಛಾಯಾ ದೇವಗಾಂವಕರ್, ಡಿ.ರಾಜಶೇಖರ್, ಕಲಾಸೀತಾರಾಮ್, ಗೋಪಿನಾಥರೆಡ್ಡಿ, ಎನ್.ಶಿವಣ್ಣ, ಪರಿಷತ್ ಕಾರ್ಯಾಧ್ಯಕ್ಷ ವಿ.ವೈ.ಘೋರ್ಪಡೆ, ಉಪಾಧ್ಯಕ್ಷೆ ಸೌಭಾಗ್ಯ ಬಸವರಾಜನ್, ಪ್ರಧಾನ ಕಾರ್ಯದರ್ಶಿ ಕೆ.ಎಸ್.ಸತೀಶ್, ಕೋಶಾಧಿಕಾರಿ ಚಿಕ್ಕಕೊಮಾರಿಗೌಡ ಉಪಸ್ಥಿತರಿದ್ದರು.

ಮಣಿಪಾಲ್ ಆಸ್ಪತ್ರೆಯಲ್ಲಿ ಚಾಲಕರಿಗೆ ವಿಶ್ರಾಂತಿ ತಾಣ

ಬೆಂಗಳೂರು: ದಣಿವರಿಯದೆ, ಬಿರು ಬಿಸಿಲಿನ ನಡುವೆಯೂ ರೋಗಿಗಳನ್ನು ಆಸ್ಪತ್ರೆಗಳಿಗೆ ಕರೆದುಕೊಂಡು ಬರುವ ಆಟೋ

ಮತ್ತು ಕ್ಯಾಬ್ ಚಾಲಕರಿಗೆ ಹಳೆ ವಿಮಾನ ನಿಲ್ದಾಣ ರಸ್ತೆಯಲ್ಲಿರುವ ಮಣಿಪಾಲ್ ಆಸ್ಪತ್ರೆ ಆವರಣದಲ್ಲಿ ಲಘು ವಿಶ್ರಾಂತಿ ಮತ್ತು ತಂಪಾದ ಪಾನೀಯದ ವ್ಯವಸ್ಥೆ ಮಾಡಲಾಗಿದೆ. ಮೇ ತಿಂಗಳಿಡೀ ಆಸ್ಪತ್ರೆಯ ಪಿಕಪ್ ಪೆವಿಲಿಯನ್‌ನಲ್ಲಿ ಈ ಸೌಲಭ್ಯ ಸಿಗಲಿದೆ. ಚಾಲಕರ ಜತೆಗೆ, ರೋಗಿಯನ್ನು ನೋಡಿಕೊಳ್ಳುವವರೂ ಈ ಸೌಲಭ್ಯ ಬಳಸಿಕೊಳ್ಳಬಹುದು. ಈ ಕುರಿತು, ಮಣಿಪಾಲ್ ಆಸ್ಪತ್ರೆಯ ಹಳೆಯ ವಿಮಾನ ನಿಲ್ದಾಣ ರಸ್ತೆಯ ಆಸ್ಪತ್ರೆ ನಿರ್ದೇಶಕಿ ನಯನಾ ಪೈ ಮಾತನಾಡಿ ''ಆರೋಗ್ಯ ಸೇವೆಯಲ್ಲಿ ನಿರಂತರವಾಗಿ ದುಡಿಯುತ್ತಿರುವವರ ಕೊಡುಗೆಯನ್ನು ನಾವು ಗುರುತಿಸುತ್ತೇವೆ. ವಿಶೇಷವಾಗಿ ತೀವ್ರ ಬಿಸಿಲಿನ ಸಮಯದಲ್ಲಿ ಆಸ್ಪತ್ರೆಗೆ ರೋಗಿಗಳನ್ನು ಕರೆತರುವವರ ಯೋಗಕ್ಷೇಮ ನೋಡಿಕೊಳ್ಳುವುದು ಕೂಡ ನಮ್ಮ ಜವಾಬ್ದಾರಿ,'' ಎಂದರು. ಆಟೊ, ಕ್ಯಾಬ್ ಚಾಲಕರು ಈ ನೂತನ ಕ್ರಮವನ್ನು ಶ್ಲಾಘಿಸಿದ್ದಾರೆ.

ಆರ್ಟ್ ಆಫ್ ಗಿವಿಂಗ್‌ನ 13ನೇ ವರ್ಷಾಚರಣೆ ಪ್ರಯುಕ್ತ ವಿಜಯನಗರದ ಮಹಾಲಕ್ಷ್ಮಿ ವೃದ್ಧಾಶ್ರಮದಲ್ಲಿ ಸ್ವಯಂ ಸೇವಕರು ಗೀತೆಗಳ ಗಾಯನದೊಂದಿಗೆ ಹಿರಿಯ ನಾಗರಿಕರನ್ನು ರಂಜಿಸಿದರು. ಇದೇ ವೇಳೆ ಹಣ್ಣುಗಳನ್ನು ವಿತರಿಸಲಾಯಿತು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಜಂಟಿ ಕಾರ್ಯದರ್ಶಿ ಹಾಗೂ ಆರ್ಟ್ ಆಫ್ ಗಿವಿಂಗ್‌ನ ಪೋಷಕಿ ಜಯಲಕ್ಷ್ಮಿ, ಮಮತಾ ಎನ್ ಸ್ವಾಮಿ, ಬಸವರಾಜ್, ಕೆ.ಎಚ್.ಚಿನ್ನಪ್ಪ, ಅನಿತಾ ಗುರುಪ್ರಸಾದ್ ಇದ್ದರು.

ಎಲ್ಲಿ-ಏನು? ಸೋಮವಾರ

ರಾಗಿಗುಡ್ಡ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್: ಉಮಾ ಮಹೇಶ್ವರ ಸಂವಾದ ಕುರಿತು ದ್ವೈಪಾಯನಾಚಾರ್ಯ ಅವರಿಂದ ಉಪನ್ಯಾಸ. **ಸ್ಥಳ:** ಸಂಸ್ಕೃತಿ ಮಂದಿರ, ದೇಗುಲ ಆವರಣ, ಜಯನಗರ 9ನೇ ಬ್ಲಾಕ್. ಬೆಳಗ್ಗೆ 6.30.

ತೋಟಕ್ಕೇ ತೆರಳಿ ಮಾವು ಆಯ್ಕೆಗೆ ಅವಕಾಶ | ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮದಿಂದ ಆಯೋಜನೆ

ಜೂನ್‌ನಲ್ಲಿ ಮಾವಿನ ತೋಪಿಗೆ ಪ್ರವಾಸ

■ **ಎಚ್.ಪಿ. ಪುಣ್ಯವತಿ** ಬೆಂಗಳೂರು
punyavathi.hp@timesofindia.com

ಮಾವು ಪ್ರಿಯರಿಗೊಂದು ಸಂತಸದ ಸುದ್ದಿ. ಮುಂದಿನ ತಿಂಗಳು ಮ್ಯಾಂಗೊ ಪಿಕ್ಕಿಂಗ್ ಟೂರ್ ಆಯೋಜಿಸಲು ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ಚಿಂತನೆ ನಡೆಸಿದೆ.

ತೋಟಕ್ಕೇ ತೆರಳಿ ಇಷ್ಟವಾದ ಮಾವಿನಹಣ್ಣನ್ನು ಆರಿಸಿ ಮನೆಗೊಯ್ಯುವ ಅವಕಾಶವನ್ನು ಈ ಟೂರ್ ಒದಗಿಸುತ್ತದೆ. ಮಾರುಕಟ್ಟೆಯಲ್ಲಿ ಖರೀದಿಸುವಾಗ ರಾಸಾಯನಿಕದಿಂದ ಮಾಗಿಸಿರಬಹುದು ಎಂಬ ಅನುಮಾನ ಇರುತ್ತದೆ. ಆದರೆ, ತೋಟಕ್ಕೆ ತೆರಳಿ ಹಣ್ಣು ಖರೀದಿಸಿದರೆ ಈ ಆತಂಕ ಇರುವುದಿಲ್ಲ.

ನಿಗಮವು ಬೆಂಗಳೂರಿನಿಂದ ಸಾರ್ವಜನಿಕರನ್ನು ನಾನಾ ಜಿಲ್ಲೆಗಳಲ್ಲಿನ ಮಾವು ತೋಟಗಳಿಗೆ ಉಚಿತವಾಗಿ ಬಸ್‌ಗಳಲ್ಲಿ ಕರೆದೊಯ್ಯಲಿದೆ (ಪ್ರತ್ಯೇಕ ಬಸ್‌ಗಳ ವ್ಯವಸ್ಥೆಯಿರುತ್ತದೆ). ನಂತರ ತೋಟಗಳಲ್ಲೇ ಊಟ ಮಾಡಿ, ಬೇಕಾದಷ್ಟು ಪ್ರಮಾಣದಲ್ಲಿ ಹಣ್ಣುಗಳನ್ನು ಕಿತ್ತು ತರುವುದು ಮ್ಯಾಂಗೊ ಪಿಕ್ಕಿಂಗ್ ಟೂರ್‌ನ ವಿಶೇಷತೆ.

ಮ್ಯಾಂಗೊ ಪಿಕ್ಕಿಂಗ್ ಟೂರ್‌ನ ಉದ್ದೇಶ

ಅಮೆರಿಕದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ 'ಆ್ಯಪಲ್ ಪಿಕ್ಕಿಂಗ್ ಟೂರ್' ಯೋಜನೆ ಚಾಲ್ತಿಯಿದೆ. ಅದೇ ರೀತಿ ನಾವು 'ಮ್ಯಾಂಗೊ ಪಿಕ್ಕಿಂಗ್ ಟೂರ್' ಹಮ್ಮಿಕೊಂಡಿದ್ದೇವೆ. ಈ ಮೂಲಕ ಸಾರ್ವಜನಿಕರಿಗೆ ಮಾವು ಬೆಳೆ ಬಗ್ಗೆ ಸಂಪೂರ್ಣ ಮಾಹಿತಿ ನೀಡುವುದು ಮತ್ತು ಗುಣಮಟ್ಟದ ಮಾವನ್ನು ತೋಟದಲ್ಲಿ ಕಿತ್ತು ಮನೆಗೊಯ್ಯುವ ಅವಕಾಶ ಒದಗಿಸುವುದು ಇದರ ಉದ್ದೇಶ. ದೇಶದ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ 'ಮ್ಯಾಂಗೊ ಪಿಕ್ಕಿಂಗ್ ಟೂರ್' ಅನ್ನು ನಿಗಮದ ವತಿಯಿಂದ ಕೈಗೊಳ್ಳಲಾಗುತ್ತಿದೆ.

ನಿಗಮದಲ್ಲಿ ಹಣ ಇಲ್ಲ. ಅಲ್ಲದೆ, ಈ ಬಾರಿ ಮಾವಿನ ಫಸಲು ಕೂಡ ಕಡಿಮೆಯಿದೆ. ಆದರೂ ಮ್ಯಾಂಗೊ ಪಿಕ್ಕಿಂಗ್ ಟೂರ್ ಹೆಚ್ಚು ಜನಪ್ರಿಯವಾಗಿರುವುದರಿಂದ ಈ ಬಾರಿಯೂ ಪ್ರವಾಸ ಆಯೋಜಿಸುವ ಬಗ್ಗೆ ಚಿಂತನೆ ಮಾಡಿದ್ದೇವೆ. ಕೋಲಾರ ಭಾಗದಲ್ಲಿ ಮೇ ಅಂತ್ಯದಲ್ಲಿ ಪೂರ್ಣ ಪ್ರಮಾಣದಲ್ಲಿ ಮಾವು ಮಾರುಕಟ್ಟೆಗೆ ಬರಲಿದೆ. ಹೀಗಾಗಿ, ಜೂನ್‌ನಲ್ಲಿ ಮಾವು ಪ್ರವಾಸ ಆಯೋಜಿಸಲಾಗುವುದು.

-ಟಿ.ಆರ್. ವೇದಮೂರ್ತಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ

ಮೇಳಕ್ಕೆ ಉತ್ತಮ ಸ್ಪಂದನೆ

ಕಬ್ಬನ್‌ಪಾರ್ಕ್‌ನಲ್ಲಿ ಆಯೋಜಿಸಿರುವ ಮಾವು ಮತ್ತು ಹಲಸು ಮೇಳಕ್ಕೆ ಸಾರ್ವಜನಿಕರಿಂದ ಉತ್ತಮ ಸ್ಪಂದನೆ ವ್ಯಕ್ತವಾಗಿದ್ದು, ಮೂರು ದಿನಗಳಲ್ಲಿ ಸುಮಾರು 8 ಟನ್‌ಗೂ ಅಧಿಕ ಮಾವು ಮಾರಾಟವಾಗಿದೆ. ಹಲಸು ಸುಮಾರು 150-200 ಕೆ.ಜಿ.ಯಷ್ಟು ಮಾರಾಟವಾಗಿದೆ. 50 ಮಾವು ಮಾರಾಟ ಮಳಿಗೆಗಳನ್ನು ತೆರೆಯಲಾಗಿದ್ದು, 7 ಹಲಸು ಹಣ್ಣಿನ ಮಳಿಗೆಗಳನ್ನು ತೆರೆಯಲಾಗಿದೆ. ವಾರಾಂತ್ಯದಲ್ಲಿ ಹೆಚ್ಚು ಜನರು ಭೇಟಿ ನೀಡಿ ಹಣ್ಣು ಖರೀದಿಸಿದ್ದಾರೆ. ಮೇ 17ರವರೆಗೆ ಕಬ್ಬನ್‌ಪಾರ್ಕ್‌ನಲ್ಲಿ ಮೇಳ ನಡೆಯಲಿದೆ ಎಂದು ವೇದಮೂರ್ತಿ ತಿಳಿಸಿದರು.

ಎಲ್ಲ ಶಾಲೆಗಳಲ್ಲಿ ದ್ವಿಭಾಷಾ ನೀತಿ ಜಾರಿ

ಒಂದು ವರ್ಷದಲ್ಲಿ ಶೇ. 100ರಷ್ಟು ಶಾಲೆಗಳಿಗೆ ವಿಸ್ತರಿಸುವ ಗುರಿ: ಮಧು ಬಂಗಾರಪ್ಪ

■ **ವಿಕ ಸುದ್ದಿಲೋಕ** ಬೆಂಗಳೂರು

ಮುಂದಿನ ವರ್ಷದೊಳಗೆ ರಾಜ್ಯದ ಎಲ್ಲ ಶಾಲೆಗಳಲ್ಲೂ ದ್ವಿಭಾಷಾ ನೀತಿ ಜಾರಿಗೊಳಿಸಲಾಗುವುದು ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ಕಸಾಪ ಸಭಾಂಗಣದಲ್ಲಿ ಭಾನುವಾರ ನಡೆದ ಲೇಖಕ ಕಂಚ ಐಲಯ್ಯ ಶೆಫರ್ಡ್ ಅವರ 'ದಿ ಶೂದ್ರ ರೆಬಿಲಿಯನ್' ಮೂಲ ಪುಸ್ತಕದ ಕನ್ನಡ ಅವತರಣಿಕೆ 'ಶೂದ್ರ ಬಂಡಾಯ' ಪುಸ್ತಕವನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.

''ರಾಜ್ಯದಲ್ಲಿ ಈಗಾಗಲೇ ಹಲವು ಶಾಲೆಗಳಲ್ಲಿ ದ್ವಿಭಾಷಾ ಮಾಧ್ಯಮ ಅನುಷ್ಠಾನಗೊಂಡಿದೆ. ಮಕ್ಕಳು ತಳಮಟ್ಟದಿಂದಲೇ ಕನ್ನಡ ಮತ್ತು ಆಂಗ್ಲ ಮಾಧ್ಯಮದಲ್ಲಿ ಕಲಿಯುತ್ತಿದ್ದಾರೆ. ಮುಂದಿನ ವರ್ಷದಲ್ಲಿ ಎಲ್ಲ ಶಾಲೆಗಳಲ್ಲಿಯೂ ಅಳವಡಿಕೆಯಾಗಲಿದೆ. ಒಂದು ವರ್ಷದಲ್ಲಿ ಶೇ.100 ಶಾಲೆಗಳಿಗೆ ವಿಸ್ತರಿಸುವ ಕೆಲಸ ಮಾಡುತ್ತೇವೆ,'' ಎಂದರು. ''ಗ್ರಾಮೀಣ ಭಾಗದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವುದರ ಜತೆಗೆ ವ್ಯವಹಾರಿಕ, ಔದ್ಯೋಗಿಕವಾಗಿ ಪ್ರಮುಖವಾಗಿರುವ ಇಂಗ್ಲಿಷ್ ಕಲಿಕೆಯೂ ಅಗತ್ಯ. ಈ ನಿಟ್ಟಿನಲ್ಲಿ ಅದನ್ನು ಕಲಿಸಲಾಗುತ್ತಿದೆ. ಶಿಕ್ಷಣದಿಂದ ಮಾತ್ರ ಸಾಮಾಜಿಕ ನ್ಯಾಯ ಸಾಧ್ಯ. ಶೂದ್ರ ಬಂಡಾಯದಂತಹ ಕೃತಿಗಳು ಓದುಗರಲ್ಲಿ ವೈಚಾರಿಕ ಕ್ರಾಂತಿಯನ್ನುಂಟು ಮಾಡುತ್ತವೆ. ಸರಕಾರ ಸರ್ವರಿಗೂ ಸಮಾನ ಶಿಕ್ಷಣ ನೀಡುವ ನಿಟ್ಟಿನಲ್ಲಿ ಶ್ರಮಿಸುತ್ತಿದ್ದು, ಇಂತಹ ಸಾಮಾಜಿಕ ಕಳಕಳಿಯ ಕೃತಿಗಳು ನಮ್ಮ ಆಲೋಚನೆಗಳಿಗೆ ಬಲ ತುಂಬುತ್ತವೆ,'' ಎಂದರು.

'ದಿ ಶೂದ್ರ ರೆಬಿಲಿಯನ್' ಮೂಲ ಪುಸ್ತಕದ ಕನ್ನಡ ಅವತರಣಿಕೆ 'ಶೂದ್ರ ಬಂಡಾಯ' ಪುಸ್ತಕವನ್ನು ಗಣ್ಯರು ಬಿಡುಗಡೆಗೊಳಿಸಿದರು.

ಶೂದ್ರ ವರ್ಗ ಕಡೆಗಣನೆ: ರಾಜಕೀಯ ವಿಶ್ಲೇಷಕ, ಪ್ರಾಧ್ಯಾಪಕ ಎ.ನಾರಾಯಣ ಮಾತನಾಡಿ, ''ಚರಿತ್ರೆ ಬರೆದವರು ಶೂದ್ರವರ್ಗವನ್ನು ಹೊರಗಿಟ್ಟು ಬರೆದಿದ್ದಾರೆ. ವ್ಯವಹಾರಿಕ ಮತ್ತು ಸಾಂಸ್ಕೃತಿಕ ಚರಿತ್ರೆಗಳಲ್ಲಿ ಈ ವರ್ಗವನ್ನು ಕಡೆಗಣಿಸಲಾಗಿದೆ. ಪುರಾಣಗಳಲ್ಲಿ ಶೂದ್ರ ವರ್ಗದ ಪ್ರಸ್ತಾಪವೇ ಇಲ್ಲ. ನಾವು ಮತ್ತೆ ಶೂದ್ರವರ್ಗವನ್ನು ಚರಿತ್ರೆಗೆ ಕರೆದುಕೊಂಡು ಬರುವ ಅಗತ್ಯವಿದೆ. ಈ ನೆಲೆಗಟ್ಟಿನಲ್ಲಿ ಚಾರಿತ್ರಿಕವಾಗಿ ಆಗಿರುವ ಅಪಚಾರವನ್ನು ಸರಿಪಡಿಸುವ ಕೆಲಸವನ್ನು ಈ ಪುಸ್ತಕದಲ್ಲಿ ಮಾಡಲಾಗಿದೆ,'' ಎಂದು ಅಭಿಪ್ರಾಯಪಟ್ಟರು.

''ಶೂದ್ರ ವರ್ಗವು ಇಡೀ ಸಮಾಜದ ಜನರಿಗೆ ಆಹಾರ ಉತ್ಪಾದನೆ, ಬಟ್ಟೆ ನೇಯ್ಗೆ, ವಸತಿ ನಿರ್ಮಾಣ ಸೇರಿದಂತೆ ಅನೇಕ ಮೂಲಭೂತ ಅಗತ್ಯಗಳನ್ನು ಚಾರಿತ್ರಿಕವಾಗಿ ಪೂರೈಸಿದಂತಹ ಜನವರ್ಗವಾಗಿದೆ. ಉತ್ಪಾದನಾ ವಲಯದೊಳಗೆ ಶೂದ್ರ ವರ್ಗ ಕಾಣಿಸಿಕೊಳ್ಳುತ್ತದೆ. ಅಲ್ಲದೆ, ಇಡೀ ಸಂಸ್ಕೃತಿಯನ್ನು ಕಟ್ಟಿದವರು ಶೂದ್ರರು ಎಂಬುದನ್ನು ಈ ಪುಸ್ತಕ ವಿಸ್ತೃತವಾಗಿ ವಿವರಿಸುತ್ತದೆ,''ಎಂದು ತಿಳಿಸಿದರು.

ಲೇಖಕ ಕಂಚ ಐಲಯ್ಯ ಶೆಫರ್ಡ್, ಪುಸ್ತಕದ ಅನುವಾದಕಿ ಜಯಲಕ್ಷ್ಮಿ, ಲೇಖಕಿ ಭಾರತಿದೇವಿ, ಪ್ರಕಾಶಕ ಎನ್.ಧನಂಜಯ ಉಪಸ್ಥಿತರಿದ್ದರು.

ಅವ್ಯವಸ್ಥೆ ಖಂಡಿಸಿ ಹಾಸ್ಟೆಲ್ ವಿದ್ಯಾರ್ಥಿಗಳ ಪ್ರತಿಭಟನೆ

ಬೆಂಗಳೂರು: ಶ್ರೀಗಂಧದ ಕಾವಲ್‌ನಲ್ಲಿರುವ ಸಮಾಜ ಕಲ್ಯಾಣ ಇಲಾಖೆ ಅಧೀನದ ಡಾ.ಬಿ.ಆರ್.ಅಂಬೇಡ್ಕರ್ ಸರಕಾರಿ ಸ್ನಾತಕೋತ್ತರ ಬಾಲಕರ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳು ಅವ್ಯವಸ್ಥೆ ಖಂಡಿಸಿ ಹಾಸ್ಟೆಲ್ ಮುಂಭಾಗ ಭಾನುವಾರ ಪ್ರತಿಭಟನೆ ನಡೆಸಿದರು.

■ **ಕಳಪೆ ಆಹಾರ ವಿತರಣೆಗೆ ಆಕ್ರೋಶ**

''ಹಾಸ್ಟೆಲ್‌ನಲ್ಲಿ ನೀಡುತ್ತಿರುವ ಆಹಾರದ ಗುಣಮಟ್ಟ ತೀರಾ ಕಳಪೆಯಾಗಿದೆ. ಪ್ರಸಕ್ತ ಶೈಕ್ಷಣಿಕ ವರ್ಷದ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ ಹಾಗೂ ಲೇಖನ ಸಾಮಗ್ರಿ ವಿತರಿಸಿಲ್ಲ. ಸೌಲಭ್ಯಗಳ ಕೊರತೆ ಬಗ್ಗೆ ನಿಲಯ ಪಾಲಕರಿಗೆ (ವಾರ್ಡನ್) ದೂರು ನೀಡಿದರೆ ಸರಿಯಾದ ಪ್ರತಿಕ್ರಿಯೆ ಸಿಗುತ್ತಿಲ್ಲ. ಅಧಿಕಾರಿಗಳೂ ಸಹ ಅಹವಾಲು ಕೇಳಲು ಮುಂದಾಗುತ್ತಿಲ್ಲ,'' ಎಂದು ಪ್ರತಿಭಟನಾಕಾರರು ದೂರಿದ್ದಾರೆ.

ಸಮಾಜ ಕಲ್ಯಾಣ ಇಲಾಖೆಯ ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ ಸಮಸ್ಯೆ ಪರಿಹರಿಸಬೇಕು ಎಂದು ವಿದ್ಯಾರ್ಥಿಗಳು ಆಗ್ರಹಿಸಿದರು. ಪೊಲೀಸರು ಸ್ಥಳಕ್ಕೆ ಆಗಮಿಸಿ ವಿದ್ಯಾರ್ಥಿಗಳನ್ನು ಸಮಾಧಾನಿಸಿದರು.

ಭೇದ ಮರೆತು ಒಗ್ಗಟ್ಟಾಗಿರಿ: ಕೆ.ಎಚ್.ಮುನಿಯಪ್ಪ

■ **ವಿಕ ಸುದ್ದಿಲೋಕ** ಬೆಂಗಳೂರು

ಮಾದರ ಸಮುದಾಯ ಸೇರಿದಂತೆ 101 ಉಪ ಜಾತಿಗಳ ಶೋಷಿತ ಸಮುದಾಯದವರು ಅಣ್ಣ ತಮ್ಮಂದಿರಂತೆ ಒಗ್ಗಟ್ಟಾಗಿರಬೇಕು. ಆಗ ಮಾತ್ರ ನಮ್ಮ ಅಭಿವೃದ್ಧಿ ಸಾಧ್ಯ ಎಂದು ಮಾದರ ಮಹಾಸಭಾದ ಅಧ್ಯಕ್ಷರೂ ಆದ ಸಚಿವ ಕೆ.ಎಚ್. ಮುನಿಯಪ್ಪ ಕರೆ ನೀಡಿದರು.

ಕರ್ನಾಟಕ ಮಾದರ ಮಹಾಸಭಾವು ನಗರದ ಅರಮನೆ ಮೈದಾನದ ಗಾಯತ್ರಿ ವಿಹಾರದಲ್ಲಿ ಯೋಜಿಸಿದ್ದ ರಾಜ್ಯ ಕಾರ್ಯಕಾರಿಣಿ ಹಾಗೂ ಜಿಲ್ಲಾ ಮತ್ತು ತಾಲೂಕು ಮಟ್ಟದ ಪದಾಧಿಕಾರಿಗಳ ಸಭೆಯಲ್ಲಿ ಭಾನುವಾರ ಅವರು ಮಾತನಾಡಿದರು.

''ಮೀಸಲಾತಿಯು ಪ್ರವರ್ಗ ಎ ಗುಂಪಿಗೆ 5.25, ಬಿ ಗುಂಪಿಗೆ 5.25, ಸಿ ಗುಂಪಿಗೆ 4.5 ಸಿಕ್ಕಿದೆ. ನಾವು ಇದುವರೆಗೂ 15ರಲ್ಲಿ ಶೇ.ರಷ್ಟು ಕೂಡ ನಮ್ಮವರಿಗೆ ಮೀಸಲಾತಿ ಪಡೆದುಕೊಳ್ಳಲು ಅವಕಾಶ ಇರಲಿಲ್ಲ, ಇಂದು ಕಾಂಗ್ರೆಸ್ ಸರಕಾರ ಈ ಸೇವೆಯನ್ನು ಒದಗಿಸಿದೆ. ಅದನ್ನು ನಾವೆಲ್ಲರೂ ಬಳಸಿಕೊಳ್ಳಬೇಕು,'' ಎಂದರು.

ಜೂ.14ರಂದು ಸಭೆ

''ಜಿಲ್ಲಾ ಹಾಗೂ ತಾಲೂಕು ಮಟ್ಟದ ಸಮಿತಿಗಳನ್ನು ಶೀಘ್ರ ರಚಿಸಿ ಮುಂದಿನ ತಿಂಗಳ 14 ರಂದು ಎಲ್ಲಾ ಜಿಲ್ಲಾ ಹಾಗೂ ತಾಲೂಕು ಸಮಿತಿಗಳ ಸದಸ್ಯರು ಅಂದರೆ 3,652 ಸದಸ್ಯರು ಸೇರಿ ಸಭೆಯನ್ನು ನಡೆಸಬೇಕಾಗುತ್ತದೆ. ಪಕ್ಷಾತೀತವಾಗಿ ಎಲ್ಲ ಪಕ್ಷಗಳ ಮುಖಂಡರು ಹಾಗೂ ಸಮುದಾಯದ ಸ್ವಾಮೀಜಿಗಳ ನೇತೃತ್ವದಲ್ಲಿ ಜೂ. 14 ರಂದು ಸಭೆ ನಡೆಸಲು ಸಹಕಾರ ನೀಡಬೇಕು,'' ಎಂದರು.

ಕರ್ನಾಟಕ ಮಾದರ ಮಹಾಸಭಾದ ರಾಜ್ಯ ಕಾರ್ಯಕಾರಿಣಿ ಹಾಗೂ ಪದಾಧಿಕಾರಿಗಳ ಸಭೆಯನ್ನು ಗಣ್ಯರು ಉದ್ಘಾಟಿಸಿದರು.

ಇದೇ ವೇಳೆ ಯೋಜನಾ ಸಚಿವ ಡಿ. ಸುಧಾಕರ್ ಅವರ ನಿಧನದ ಹಿನ್ನೆಲೆಯಲ್ಲಿ ಕಾರ್ಯಕ್ರಮದಲ್ಲಿ ಮೌನ ಆಚರಿಸಲಾಯಿತು. ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ 25 ಮಕ್ಕಳಿಗೆ ತಲಾ 10 ಸಾವಿರ ರೂ. ಪ್ರೋತ್ಸಾಹಧನ ನೀಡುವ ಮೂಲಕ ಗೌರವಿಸಲಾಯಿತು.

ಮಾದರ ಚನ್ನಯ್ಯ ಸ್ವಾಮೀಜಿ, ಸಿದ್ದರಾಜು ಸ್ವಾಮೀಜಿ, ಆನಂದ ಮುನಿ ಸ್ವಾಮೀಜಿ, ಷಡಕ್ಷರಿ ಮುನಿ ಸ್ವಾಮೀಜಿ, ಮಾಜಿ ಸಂಸದರಾದ ಡಾ.ಎಲ್. ಹನುಮಂತಯ್ಯ, ಚಂದ್ರಪ್ಪ, ನಿಗಮದ ಅಧ್ಯಕ್ಷ ಮಂಜುನಾಥ್, ಮಾಜಿ ಸಚಿವ ಕೋಟೆ ಶಿವಣ್ಣ, ನಿವೃತ್ತ ಐಎಎಸ್ ಅಧಿಕಾರಿ ಗೋನಾಳ್ ಭೀಮಪ್ಪ ಭಾಗವಹಿಸಿದ್ದರು.

ಬೀಗ ಹಾಕಿದ ಮನೆಗಳ ಗಣತಿಗೆ ಸೂಚನೆ

ಬೆಂಗಳೂರು: ರಾಷ್ಟ್ರೀಯ ಜನಗಣತಿ ಕಾರ್ಯ ಯಶಸ್ವಿಗೊಳಿಸುವ ಉದ್ದೇಶದಿಂದ ಬೀಗ ಹಾಕಿರುವ ಮನೆಗಳಿಗೆ ಸಂಜೆಯಿಂದ ತಡರಾತ್ರಿವರೆಗೂ ಭೇಟಿ ನೀಡಿ, ನಿಗದಿತ ಕೆಲಸವನ್ನು ಪೂರ್ಣಗೊಳಿಸಬೇಕು ಎಂದು ಕೇಂದ್ರ ನಗರ ಪಾಲಿಕೆಯ ಹೆಚ್ಚುವರಿ ಆಯುಕ್ತ ದಲ್ಜಿತ್ ಕುಮಾರ್ ಗಣತಿದಾರರಿಗೆ ಸೂಚನೆ ನೀಡಿದ್ದಾರೆ.

ಈಗಾಗಲೇ ಮೊದಲ ಹಂತದಲ್ಲಿ ಮನೆ ಪಟ್ಟಿ ಹಾಗೂ ಮನೆ ಗಣತಿ ಕಾರ್ಯ ಆರಂಭವಾಗಿದೆ. ಕಾಲಮಿತಿಯಲ್ಲಿ ಪೂರ್ಣಗೊಳಿಸಲು ಗಣತಿದಾರ ಸಿಬ್ಬಂದಿ ಪ್ರತಿ ಮನೆಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸುತ್ತಿದ್ದಾರೆ. ಆದರೆ, ಉದ್ಯೋಗಸ್ಥ ನಿವಾಸಿಗಳು ಕೆಲಸ ಕಾರ್ಯಗಳಿಗೆ ತೆರಳುವುದು ಮತ್ತು ಇತರೆ ಕಾರಣಗಳಿಂದ ಮನೆಯಲ್ಲಿ ಬೀಗ ಹಾಕಿರುವುದು ಕಂಡುಬರುತ್ತಿದೆ. ಇದರಿಂದ ಈ ಮನೆಗಳು ಗಣತಿಯಿಂದ ಹೊರಗೆ ಉಳಿಯುತ್ತಿವೆ. ಆದ್ದರಿಂದ ಗಣತಿದಾರರ ಸಿಬ್ಬಂದಿ ಇಂತಹ ಮನೆಗಳಿಗೆ ಸಂಜೆಯಿಂದ ತಡರಾತ್ರಿವರೆಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸುತ್ತಿದ್ದಾರೆ. ಬೀಗ ಹಾಕಿರುವ ಮನೆಗಳಿಗೆ ಮೇಲುಸ್ತುವಾರಿ ಅಧಿಕಾರಿಗಳು ಹಾಗೂ ಕಂದಾಯ ವಿಭಾಗದ ಅಧಿಕಾರಿಗಳು ಗಣತಿದಾರರೊಂದಿಗೆ ತೆರಳಿ ಪರಿಶೀಲಿಸಬೇಕು ಎಂದು ಹೇಳಿದ್ದಾರೆ.

ತಮಿಳುನಾಡಿನ ಮುಖ್ಯಮಂತ್ರಿಯಾಗಿ ವಿಜಯ್ ಪ್ರಮಾಣ ಸ್ವೀಕಾರ ಹಿನ್ನೆಲೆಯಲ್ಲಿ ಅಭಿಮಾನಿಗಳು ಬೆಂಗಳೂರಿನಲ್ಲೂ ಸಂಭ್ರಮಿಸಿದರು. ನಗರದ ಹಲವೆಡೆ ಕಟೌಟ್ ಹಾಕಿ ಅಭಿಮಾನ ಮೆರೆದರು.

ಬೆಂಗಳೂರು ಗಾಯನ ಸಮಾಜದಲ್ಲಿ ಆಯೋಜಿಸಿದ್ದ 'ವಾದ್ಯ ವೈಭವ-2026' ಕಾರ್ಯಕ್ರಮದಲ್ಲಿ ವಿದ್ವಾನ್ ಶ್ರೀಮುಷ್ಣಂ ರಾಜಾರಾವ್ ಅವರಿಗೆ 'ವಾದ್ಯ ಕಲಾ ರತ್ನ' ಬಿರುದನ್ನು ಸಂಸದ ಡಾ.ಸಿ.ಎನ್.ಮಂಜುನಾಥ್ ಹಾಗೂ ವಿ.ಆರ್ ಕಟ್ಟಿ ಅವರು ಪ್ರದಾನ ಮಾಡಿದರು. ಗಾಯನ ಸಮಾಜದ ಅಧ್ಯಕ್ಷ ಎಂ.ಆರ್.ವಿ.ಪ್ರಸಾದ್, ಉಪಾಧ್ಯಕ್ಷ ಅಚ್ಯುತ ರಾವ್ ಪದಕಿ ಉಪಸ್ಥಿತರಿದ್ದರು.

ದೂರದೃಷ್ಟಿ, ನಿರಂತರ ಪ್ರಯತ್ನದಿಂದ ಯಶಸ್ಸು ಸಾಧ್ಯ

■ **ವಿಕ ಸುದ್ದಿಲೋಕ** ಬೆಂಗಳೂರು

ದೂರದೃಷ್ಟಿಯುಳ್ಳ ನಾಯಕತ್ವ, ನಿರಂತರ ಪ್ರಯತ್ನ ಮತ್ತು ಗ್ರಾಹಕರಿಗೆ ಮೌಲ್ಯವನ್ನು ನೀಡುವುದೇ ಯಶಸ್ವಿ ವ್ಯವಹಾರದ ರಹಸ್ಯ ಎಂದು ಹಣಕಾಸು ತಜ್ಞ ರಂಗಸ್ವಾಮಿ ಮೂಕನಹಳ್ಳಿ ಅಭಿಪ್ರಾಯಪಟ್ಟರು.



ಗೌರೀಶ್ ಅಕ್ಕಿ ಸ್ಟುಡಿಯೊ ವತಿಯಿಂದ ಆಯೋಜಿಸಿದ್ದ 'ಶಿ ಪವರ್ ಪ್ರಶಸ್ತಿ ಮತ್ತು ವ್ಯಾಪಾರ ಸಮಾವೇಶ-2026' ಕಾರ್ಯಕ್ರಮದ ಭಾಗವಾಗಿ ಜಯನಗರದ ವಿವೇಕ ಸಭಾಂಗಣದಲ್ಲಿ ಭಾನುವಾರ ನಡೆದ 'ಬಿಸಿನೆಸ್ ಮಾಸ್ಟರ್ ಕ್ಲಾಸ್'ನಲ್ಲಿ ಅವರು ಮಾತನಾಡಿದರು.

15 ಸಾಧಕ ಮಹಿಳೆಯರಿಗೆ ಸನ್ಮಾನ

''ವ್ಯವಹಾರ ಆರಂಭಿಸುವ ಮೊದಲು ಮಾರುಕಟ್ಟೆಯ ವಿಶ್ಲೇಷಣೆ, ಪ್ರತಿಸ್ಪರ್ಧಿಗಳ ಗುರುತಿಸಿ, ಗ್ರಾಹಕರ ಅಗತ್ಯಗಳನ್ನು ಅರ್ಥ ಮಾಡಿಕೊಳ್ಳಬೇಕು. ಮಾರುಕಟ್ಟೆಯಲ್ಲಿನ ಬದಲಾವಣೆಗಳಿಗೆ ತಕ್ಕಂತೆ ತಂತ್ರಜ್ಞಾನ ಬಳಸಿ, ಹೊಸ ಕೌಶಲಗಳನ್ನು ಅಳವಡಿಸಿಕೊಳ್ಳಬೇಕು. ಗ್ರಾಹಕರಿಗೆ ಉತ್ತಮ ಗುಣಮಟ್ಟದ ಉತ್ಪನ್ನವನ್ನು ನಿರಂತರವಾಗಿ ಒದಗಿಸಬೇಕು,'' ಎಂದು ಹೇಳಿದರು.

''ವ್ಯವಹಾರಕ್ಕೆ ಬರುವ ಮತ್ತು ಹೋಗುವ ಹಣದ ನಿಖರವಾದ ಲೆಕ್ಕಾಚಾರವನ್ನು ಹೊಂದಿರಬೇಕು. ಅನಗತ್ಯ ಖರ್ಚುಗಳನ್ನು ಕಡಿಮೆ ಮಾಡಬೇಕು. ಸರಳವಾದರೂ, ವ್ಯವಸ್ಥಿತವಾದ ಅಕೌಂಟಿಂಗ್ ಸಾಫ್ಟ್‌ವೇರ್ ಬಳಸಿ ಲೆಕ್ಕಪತ್ರ ನಿರ್ವಹಿಸಬೇಕು. ವ್ಯವಹಾರದಲ್ಲಿ ಅನಿರೀಕ್ಷಿತ ನಷ್ಟ ಅಥವಾ ತುರ್ತು ಪರಿಸ್ಥಿತಿ ಎದುರಿಸಲು ಪ್ರತ್ಯೇಕ ಹಣ ತೆಗೆದಿರಿಸುವುದು ಉತ್ತಮ ಮಾರ್ಗವಾಗಿದೆ,'' ಎಂದು ತಿಳಿಸಿದರು.

ನಂತರ ನಡೆದ ಕಾರ್ಯಕ್ರಮದಲ್ಲಿ 15 ಸಾಧಕ ಮಹಿಳೆಯರಿಗೆ ಸನ್ಮಾನ ಮಾಡಲಾಯಿತು. ಕಾರ್ಯಕ್ರಮದಲ್ಲಿ ಕೃಷಿ ಉದ್ಯಮಿ ಕವಿತಾ ಮಿಶ್ರಾ, ಚಿತ್ರನಟಿ ಭಾವನಾ ರಾಮಣ್ಣ, ಉದ್ಯಮಿ ಶ್ವೇತಾ ರಾಜಶೇಖರ್ ಉಪಸ್ಥಿತರಿದ್ದರು.

ಮೆಡಿಕವರ್ ಆಸ್ಪತ್ರೆ ಉದ್ಘಾಟನೆ

ಬೆಂಗಳೂರು: ವೈಟ್‌ಫೀಲ್ಡ್‌ನ ಹೂಡಿ ಜಂಕ್ಷನ್‌ನಲ್ಲಿ ಮೆಡಿಕವರ್ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯನ್ನು ನಟಿ ರುಕ್ಮಿಣಿ ವಸಂತ ಉದ್ಘಾಟಿಸಿದರು. ಮೆಡಿಕವರ್ ಸಂಸ್ಥೆಯ ಚೇರ್ಮನ್ ಅನಿಲ್ ಕೃಷ್ಣ, ಸಿಇಒ ಹರಿಕೃಷ್ಣ, ಅಧಿಕಾರಿಗಳು, ವೈದ್ಯಕೀಯ ತಜ್ಞರು ಹಾಗೂ ಆಹ್ವಾನಿತ ಗಣ್ಯರು ಉಪಸ್ಥಿತರಿದ್ದರು.

100 ಹಾಸಿಗೆಗಳ ಅತ್ಯಾಧುನಿಕ ಆಸ್ಪತ್ರೆ ಇದಾಗಿದೆ. ಗರ್ಭಧಾರಣೆ, ಫೀಟಲ್ ಮೆಡಿಸಿನ್, ನವಜಾತ ಶಿಶು ತೀವ್ರ ನಿಗಾ, ಮಕ್ಕಳ ತುರ್ತು ಚಿಕಿತ್ಸೆ ಹಾಗೂ ಪೀಡಿಯಾಟ್ರಿಕ್ ಕ್ರಿಟಿಕಲ್ ಕೇರ್ ಸೇವೆಗಳನ್ನು ಒಂದೇ ಸೂರಿನಡಿ ಚಿಕಿತ್ಸಾ ವ್ಯವಸ್ಥೆ ಒದಗಿಸುವ ಉದ್ದೇಶದಿಂದ ಈ ಆಸ್ಪತ್ರೆಯನ್ನು ವಿನ್ಯಾಸಗೊಳಿಸಲಾಗಿದೆ. ತಾಯಂದಿರ ದಿನಾಚರಣೆಯಂದೇ ಆಸ್ಪತ್ರೆ ಆರಂಭಿಸಿರುವುದು ವಿಶೇಷವಾಗಿದೆ.

ಉದ್ಘಾಟನೆಯ ಅಂಗವಾಗಿ ಬೆಂಗಳೂರಿನ ತಾಯಂದಿರು ಬರೆದ ನೂರು ಹಸ್ತಲಿಖಿತ ಶುಭಾಶಯ ಸಂದೇಶಗಳನ್ನು ಒಳಗೊಂಡ 'ವಾಲ್ ಆಫ್ ವಿಶಸ್' ಅನಾವರಣಗೊಳಿಸಲಾಯಿತು. ರುಕ್ಮಿಣಿ ವಸಂತ ಅವರು 101ನೇ ಸಂದೇಶವನ್ನು ಸೇರಿಸಿದರು.

ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಅಪಾಯಕಾರಿ ಮರಗಳ ತೆರವಿಗೆ ಸೂಚನೆ

ಮರ, ರೆಂಬೆ-ಕೊಂಬೆಗಳ ತೆರವು ಕಾರ್ಯ ಚುರುಕು

■ **ವಿಕ ಸುದ್ದಿಲೋಕ** ಬೆಂಗಳೂರು

ಇತ್ತೀಚೆಗೆ ಸುರಿದ ಮಳೆಯಿಂದ ನೆಲಕ್ಕುರುಳಿದ ಮರಗಳು, ರೆಂಬೆ-ಕೊಂಬೆಗಳನ್ನು ಸಂಪೂರ್ಣವಾಗಿ ತೆರವುಗೊಳಿಸದ ಪರಿಣಾಮ ಸಂಚಾರಕ್ಕೆ ಅಡ್ಡಿಯುಂಟಾಗಿತ್ತು. ಒಂದು ವಾರದ ನಂತರ ಎಚ್ಚೆತ್ತುಕೊಂಡಿರುವ ಬೆಂಗಳೂರು ಕೇಂದ್ರ ನಗರ ಪಾಲಿಕೆ, ತನ್ನ ವ್ಯಾಪ್ತಿಯಲ್ಲಿ ಬಿದ್ದ ಮರಗಳು, ರೆಂಬೆ-ಕೊಂಬೆಗಳನ್ನು ತೆರವುಗೊಳಿಸುವ ಕಾರ್ಯವನ್ನು ಚುರುಕುಗೊಳಿಸಿದೆ.

ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಏ.29ರಿಂದ ಈವರೆಗೆ ಮಳೆ-ಗಾಳಿಗೆ 136 ಮರಗಳು ಹಾಗೂ 269 ರೆಂಬೆ-ಕೊಂಬೆಗಳು ಧರೆಗುರುಳಿವೆ. ಇದರಲ್ಲಿ 136 ಮರಗಳು ಮತ್ತು 264 ರೆಂಬೆ-ಕೊಂಬೆಗಳನ್ನು ತೆರವುಗೊಳಿಸಲಾಗಿದೆ. ಬಾಕಿ ಉಳಿದ ಮರ ಹಾಗೂ ರೆಂಬೆ ಕೊಂಬೆಗಳ ತೆರವು ಪ್ರಕ್ರಿಯೆ ನಡೆಸುತ್ತಿರುವುದಾಗಿ ಕೇಂದ್ರ ನಗರ ಪಾಲಿಕೆಯ ಅರಣ್ಯ ವಿಭಾಗದ ಅಧಿಕಾರಿಗಳು ತಿಳಿಸಿದ್ದಾರೆ. ಈಗಾಗಲೇ ರಸ್ತೆಯಲ್ಲಿ ಬಿದ್ದ ಮರಗಳು ಹಾಗೂ ರೆಂಬೆ-ಕೊಂಬೆಗಳನ್ನು ತಕ್ಷಣಕ್ಕೆ ಕತ್ತರಿಸಿ, ರಸ್ತೆ ಪಕ್ಕದಲ್ಲಿ ಹಾಕಿ ವಾಹನಗಳ ಸಂಚಾರಕ್ಕೆ ಅನುಕೂಲ ಮಾಡಿಕೊಡಲಾಗಿತ್ತು. ಸದ್ಯ, ಅವುಗಳನ್ನು ಆದ್ಯತೆ ಮೇರೆಗೆ ತೆರವುಗೊಳಿಸಲಾಗುತ್ತಿದೆ ಎಂದು ಬೆಂಗಳೂರು ಕೇಂದ್ರ ನಗರ ಪಾಲಿಕೆಯ ಅಭಿವೃದ್ಧಿ ಆಯುಕ್ತ ದಲ್ಜಿತ್ ಕುಮಾರ್ ತಿಳಿಸಿದ್ದಾರೆ.

ಮಳೆಗಾಲದ ಮುಂಜಾಗ್ರತಾ ಕ್ರಮವಾಗಿ ಸಾರ್ವಜನಿಕರ ಸುರಕ್ಷತಾ ದೃಷ್ಟಿಯಿಂದ ಬೆಂಗಳೂರು ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಂಡುಬರುವ ಅಪಾಯಕಾರಿ ಹಾಗೂ ಒಣಗಿದ ಮರ, ರೆಂಬೆ-ಕೊಂಬೆಗಳನ್ನು ತೆರವುಗೊಳಿಸಲು ಸೂಚನೆ ನೀಡಲಾಗಿದೆ. ಸಾರ್ವಜನಿಕರು ಅಂತಹ ಮರ, ರೆಂಬೆ-ಕೊಂಬೆಗಳ ಬಗ್ಗೆ ಕೇಂದ್ರ ನಗರ ಪಾಲಿಕೆಯ ಅರಣ್ಯ ವಿಭಾಗದ ಅಧಿಕಾರಿಗಳು ಹಾಗೂ ನಿಯಂತ್ರಣ ಕೊಠಡಿ ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸಿ ದೂರು ಸಲ್ಲಿಸಬಹುದು ಎಂದರು.

ಅರಣ್ಯ ಘಟಕದ ಅಧಿಕಾರಿಗಳು, ನಿಯಂತ್ರಣ ಕೊಠಡಿ ದೂರವಾಣಿ ಸಂಖ್ಯೆ ವಿವರ

- **ಸಂತೋಷ್ ಕುಮಾರ್- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ- 7019464699**
- **ನರೇಂದ್ರ ಬಾಬು- ವಲಯ ಅರಣ್ಯಾಧಿಕಾರಿ- 980685399**
- **ವಿನಯ ಕುಮಾರ್ ಸಿ- ಉಪ ವಲಯ ಅರಣ್ಯಾಧಿಕಾರಿ -7760933913**
- **ಶಿವಣ್ಣ - ಉಪ ವಲಯ ಅರಣ್ಯಾಧಿಕಾರಿ -9164597895**
- **ನಿಯಂತ್ರಣ ಕೊಠಡಿ ದೂರವಾಣಿ ಸಂಖ್ಯೆ- 948068570**

ಜೀವನಾಂಶಕ್ಕೆ ಆದೇಶ

» ನಮ್ಮ ಮೊದಲ ಪುಟದಿಂದ

ಜೀವನಾಂಶ ಮತ್ತು ವೈದ್ಯಕೀಯ ವೆಚ್ಚಗಳಿಗಾಗಿ ಜೀವನ ವೆಚ್ಚವನ್ನು ಪರಿಗಣಿಸಿ, ಅರ್ಜಿದಾರರು-ಪತ್ನಿಗೆ ಮಾಸಿಕ ಜೀವನಾಂಶಕ್ಕಾಗಿ 15,000 ರೂ.ಗಳ ಮೊತ್ತವನ್ನು ನೀಡುವುದು ನ್ಯಾಯಯುತ ಮತ್ತು ಸಮಂಜಸವಾಗಿದೆ ಎಂದ ಹೇಳಿರುವ ನ್ಯಾಯಾಲಯ, ಪತಿ ಮಾರ್ಚ್ 2016ರಿಂದ ಬಾಕಿ ಹಣವನ್ನು ಎರಡು ತಿಂಗಳೊಳಗೆ ಪಾವತಿಸಬೇಕು'' ಎಂದು ನಿರ್ದೇಶನ ನೀಡಿದೆ. ಸಿಆರ್‌ಪಿಸಿ ಸೆಕ್ಷನ್ 125 ರಡಿಯಲ್ಲಿ ಪತ್ನಿ ಸಲ್ಲಿಸಿದ್ದ ಕ್ಲೈಮ್ ಅರ್ಜಿಯನ್ನು ವಜಾಗೊಳಿಸಿರುವ ಕೌಟುಂಬಿಕ ನ್ಯಾಯಾಲಯದ ಆದೇಶವನ್ನು ನ್ಯಾಯಪೀಠ ರದ್ದುಗೊಳಿಸಿದೆ.

ಪ್ರಕರಣದ ಹಿನ್ನೆಲೆ: ಬೆಂಗಳೂರಿನಲ್ಲಿ ವಾಸಿಸುತ್ತಿದ್ದ ಇಬ್ಬರೂ 1985ರಲ್ಲಿ ವಿವಾಹವಾದರು. ಅವರಿಗೆ ಮೂವರು ಮಕ್ಕಳಿದ್ದಾರೆ. ಇಬ್ಬರು ಹೆಣ್ಣು ಮಕ್ಕಳು (ವಿವಾಹಿತರು) ಮತ್ತು ಒಬ್ಬ ಮಗ ಆಟೊ ಚಾಲಕ. ಪದೇ ಪದೇ ಜಗಳ ಮತ್ತು ಹೊಂದಾಣಿಕೆ ಕೊರತೆಯಿಂದಾಗಿ ಪತ್ನಿಯು 2016ರಿಂದ ಪ್ರತ್ಯೇಕವಾಗಿ ವಾಸಿಸಲಾರಂಭಿಸಿದರು. ಪತ್ನಿಯ ಪ್ರಕಾರ, ಪತಿ ಆಪರೇಟರ್‌ಆಗಿ ಕೆಲಸ ಮಾಡುವ ಮೂಲಕ ತಿಂಗಳಿಗೆ 74,000 ರೂ.ಗಳನ್ನು ಗಳಿಸುತ್ತಿದ್ದರೂ, ಕುಟುಂಬವನ್ನು ಪೋಷಿಸುತ್ತಿರಲಿಲ್ಲ. ಅಲ್ಲದೇ ಕುಡುಕನಾಗಿದ್ದು, ಅನುಮಾನಾಸ್ಪದ ಸ್ವಭಾವವುಳ್ಳವರಾಗಿದ್ದಾರೆ ಎಂದು ಆರೋಪಿಸಿದ್ದಾರೆ. ಮತ್ತೊಂದೆಡೆ ಪತಿ, ತನ್ನ ಹೆಂಡತಿ ತನ್ನ ಮೇಲೆ ದೌರ್ಜನ್ಯ ಎಸಗಿದ್ದಾಳೆ ಮತ್ತು ಮನೆಯಿಂದ ಹೊರ ಹೋಗುವಂತೆ ಒತ್ತಾಯಿಸಿದ್ದಾಳೆ ಎಂದು ಹೇಳಿದ್ದಾರೆ. 2018ರ ಜನವರಿ 30ರಂದು ಕೌಟುಂಬಿಕ ನ್ಯಾಯಾಲಯವು ಪತ್ನಿಯ ಹಕ್ಕು ಅರ್ಜಿಯನ್ನು ವಜಾಗೊಳಿಸಿತು. ಜತೆಗೆ ಪತ್ನಿಯು ತನ್ನ ಗಂಡನ ವಿರುದ್ಧದ ಆರೋಪಗಳನ್ನು ಸಾಬೀತುಪಡಿಸಲು ವಿಫಲಳಾಗಿದ್ದಾಳೆ ಮತ್ತು 13 ವರ್ಷಗಳಿಂದ ಆತನ ವಿರುದ್ಧ ಯಾವುದೇ ಕ್ರಮ ಜರುಗಿಸಲು ಅರ್ಜಿ ಸಲ್ಲಿಸಿಲ್ಲ ಎಂದು ಹೇಳಿತ್ತು.

15ರಂದು 'ಒಳಚರಂಡಿ ಪುರಾಣ'

ಬೆಂಗಳೂರು: ಅಂತರಂಗ ತಂಡವು ಮೇ 15ರಂದು ಸಂಜೆ 7.15ಕ್ಕೆ ಮಲ್ಲೇಶ್ವರದ ಸೇವಾಸದನದಲ್ಲಿ 'ಒಳಚರಂಡಿ ಪುರಾಣ' ನಾಟಕ ಪ್ರದರ್ಶನ ಆಯೋಜಿಸಿದೆ.

ಸರಕಾರಿ ಕಚೇರಿಗಳ ಕಾರ್ಯವೈಖರಿಯನ್ನು ವಿಡಂಬನಾತ್ಮಕವಾಗಿ ತೋರಿಸುವ ಪ್ರಯತ್ನವನ್ನು ಈ ನಾಟಕ ಮಾಡಲಿದೆ. ಚಲನಚಿತ್ರ ನಿರ್ದೇಶಕ ಡಾ.ನಾಗತಿಹಳ್ಳಿ ಚಂದ್ರಶೇಖರ ಅವರ ಸಣ್ಣ ಕತೆ ಆಧರಿಸಿ ನಾಟಕಕಾರ ಗೌರೀಶ್ ಜೋಶಿ ಅವರು ಈ ನಾಟಕ ರಚಿಸಿದ್ದಾರೆ. ಅರ್ಚನಾ ಶ್ಯಾಮ್ ಅವರ ವಸ್ತ್ರವಿನ್ಯಾಸ, ರಂಗವಿನ್ಯಾಸ ಮತ್ತು ನಿರ್ದೇಶನದಲ್ಲಿ ಈ ನಾಟಕ ಮೂಡಿಬರಲಿದೆ.

ದ್ರಾವಿಡ ನಾಡಲ್ಲಿ ವಿಜಯ ಶಕೆ ಶುರು

ಟಿವಿಕೆಯ 9 ಸಚಿವರ ಪ್ರಮಾಣ ಸ್ವೀಕಾರ | ಬಹುಮತ ಸಾಬೀತಿನ ಬಳಿಕ ಸಂಪುಟ ವಿಸ್ತರಣೆ ಸಾಧ್ಯತೆ

ವಿಸ್ತರಣೆ ವೇಳೆ ಮಿತ್ರಪಕ್ಷಗಳಿಗೆ ಅವಕಾಶ ನಿರೀಕ್ಷೆ | ಮೇ 13ರಂದು ವಿಶ್ವಾಸಮತದ ಅಗ್ನಿ ಪರೀಕ್ಷೆ

ಚೆನ್ನೈ: ತಮಿಳುನಾಡು ಮುಖ್ಯಮಂತ್ರಿಯಾಗಿ ಟಿವಿಕೆ ಮುಖ್ಯಸ್ಥ ಸಿ.ಜೋಸೆಫ್ ವಿಜಯ್ ಅವರು ಭಾನುವಾರ ಪ್ರಮಾಣ ವಚನ ಸ್ವೀಕರಿಸಿದರು.

ಸಿಎಂ ವಿಜಯ್ ಜತೆಗೆ ಟಿವಿಕೆ ಶಾಸಕರಾದ ಎನ್.ಆನಂದ್, ಕೆ.ಜಿ.ಅರುಣ್‌ರಾಜ್, ಕೆ.ಎ.ಸೆಂಗೊಟ್ಟೈಯನ್, ಆಧವ್ ಅರ್ಜುನ್, ಸಿ.ಟಿ.ಆರ್ ನಿರ್ಮಲ್ ಕುಮಾರ್, ಎ.ರಾಜ್ ಮೋಹನ್, ಟಿ.ಕೆ.ಪ್ರಭು, ಪಿ.ವೆಂಕಟರಮಣ, ಎಸ್.ಕೀರ್ತನಾ ಅವರು ಸಚಿವರಾಗಿ ಅಧಿಕಾರ ಸ್ವೀಕರಿಸಿದರು.

ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ, ಮಿತ್ರ ಪಕ್ಷಗಳ ಶಾಸಕರು, ಮುಖಂಡರು, ವಿಜಯ್ ಕುಟುಂಬಸ್ಥರು, ನಟಿ ತ್ರಿಷಾ ಕೃಷ್ಣನ್ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು. ಮಾಜಿ ಸಿಎಂ ಎ.ಕೆ. ಸ್ಟಾಲಿನ್, ವಿಜಯ್ ಪತ್ನಿ ಸಂಗೀತಾ ಸ್ವರ್ಣಲಿಂಗಂ, ಮಕ್ಕಳ ಗೈರು ಹಾಜರಿ ಎದ್ದು ಕಂಡಿತು.

ಪಂಚಾದೇಶ

- ಮಹಿಳೆಯರಿಗೆ ಉಚಿತ ಬಸ್ ಸಂಚಾರ
- ಪ್ರತಿ ಕುಟುಂಬಕ್ಕೆ 200 ಯುನಿಟ್ ಉಚಿತ ವಿದ್ಯುತ್
- ಮಹಿಳಾ ರಕ್ಷಣೆಗೆ ಪ್ರತ್ಯೇಕ ಕಾರ್ಯಪಡೆ ರಚನೆ
- ರಾಜ್ಯದಲ್ಲಿ ಡ್ರಗ್ ನಿಯಂತ್ರಣಕ್ಕೆ ವಿಶೇಷ ತಂಡ
- ರಾಜ್ಯದ ₹10 ಲಕ್ಷ ಕೋಟಿ ಸಾಲದ ವಿವರ ಬಿಡುಗಡೆಗೆ ಆದೇಶ

ಮಿತ್ರ ಪಕ್ಷಗಳಿಗಿಲ್ಲ ಸಚಿವ ಸ್ಥಾನ: ಸಿಎಂ ವಿಜಯ್ ಸರಕಾರ ರಚನೆಗೆ ಬೆಂಬಲ ನೀಡಿದ ಮಿತ್ರ ಪಕ್ಷಗಳಿಗೆ ಸಚಿವ ಸ್ಥಾನ ನೀಡದಿರುವುದು ಕುತೂಹಲ ಮೂಡಿಸಿದೆ. ಕಾಂಗ್ರೆಸ್, ವಿಸಿಕೆ, ಎಡ ಪಕ್ಷಗಳು, ಮುಸ್ಲಿಂ ಲೀಗ್‌ನ 13 ಶಾಸಕರು ಬೆಂಬಲ ನೀಡಿದ್ದಾರೆ. ಮುಂದಿನ ಸಂಪುಟ ವಿಸ್ತರಣೆ ವೇಳೆ ಮಿತ್ರ ಪಕ್ಷಗಳಿಗೆ ಸಚಿವ ಸ್ಥಾನ ನೀಡುವ ಸಾಧ್ಯತೆಗಳಿವೆ ಎಂದು ತಿಳಿದು ಬಂದಿದೆ.

ಅಳಿಸಿದ 70 ವರ್ಷದ ದಾಖಲೆ: ತಮಿಳುನಾಡಿನಲ್ಲಿ 70 ವರ್ಷದ ಬಳಿಕ ದ್ರಾವಿಡೇತರ ಪಕ್ಷಗಳ ಸರಕಾರ ರಚನೆಯಾಗಿದೆ. 1967 ರಿಂದ 2026ರವರೆಗೆ ರಾಜ್ಯವನ್ನು ಡಿಎಂಕೆ ಮತ್ತು ಎಐಎಡಿಎಂಕೆ ಸರದಿಯಂತೆ ಆಡಳಿತ ನಡೆಸಿಕೊಂಡು ಬಂದಿದ್ದವು. ರಾಜ್ಯದಲ್ಲಿ ಹೊಸ ರಾಜಕೀಯ ಅಲೆ ಸೃಷ್ಟಿಸಿದ ವಿಜಯ್ ಅವರ ಟಿವಿಕೆ ಎರಡು ದ್ರಾವಿಡ ಪಕ್ಷಗಳನ್ನು ಮಣಿಸಿ, ಮೊದಲ ಪ್ರಯತ್ನದಲ್ಲಿ ಅಧಿಕಾರದ ಗದ್ದುಗೆ ಏರಿದೆ. 1996 ರಲ್ಲಿ ಡಿಎಂಕೆ, ಟಿಎಂಸಿ (ತಮಿಳ್ ಮನಿಲ ಕಾಂಗ್ರೆಸ್), 2006 ರಲ್ಲಿ ಡಿಎಂಕೆ ನೇತೃತ್ವದಲ್ಲಿ ಮೈತ್ರಿ ಸರಕಾರ ರಚನೆ ಬಿಟ್ಟರೆ ತಮಿಳುನಾಡು ಇತಿಹಾಸದಲ್ಲಿ ಮೊದಲ ಬಾರಿಗೆ ವಿಜಯ್ ನೇತೃತ್ವದಲ್ಲಿ ಸಮ್ಮಿಶ್ರ ಸರಕಾರ ರಚನೆಯಾಗಿದೆ.

ಗಮನಸೆಳೆದ ದಿರಿಸು: ಪದಗ್ರಹಣ ಕಾರ್ಯಕ್ರಮದಲ್ಲಿ ನಟ ವಿಜಯ್ ಧರಿಸಿದ್ದ ಉಡುಗೆ ತೊಡುಗೆ ಗಮನ ಸೆಳೆಯಿತು. ಬಿಳಿ ಶರ್ಟ್, ಕಪ್ಪು ಪ್ಯಾಂಟ್, ಕಪ್ಪು ಸೂಟ್‌ನಲ್ಲಿ ಥೇಟ್ ಸಿನಿಮಾ ನಾಯಕನ ದಿರಿಸಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ಬದಲಾದ ಕಾಲಘಟ್ಟದಲ್ಲಿ ಯುವ ಜನರ ಆಶೋತ್ತರದಂತೆ ವಿಜಯ್ ಸಂಪ್ರದಾಯಿಕ ಉಡುಗೆ ತೊಡುಗೆ ಬದಲು ಆಧುನಿಕ ಡ್ರೆಸ್‌ನಲ್ಲಿ ಅಧಿಕಾರ ಸ್ವೀಕರಿಸುವ ಮೂಲಕ, ಇಲ್ಲಿಂದಲೇ ಬದಲಾವಣೆ ಆರಂಭವಾಗಲಿದೆ. ಪ್ರಸ್ತುತ ಚಿಂತನೆಯಂತೆ ಸರಕಾರ ಮುನ್ನಡೆಯಲಿದೆ ಎಂಬ ಸಂದೇಶ ನೀಡಿದರು.

ತಮಿಳುನಾಡು ರಾಜಕೀಯ ಇತಿಹಾಸದಲ್ಲಿ ಪದಗ್ರಹಣ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸೇರಿದಂತೆ ಶಾಸಕರು ತಮಿಳು ಸಂಪ್ರದಾಯ, ಪರಂಪರೆಯಂತೆ ಬಿಳಿ ಶರ್ಟ್, 'ಪಂಚೆ ಅಥವಾ ಧೋತಿ ಧರಿಸಿ ಬರುತ್ತಿದ್ದರು. ಆದರೆ, ವಿಭಿನ್ನ ಶೈಲಿಯ ಉಡುಗೆ ಮೂಲಕ ವಿಜಯ್ ಎಲ್ಲಾ ಸಂಪ್ರದಾಯ, ಪರಂಪರೆಗೆ ತೆರೆ ಎಳೆದರು.

ಪ್ರತಿಪಕ್ಷ ನಾಯಕರಾಗಿ ಉದಯನಿಧಿ

ತಮಿಳುನಾಡು ವಿಧಾನಸಭೆ ಪ್ರತಿಪಕ್ಷ ನಾಯಕರಾಗಿ ಮಾಜಿ ಸಿಎಂ ಸ್ಟಾಲಿನ್ ಪುತ್ರ ಮಾಜಿ ಡಿಸಿಎಂ ಉದಯನಿಧಿ ಸ್ಟಾಲಿನ್ ಆಯ್ಕೆಯಾಗಿದ್ದಾರೆ. ಭಾನುವಾರ ನಡೆದ ಡಿಎಂಕೆ ಶಾಸಕಾಂಗ ಸಭೆಯಲ್ಲಿ ಉದಯನಿಧಿ ಅವರನ್ನು ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆ ಮಾಡಲಾಯಿತು. ಕೆ.ಕೆ.ನೆಹರು ಅವರನ್ನು ಉಪ ನಾಯಕರಾಗಿ ನೇಮಿಸಲಾಗಿದ್ದು, ಇ.ವಿ.ವೇಲು ಅವರನ್ನು ಪಕ್ಷದ ವಿಪ್ ಆಗಿ ನೇಮಕ ಮಾಡಲಾಗಿದೆ. ತಮಿಳುನಾಡು ಮುಖ್ಯಮಂತ್ರಿಯಾಗಿ ಜೋಸೆಫ್ ವಿಜಯ್ ಪದಗ್ರಹಣ ಬೆನ್ನಿಗೆ ಉದಯನಿಧಿ ಅವರನ್ನು ಪ್ರತಿಪಕ್ಷ ನಾಯಕರಾಗಿ ನೇಮಿಸಲಾಯಿತು.

ಪ್ರಮಾಣ ವಚನ ಸ್ವೀಕರಿಸಿದ ಬಳಿಕ ನೆರೆದಿದ್ದ ಅಭಿಮಾನಿಗಳು ಮತ್ತು ಬೆಂಬಲಿಗರ ಜತೆ ಸೆಲ್ಫಿ ಕ್ಲಿಕ್ಕಿಸಿದ ತಮಿಳುನಾಡು ಮುಖ್ಯಮಂತ್ರಿ ವಿಜಯ್.

ವೈವಿಧ್ಯಮಯ ಸಚಿವ ಸಂಪುಟ

ಸಿಎಂ ವಿಜಯ್ ಸಂಪುಟದಲ್ಲಿ ವೈದ್ಯನಿಂದ ಹಿಡಿದು ಬಾಸ್ಕೆಟ್ ಬಾಲ್ ಆಟಗಾರ, ತಂತ್ರಗಾರನಿಂದ ಹಿಡಿದು ಅನುಭವಿ ರಾಜಕೀಯ ನಾಯಕರ ತಂಡವಿದೆ.

ಸೆಂಗೋಟ್ಟೈಯನ್: 77 ವರ್ಷದ ಅನುಭವಿ ನಾಯಕ. ಎಐಎಡಿಎಂಕೆಯಿಂದ ಉಚ್ಚಾಟಿತರಾದ ಬಳಿಕ ಟಿವಿಕೆ ಸೇರಿದ್ದರು. ಗೋಬಿಚೆಟ್ಟಿಪಾಳ್ಯಂ ಕ್ಷೇತ್ರದಿಂದ ಸತತ 10ನೇ ಬಾರಿಗೆ ಆಯ್ಕೆಯಾಗಿದ್ದಾರೆ.

ಆಧವ್ ಅರ್ಜುನ್ : ರಾಜಕೀಯ ತಂತ್ರಗಾರ, ಕ್ರೀಡಾ ಆಡಳಿತಾಧಿಕಾರಿಯಾದ ಆಧವ್ ಅರ್ಜುನ್, ಬಾಸ್ಕೆಟ್ ಬಾಲ್ ಆಟಗಾರ ಹಾಗೂ ಬಾಸ್ಕೆಟ್ ಬಾಲ್ ಫೆಡರೇಷನ್ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದಾರೆ. ಟಿವಿಕೆ ಪ್ರಧಾನ ಕಾರ್ಯದರ್ಶಿ. ವಿಲ್ಲಿವಕ್ಕಂ ಕ್ಷೇತ್ರದಿಂದ ಜಯ ಗಳಿಸಿದ್ದಾರೆ.



ಎನ್.ಆನಂದ್: ಪುದುಚೆರಿ ಮೂಲದ ಆನಂದ್, ಟಿವಿಕೆ ವಕ್ತಾರರಾಗಿದ್ದಾರೆ. ತಿಯಾಗರಾಯನಗರದಿಂದ ವಿಧಾನಸಭೆ ಪ್ರವೇಶಿಸಿದ್ದಾರೆ.

ಅರುಣ್‌ರಾಜ್: ವೃತ್ತಿಯಲ್ಲಿ ವೈದ್ಯ, ಮಾಜಿ ನಾಗರಿಕ ಸೇವಾ (ಐಆರ್‌ಎಸ್-ಐಟಿ ಇಲಾಖೆಯ ಜಂಟಿ ಆಯುಕ್ತ) ಅಧಿಕಾರಿಯಾದ ಅರುಣ್ ರಾಜ್, ತಿರುಚೆಗೊಂಡ್ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾಗಿದ್ದಾರೆ.

ರಾಜ್ ಮೋಹನ್: ಚೆನ್ನೈ ನಗರ ವ್ಯಾಪ್ತಿಯ ಎಗ್ಮೋರ್ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾಗಿದ್ದಾರೆ.

ಪಿ.ವೆಂಕಟರಮಣನ್: ಟಿವಿಕೆ ಪಕ್ಷದ ಖಜಾಂಚಿಯಾದ ವೆಂಕಟರಮಣನ್, ಮೈಲಾಪೂರೆ ಕ್ಷೇತ್ರದಿಂದ ಚುನಾಯಿತರಾಗಿದ್ದಾರೆ.

ಟಿ.ಕೆ.ಪ್ರಭು: ವೃತ್ತಿಯಲ್ಲಿ ದಂತ ವೈದ್ಯರಾದ ಟಿ.ಕೆ.ಪ್ರಭು, ವೈದ್ಯ ವೃತ್ತಿ ತೊರೆದು ಟಿವಿಕೆ ಸೇರಿದ್ದರು. ಕರೈಕುಡಿ ಕ್ಷೇತ್ರದಿಂದ ವಿಧಾನಸಭೆ ಪ್ರವೇಶಿಸಿದ್ದಾರೆ.

ಎಸ್.ಕೀರ್ತನಾ: ರಾಜಕೀಯ ತಂತ್ರಗಾರಿಕೆ, ಚುನಾವಣಾ ಪ್ರಚಾರ ರೂಪುರೇಷೆ ರೂಪಿಸುತ್ತಿದ್ದ 29 ವರ್ಷದ ಎಸ್.ಕೀರ್ತನಾ, ಎಂಎಸ್‌ಸಿ ಪದವೀಧರೆ. ವಿರುಧುನಗರ ಜಿಲ್ಲೆಯ ಪ್ರಸಿದ್ಧ ಪಟಾಕಿ ಕಾರ್ಖಾನೆ ನೆಲೆ ಶಿವಕಾಶಿಯಿಂದ ಜಯ ಸಾಧಿಸಿದ್ದಾರೆ. ಒಳ್ಳೆಯ ಗಾಯಕಿ, ಐದು ಭಾಷೆ ಬಲ್ಲ ನಿಪುಣೆ.



ಸಿ.ಟಿ.ಆರ್ ನಿರ್ಮಲ್‌ಕುಮಾರ್: ವೃತ್ತಿಪರ ರಾಜಕಾರಣಿಯಾದ ಸಿ.ಟಿ.ಆರ್. ನಿರ್ಮಲ್‌ಕುಮಾರ್ ಅವರು, ರಾಜಕೀಯವಾಗಿ ಧಾರ್ಮಿಕ ವಿವಾದಿತ ಕೇಂದ್ರವಾಗಿದ್ದ ಮದುರೈನ ತಿರುಪ್ಪರಕುಂದ್ರಂ ಕ್ಷೇತ್ರದಿಂದ ಆಯ್ಕೆಯಾಗಿದ್ದಾರೆ.

ಪ್ರಮಾಣ ವಚನ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ.

ತಿರುಚಿರಾಪಳ್ಳಿ ಕ್ಷೇತ್ರಕ್ಕೆ ರಾಜೀನಾಮೆ

ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಬೆನ್ನಿಗೆ ವಿಜಯ್ ಅವರು ಪೆರಂಬೂರು ಕ್ಷೇತ್ರ ಉಳಿಸಿಕೊಂಡು ತಿರುಚಿರಾಪಳ್ಳಿ ಕ್ಷೇತ್ರಕ್ಕೆ ರಾಜೀನಾಮೆ ನೀಡಿದರು. ಚೆನ್ನೈ ಮಹಾನಗರ ವ್ಯಾಪ್ತಿಯ ಪೆರಂಬೂರು ರಾಜಕೀಯ ದೃಷ್ಟಿಯಿಂದ ಆಯಕಟ್ಟಿನ ಕ್ಷೇತ್ರ. ಪಕ್ಷದ ಬಲವರ್ಧನೆ, ಪಕ್ಷದ ಬೇರುಗಳನ್ನು ಮತ್ತಷ್ಟು ವಿಸ್ತರಿಸುವ ಉದ್ದೇಶ ಹೊಂದಿರುವ ವಿಜಯ್ ಅವರು, ನಗರ ಪ್ರದೇಶದ 16 ಕ್ಷೇತ್ರಗಳ ಮೇಲೆ ಪ್ರಭಾವ ಹೆಚ್ಚಿಸಲು ಪೆರಂಬೂರು ಕ್ಷೇತ್ರ ಉಳಿಸಿಕೊಂಡಿದ್ದಾರೆ ಎಂದು ಹೇಳಲಾಗಿದೆ.

> ಚುನಾವಣೆಯಲ್ಲಿ ಜನರಿಗೆ ಕೊಟ್ಟ ಮಾತು ಈಡೇರಿಸಲು ವಿಲ್ ಪವರ್ ಬೇಕು. ಹಣಕಾಸಿನ ನೆಪ ಹೇಳಿ ತಪ್ಪಿಸಿಕೊಳ್ಳಬಾರದು. ಆರ್ಥಿಕ ಸ್ಥಿತಿಗತಿ, ಸಾಲದ ನೆಪ ಹೇಳಿ ನೀಡಿದ ಭರವಸೆಯಿಂದ ಹಿಂದೆ ಸರಿಯುವುದು ಮತ ಹಾಕಿದ ಜನರಿಗೆ ಮಾಡುವ ಮೋಸವಾಗಲಿದೆ. ಕೊಟ್ಟ ಮಾತು ಪೂರೈಸಲು ಇಚ್ಛಾಶಕ್ತಿ ಬೇಕು. ಆಡಳಿತ ನಡೆಸುವ ಸಾಮರ್ಥ್ಯ ಇರಬೇಕು.
>
> - **ಎಂ.ಕೆ.ಸ್ಟಾಲಿನ್** ಮಾಜಿ ಮುಖ್ಯಮಂತ್ರಿ

ಕಾರ್ಯಕ್ರಮದಲ್ಲಿ ವಿಜಯ್ ತಾಯಿ ಶೋಭಾ ಜತೆಗೆ ನಟಿ ತ್ರಿಷಾ.

ಗಮನ ಸೆಳೆದ ನಟಿ ತ್ರಿಷಾ

ಸ್ನೇಹಿತ ವಿಜಯ್ ಪದಗ್ರಹಣ ಕಾರ್ಯಕ್ರಮಕ್ಕೆ ಆಗಮಿಸಿದ ನಟಿ ತ್ರಿಷಾ ಕೃಷ್ಣನ್ ಎಲ್ಲರ ಗಮನ ಸೆಳೆದರು. ಐಸ್ ಬ್ಲ್ಯೂ ಕಾಂಜೀವರಂ ಸೀರೆ, ಕ್ರೀಮ್ ಬಣ್ಣದ ಎಂಬ್ರಾಯ್ಡರಿ ಬ್ಲೌಸ್‌ಗೆ ಹೊಂದಾಣಿಕೆಯಾಗುವಂತೆ ಡೈಮಂಡ್ ರೂಬಿ ಚೋಕರ್ ನೆಕ್ಲೇಸ್, ಮ್ಯಾಚಿಂಗ್ ಕಿವಿಯೋಲೆ ಧರಿಸಿ ಬಂದಿದ್ದರು. ಹಣೆಯಲ್ಲಿದ್ದ ಚಿಕ್ಕ ಬಿಂದಿ, ತಲೆಯಲ್ಲಿ ಮುಡಿದಿದ್ದ ಮಲ್ಲಿಗೆ ಹೂಗಳಿಂದ ಗಮನ ಸೆಳೆದರು. ಸಿಎಂ ವಿಜಯ್ ಹಾಗೂ ತ್ರಿಷಾ ಐದು ಸಿನಿಮಾಗಳಲ್ಲಿ ತೆರೆ ಹಂಚಿಕೊಂಡಿದ್ದಾರೆ. ಸಂಗೀತಾ ಅವರು ವಿಚ್ಛೇದನ ಅರ್ಜಿ ಸಲ್ಲಿಸಿದ ಬಳಿಕ ಇಬ್ಬರೂ ಒಟ್ಟಿಗೆ ಸಾರ್ವಜನಿಕವಾಗಿ ಕಾಣಿಸಿಕೊಂಡಿದ್ದರು. ಆದರೆ, ತಮ್ಮಿಬ್ಬರ ನಡುವಿನ ಸ್ನೇಹ ಸಂಬಂಧದ ಬಗ್ಗೆ ಎಲ್ಲೂ ಮಾತನಾಡಿರಲಿಲ್ಲ.

ಜನರ ಹಣ ಮುಟ್ಟಲ್ಲ ಮುಟ್ಟಿದವರ ಬಿಡಲ್ಲ

ಪ್ರಮಾಣ ವಚನ ಸ್ವೀಕರಿಸಿದ ಬಳಿಕ ಜನರನ್ನು ಉದ್ದೇಶಿಸಿ ಮಾತನಾಡಿದ ಸಿಎಂ ಜೋಸೆಫ್ ವಿಜಯ್, ''ಇಲ್ಲಿಂದಲೇ ಬದಲಾವಣೆ ಆರಂಭವಾಗಲಿದೆ. ಜಾತ್ಯತೀತ, ಸಾಮಾಜಿಕ ನ್ಯಾಯದ ಪರಿಕಲ್ಪನೆಯಲ್ಲಿ ಆಡಳಿತ ನೀಡಲಾಗುವುದು. ರಾಜ್ಯದ ಜನರಿಗೆ ಕೊಟ್ಟ ಭರವಸೆಗಳನ್ನು ಈಡೇರಿಸುವೆ. ಭ್ರಷ್ಟಾಚಾರ ಮುಕ್ತಗೊಳಿಸಿ, ಪಾರದರ್ಶಕ ಆಡಳಿತ ನೀಡುವೆ. ಡಿಎಂಕೆ ಸರಕಾರದ ಅವಧಿಯ ಆರ್ಥಿಕ ಸ್ಥಿತಿಗತಿ ಕುರಿತು ಶ್ವೇತಪತ್ರ ಹೊರಡಿಸುವೆ. ಜನರ ಒಂದು ಪೈಸೆ ಹಣವನ್ನು ನಾನು ಮುಟ್ಟುವುದಿಲ್ಲ, ನನ್ನ ಸರಕಾರದಲ್ಲಿ ಯಾರೇ ಹಗರಣ ನಡೆಸಿದರೂ ಮುಲಾಜಿಲ್ಲದೆ ಕ್ರಮ ಕೈಗೊಳ್ಳುವೆ,'' ಎಂದು ವಾಗ್ದಾನ ಮಾಡಿದರು.

ಮೇ 12ಕ್ಕೆ ಅಸ್ಸಾಂ ಸಿಎಂ ಹಿಮಂತ ಪದಗ್ರಹಣ

ಗುವಾಹಟಿ: ಅಸ್ಸಾಂ ಬಿಜೆಪಿ ಶಾಸಕಾಂಗ ಪಕ್ಷ ಹಾಗೂ ಎನ್‌ಡಿಎ ನಾಯಕರಾಗಿ ಆಯ್ಕೆಯಾಗಿರುವ ಹಿಮಂತ ಬಿಸ್ವಾ ಶರ್ಮ ಅವರು ರಾಜ್ಯದ ಮುಖ್ಯಮಂತ್ರಿಯಾಗಿ ಮೇ 12ರಂದು ಪದಗ್ರಹಣ ಮಾಡಲಿದ್ದಾರೆ.

ಗುವಾಹಟಿಯಲ್ಲಿ ಭಾನುವಾರ ನಡೆದ ಬಿಜೆಪಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಹಿಮಂತ ಬಿಸ್ವಾ ಶರ್ಮ ಅವರನ್ನು ಶಾಸಕಾಂಗ ಪಕ್ಷದ ನಾಯಕರಾಗಿ ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಬಳಿಕ ನಡೆದ ಎನ್‌ಡಿಎ ಶಾಸಕರ ಸಭೆಯಲ್ಲಿ ಹಿಮಂತ ಮೈತ್ರಿಕೂಟ ನಾಯಕರಾಗಿ ಆಯ್ಕೆಯಾದರು. ವೀಕ್ಷಕರಾಗಿ ಆಗಮಿಸಿದ್ದ ಕೇಂದ್ರ ಸಚಿವ ಜೆ.ಪಿ.ನಡ್ಡಾ, ಹರಿಯಾಣ ಮುಖ್ಯಮಂತ್ರಿ ನಯಾಬ್ ಸಿಂಗ್ ಸೈನಿ ಅವರು ಹಿಮಂತ ಅವರ ಹೆಸರು ಘೋಷಣೆ ಮಾಡಿದರು.

ಶಾಸಕಾಂಗ ಪಕ್ಷದ ಸಭೆ ಬಳಿಕ ಲೋಕಭವನಕ್ಕೆ ತೆರಳಿದ ಹಿಮಂತ ಬಿಸ್ವಾ ಶರ್ಮ ಅವರು ರಾಜ್ಯಪಾಲ ಲಕ್ಷ್ಮಣ್ ಪ್ರಸಾದ್ ಆಚಾರ್ಯ ಅವರನ್ನು ಭೇಟಿಯಾಗಿ ಸರಕಾರ ರಚನೆಗೆ ಹಕ್ಕು ಮಂಡಿಸಿದರು. ಮೇ 12 ರಂದು ನಡೆಯುವ ಪದಗ್ರಹಣ ಕಾರ್ಯಕ್ರಮದಲ್ಲಿ ಹಿಮಂತ ಶರ್ಮ ಜತೆಗೆ ಸಂಪುಟ ಸದಸ್ಯರಿಗೆ ರಾಜ್ಯಪಾಲರು ಪ್ರತಿಜ್ಞಾವಿಧಿ ಬೋಧಿಸಲಿದ್ದಾರೆ.

ಆಪರೇಷನ್ ಸಿಂಧೂರ ಸಂದರ್ಭ ಪಾಕ್‌ನ 900 ಡ್ರೋನ್ ದಾಳಿ ವಿಫಲ

ಜೈಪುರ: ಕಳೆದ ವರ್ಷ ಮೇ 7 ಮತ್ತು 8ರ ರಾತ್ರಿ ಪಾಕಿಸ್ತಾನ, ಚೀನಾ ಮತ್ತು ಟರ್ಕಿ ದೇಶಗಳು ಭಾರತದ ಮೇಲೆ ಸುಮಾರು 900 ಡ್ರೋನ್‌ಗಳ ಮೂಲಕ ಏಕಕಾಲಕ್ಕೆ ದಾಳಿ ನಡೆಸಿದ್ದವು ಎಂದು ಡಿಜಿಎಂಒ ಲೆಫ್ಟಿನೆಂಟ್ ಜನರಲ್ ರಾಜೀವ್ ಘಾಯ್ ಮತ್ತು ಏರ್‌ಮಾರ್ಷಲ್ ಅವಧೇಶ್ ಕುಮಾರ್‌ಭಾರ್ತಿ ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಪಹಲ್ಗಾಮ್ ದಾಳಿಯ ಒಂದು ವರ್ಷದ ನಂತರದ ರಕ್ಷಣಾ ಸ್ಥಿತಿಗತಿಗಳ ಬಗ್ಗೆ ಮಾಹಿತಿ ನೀಡಿದರು.

''ಕಾಶ್ಮೀರದ ಎಲ್‌ಒಸಿಯಿಂದ ಗುಜರಾತ್ ಅಂತಾರಾಷ್ಟ್ರೀಯ ಗಡಿಯವರೆಗೆ ಈ 'ಸ್ವಾರ್ಮ್ ಡ್ರೋನ್' (ಗುಂಪು ಡ್ರೋನ್) ದಾಳಿ ನಡೆಸಲಾಗಿತ್ತು. ಟರ್ಕಿ ಒದಗಿಸಿದ ಅಗ್ಗದ ಡ್ರೋನ್‌ಗಳನ್ನು ಹೊಡೆದುರುಳಿಸುವ ಮೂಲಕ ಭಾರತದ ಕ್ಷಿಪಣಿ ಸಂಗ್ರಹವನ್ನು ಖಾಲಿ ಮಾಡುವುದು ಇವರ ಗುರಿಯಾಗಿತ್ತು. ಕೇವಲ 30 ರಿಂದ 50 ಸಾವಿರ ರೂಪಾಯಿ ಬೆಲೆಯ ಡ್ರೋನ್‌ಗಳನ್ನು ಹೊಡೆದುರುಳಿಸಲು ಭಾರತವು 2.5 ಕೋಟಿ ರೂ. ಬೆಲೆಯ ದುಬಾರಿ ಕ್ಷಿಪಣಿಗಳನ್ನು ಬಳಸುವಂತೆ ಮಾಡುವುದು ಅವರ ತಂತ್ರವಾಗಿತ್ತು,'' ಎಂದು ತಿಳಿಸಿದರು. ಆದರೆ, ಭಾರತೀಯ ವಾಯುಪಡೆಯ ಐಎಸಿಸಿಎಸ್ ವ್ಯವಸ್ಥೆಯು ಪಾಕಿಸ್ತಾನದ ಈ ಎಲ್ಲಾ ಪ್ರಯತ್ನಗಳನ್ನು ವಿಫಲಗೊಳಿಸಿತು. ಪಾಕಿಸ್ತಾನದ ಒಂದೇ ಒಂದು ಡ್ರೋನ್ ಕೂಡ ಭಾರತದ ಪ್ರಮುಖ ಮಿಲಿಟರಿ ನೆಲೆಗಳಿಗೆ ಹಾನಿ ಮಾಡಲು ಸಾಧ್ಯವಾಗಲಿಲ್ಲ. ಇನ್ನು ಆಪರೇಷನ್ ಸಿಂಧೂರ ಕಾರ್ಯಾಚರಣೆಯ ಕಾರ್ಯಾಚರಣೆಯಲ್ಲಿ ಪಾಕಿಸ್ತಾನದ 100ಕ್ಕೂ ಹೆಚ್ಚು ಸೈನಿಕರು ಮತ್ತು ಭಯೋತ್ಪಾದಕ ಶಿಬಿರಗಳಲ್ಲಿದ್ದ 100ಕ್ಕೂ ಹೆಚ್ಚು ಉಗ್ರರನ್ನು ಭಾರತೀಯ ಸೇನೆ ಹತ್ಯೆಗೈದಿದೆ ಎಂದು ತಿಳಿಸಿದೆ.

ಯೋಗಿ ಆದಿತ್ಯನಾಥ್ ಸಂಪುಟ ವಿಸ್ತರಣೆ, 6 ಸಚಿವರ ಸೇರ್ಪಡೆ

ಲಖನೌ: ಮುಂಬರುವ 2027ರ ವಿಧಾನಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಸಚಿವ ಸಂಪುಟ ವಿಸ್ತರಣೆ ಮಾಡಿದ್ದಾರೆ. ನಾಲ್ವರು ಹೊಸ ಸಚಿವರನ್ನು ಸಂಪುಟಕ್ಕೆ ಸೇರಿಸಿಕೊಳ್ಳಲಾಗಿದೆ. ಇಬ್ಬರು ಸಹಾಯಕ ಸಚಿವರಿಗೆ ಸ್ವತಂತ್ರ ನಿರ್ವಹಣೆಯ ಸಚಿವರಾಗಿ ಬಡ್ತಿ ನೀಡಲಾಗಿದೆ.

2022ರಲ್ಲಿ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ನೇತೃತ್ವದ ಬಿಜೆಪಿ ಸರಕಾರವು ಅಧಿಕಾರಕ್ಕೆ ಬಂದ ನಂತರ ನಡೆದ ಎರಡನೇ ಸಚಿವ ಸಂಪುಟ ವಿಸ್ತರಣೆ ಇದಾಗಿದೆ. ಭಾನುವಾರ ಲೋಕಭವನದಲ್ಲಿ ನಡೆದ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ, ಬಿಜೆಪಿಯ ಮಾಜಿ ರಾಜ್ಯ ಅಧ್ಯಕ್ಷ ಭೂಪೇಂದ್ರ ಚೌಧರಿ ಮತ್ತು ಎಸ್‌ಪಿ ಬಂಡಾಯ ನಾಯಕ ಮನೋಜ್ ಪಾಂಡೆ ಸಂಪುಟ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು. ಸಹಾಯಕ ಸಚಿವರಾದ ಅಜಿತ್ ಪಾಲ್ ಸಿಂಗ್ ಮತ್ತು ಸೋಮೇಂದ್ರ ತೋಮರ್ ಅವರನ್ನು ಸ್ವತಂತ್ರ ನಿರ್ವಹಣೆಯ ಸಹಾಯಕ ಸಚಿವ ಸ್ಥಾನಕ್ಕೆ ಬಡ್ತಿ ನೀಡಲಾಯಿತು. ಕೃಷ್ಣ ಪಾಸ್ವಾನ್, ಸುರೇಂದ್ರ ದಿಲೇರ್, ಹಂಸರಾಜ್ ವಿಶ್ವಕರ್ಮ ಮತ್ತು ಕೈಲಾಶ್ ರಜಪೂತ್ ಪ್ರಮಾಣ ವಚನ ಸ್ವೀಕರಿಸಿದ ಸಚಿವರಾಗಿದ್ದಾರೆ. ಉತ್ತರ ಪ್ರದೇಶದ ಸಚಿವ ಸಂಪುಟ ಸದಸ್ಯರ ಗರಿಷ್ಠ ಸಂಖ್ಯೆ 60. ಈ ವಿಸ್ತರಣೆಯ ಮೊದಲು, 54 ಮಂತ್ರಿಗಳಿದ್ದರು, ಆರು ಸ್ಥಾನಗಳು ಖಾಲಿ ಉಳಿದಿತ್ತು.

ಬಗೆಹರಿಯದ ಕೇರಳ ಬಿಕ್ಕಟ್ಟು

ತಿರುವನಂತಪುರ: ಕೇರಳ ವಿಧಾನಸಭೆ ಚುನಾವಣೆ ಫಲಿತಾಂಶ ಪ್ರಕಟವಾಗಿ ಒಂದು ವಾರ ಕಳೆದರೂ ಕಾಂಗ್ರೆಸ್‌ಗೆ ಮುಖ್ಯಮಂತ್ರಿ ಅಭ್ಯರ್ಥಿ ಆಯ್ಕೆ ಕಗ್ಗಂಟಾಗಿಯೇ ಉಳಿದಿದೆ.



ಎಡಪಕ್ಷಗಳ ಎಲ್‌ಡಿಎಫ್ ಕೂಟವನ್ನು ಮಣಿಸಿ ಭರ್ಜರಿಯಾಗಿ ಅಧಿಕಾರಕ್ಕೆ ಮರಳಿದ್ದ ಯುಡಿಎಫ್ ಮೈತ್ರಿಕೂಟವು ಕಾಂಗ್ರೆಸ್ ಆಂತರಿಕ ಸಂಘರ್ಷದಿಂದ ಸರಕಾರ ರಚನೆ ಮಾಡಲಾಗದ ಸ್ಥಿತಿಗೆ ತಲುಪಿದೆ.

ಶಾಸಕಾಂಗ ಪಕ್ಷದ ನಾಯಕನ ಆಯ್ಕೆಗೆ ಆಗಮಿಸಿದ್ದ ಮುಕುಲ್ ವಾಸ್ನಿಕ್ ಹಾಗೂ ಅಜಯ್ ಮಾಕೆನ್ ಅವರು ಶಾಸಕರ ಅಭಿಪ್ರಾಯ ಆಲಿಸಿ, ವರದಿ ಸಲ್ಲಿಸಿದ್ದರೂ, ಮೂವರು ನಾಯಕರ ಪೈಪೋಟಿಯಿಂದ ಮುಂದಿನ ನಾಯಕನ ಆಯ್ಕೆ ಹೈಕಮಾಂಡ್ ನಾಯಕರಿಗೆ ಬಿಸಿ ತುಪ್ಪವಾಗಿ ಪರಿಣಮಿಸಿದೆ.

ಸಿಎಲ್‌ಪಿ ನಾಯಕನ ಆಯ್ಕೆ ವಿಳಂಬ ಕುರಿತು ಪ್ರತಿಕ್ರಿಯೆ ನೀಡಿರುವ ಕೇರಳ ಕಾಂಗ್ರೆಸ್ ಉಸ್ತುವಾರಿ ದೀಪಾ ದಾಸ್‌ಮುನ್ಶಿ, ''ಶಾಸಕರ ಅಭಿಪ್ರಾಯ ಆಲಿಸಲಾಗಿದೆ. ವರಿಷ್ಠರು ಶಾಸಕಾಂಗ ನಾಯಕನ ಹೆಸರು ಘೋಷಣೆ ಮಾಡಲಿದ್ದಾರೆ. ಹೈಕಮಾಂಡ್ ನಿರ್ಧಾರವನ್ನು ಎಲ್ಲರೂ ಒಪ್ಪಿಕೊಳ್ಳಲಿದ್ದಾರೆ,'' ಎಂದು ಹೇಳಿದ್ದರು.

ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ಹಿರಿಯ ನಾಯಕರಾದ ವಿ.ಡಿ.ಸತೀಶನ್ ಹಾಗೂ ರಮೇಶ್ ಚೆನ್ನಿತ್ತಲ ನಡುವೆ ಮುಖ್ಯಮಂತ್ರಿ ಹುದ್ದೆಗೆ ಪೈಪೋಟಿ ನಡೆದಿದೆ. ಚುನಾಯಿತ 63 ಶಾಸಕರಲ್ಲಿ 43 ಮಂದಿ ಕೆ.ಸಿ.ವೇಣುಗೋಪಾಲ್ ಬೆಂಬಲಿಸಿದ್ದು, 10 ಶಾಸಕರು ಸತೀಶನ್ ಪರವಾಗಿ, 6 ಶಾಸಕರು ಚೆನ್ನಿತ್ತಲ ಬೆಂಬಲಿಸಿದ್ದಾರೆ ಎಂದು ತಿಳಿದು ಬಂದಿದೆ.

ಯುದ್ಧ ಶೀಘ್ರ ಮುಗಿಯಲಿದೆ ಎಂದು ಪುಟಿನ್ ಸುಳಿವು

ಮಾಸ್ಕೋ: ನಾಲ್ಕು ವರ್ಷಗಳಿಂದ ಉಕ್ರೇನ್ ವಿರುದ್ಧದ ಸಮರವನ್ನು ಕೊನೆಗೊಳಿಸುವ ಸುಳಿವನ್ನು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ನೀಡಿದ್ದಾರೆ.



ಈ ಕುರಿತು ಅವರು ನೀಡಿರುವ ಹೇಳಿಕೆಯು ಶಾಂತಿ ಮಾತುಕತೆ ಬಗ್ಗೆ ಹೊಸ ನಿರೀಕ್ಷೆ ಹುಟ್ಟಿಸಿದೆ. ಮಾಸ್ಕೊದಲ್ಲಿ ನಡೆದ ವಿಜಯ ದಿನಾಚರಣೆಯ ವೇಳೆ ಮಾತನಾಡಿದ ಪುಟಿನ್, ''ಉಕ್ರೇನ್ ಜತೆಗಿನ ಯುದ್ಧ ಮುಗಿಯುವ ಹಂತಕ್ಕೆ ಬಂದಿದೆ ಎಂದು ನಾನು ಭಾವಿಸುತ್ತೇನೆ,'' ಎಂದಿದ್ದಾರೆ. ಈ ಮೂಲಕ ಅವರು ಪರೋಕ್ಷವಾಗಿ ಯುದ್ಧ ನಿಲ್ಲಿಸುವ ಬಗ್ಗೆ ಸೂಚನೆ ನೀಡಿದ್ದಾರೆ. ಇದೇ ವೇಳೆ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೂಚಿಸಿದ್ದ ಮೂರು ದಿನಗಳ ಕದನ ವಿರಾಮವನ್ನು ರಷ್ಯಾ ಮತ್ತು ಉಕ್ರೇನ್ ಪಾಲಿಸಲು ಆರಂಭಿಸಿವೆ. ಎರಡೂ ದೇಶಗಳು ತಲಾ 1,000 ಕೈದಿಗಳನ್ನು ಬಿಡುಗಡೆ ಮಾಡಲು ಒಪ್ಪಿಕೊಂಡಿವೆ. ಯುದ್ಧ ಆರಂಭವಾದ ನಂತರ ನಡೆಯುತ್ತಿರುವ ಅತಿದೊಡ್ಡ ಮಟ್ಟದ ಕೈದಿಗಳ ವಿನಿಮಯ ಇದಾಗಿದೆ. ಸಂಧಾನದ ಬಗ್ಗೆ ಮಾತನಾಡಿದ ಪುಟಿನ್, ''ಐರೋಪ್ಯ ಒಕ್ಕೂಟದ ನಾಯಕರೊಂದಿಗೆ ಮತ್ತೆ ಸಂವಾದಕ್ಕೆ ಸಿದ್ಧನಿದ್ದೇನೆ. ಆದರೆ ಉಕ್ರೇನ್ ಅಧ್ಯಕ್ಷ ವ್ಲೊಲೊಡಿಮಿರ್ ಝೆಲೆನ್‌ಸ್ಕಿ ಜತೆಗೆ ನೇರ ಮಾತುಕತೆ ನಡೆಸಲು ಮೊದಲು ಶಾಂತಿ ಒಪ್ಪಂದದ ಬಗ್ಗೆ ಸ್ಪಷ್ಟತೆ ಬೇಕು,'' ಎಂದು ಷರತ್ತು ಹಾಕಿದ್ದಾರೆ. ಇನ್ನೊಂದೆಡೆ, ಟ್ರಂಪ್ ಯುದ್ಧವನ್ನು ಶಾಶ್ವತವಾಗಿ ನಿಲ್ಲಿಸಲು ಎರಡೂ ದೇಶಗಳು ಮುಂದಾಗಬೇಕು ಎಂದು ಕರೆ ನೀಡಿದ್ದಾರೆ. 2022ರ ಫೆಬ್ರವರಿಯಲ್ಲಿ ಆರಂಭವಾದ ರಷ್ಯಾ-ಉಕ್ರೇನ್ ಯುದ್ಧದಲ್ಲಿ ಈವರೆಗೆ ಸಾವಿರಾರು ಜನರು ಮೃತಪಟ್ಟಿದ್ದಾರೆ. ಲಕ್ಷಾಂತರ ಜನರು ತಮ್ಮ ಮನೆಗಳನ್ನು ತೊರೆದಿದ್ದಾರೆ.

ಚೆಕ್‌ಪೋಸ್ಟ್ ಮೇಲೆ ಉಗ್ರರ ದಾಳಿ: 15 ಸಿಬ್ಬಂದಿ ಸಾವು

ಇಸ್ಲಾಮಾಬಾದ್: ಪಾಕಿಸ್ತಾನದ ಖೈಬರ್ ಪಖ್ತುಂಖ್ವಾ ಪ್ರಾಂತ್ಯದ ಬನ್ನು ಜಿಲ್ಲೆಯಲ್ಲಿ ಪೊಲೀಸ್ ಚೆಕ್‌ಪೋಸ್ಟ್ ಮೇಲೆ ಉಗ್ರರು ನಡೆಸಿದ ಆತ್ಮಾಹುತಿ ಬಾಂಬ್ ದಾಳಿ ಮತ್ತು ಗುಂಡಿನ ದಾಳಿಯಲ್ಲಿ 15 ಭದ್ರತಾ ಸಿಬ್ಬಂದಿ ಮೃತಪಟ್ಟಿದ್ದು, ಹಲವರು ಗಾಯಗೊಂಡಿದ್ದಾರೆ.

ಸ್ಫೋಟಕಗಳನ್ನು ತುಂಬಿದ್ದ ವಾಹನವೊಂದು ಪೊಲೀಸ್ ಪೋಸ್ಟ್‌ನತ್ತ ವೇಗವಾಗಿ ನುಗ್ಗಲು ಯತ್ನಿಸಿತು. ಅನುಮಾನಾಸ್ಪದವಾಗಿ ಕಂಡ ಈ ವಾಹನದ ಮೇಲೆ ಭದ್ರತಾ ಸಿಬ್ಬಂದಿ ಗುಂಡು ಹಾರಿಸಿದಾಗ ಭೀಕರ ಸ್ಫೋಟ ಸಂಭವಿಸಿದೆ. ಸ್ಫೋಟದ ತೀವ್ರತೆಗೆ ಪೊಲೀಸ್ ಚೆಕ್‌ಪೋಸ್ಟ್ ಸಂಪೂರ್ಣ ಧ್ವಂಸವಾಗಿದ್ದು, ಹತ್ತಿರದ ಹಲವು ಮನೆಗಳ ಚಾವಣಿಗಳು ಕುಸಿದಿವೆ. ಸ್ಫೋಟದ ನಂತರ ಉಂಟಾದ ಅವಶೇಷಗಳ ಅಡಿಯಲ್ಲಿ ಹಲವು ಸಿಬ್ಬಂದಿ ಸಿಲುಕಿಕೊಂಡಿದ್ದರು.

ಸ್ಫೋಟದ ಬೆನ್ನಲ್ಲೇ ಉಗ್ರರ ಗುಂಪು ಹಾನಿಗೊಳಗಾದ ಚೆಕ್‌ಪೋಸ್ಟ್ ಮೇಲೆ ಗುಂಡಿನ ದಾಳಿ ನಡೆಸಿದೆ. ಒಟ್ಟು 15 ಭದ್ರತಾ ಸಿಬ್ಬಂದಿ ದಾಳಿಯಲ್ಲಿ ಪ್ರಾಣ ಕಳೆದುಕೊಂಡಿದ್ದಾರೆ. ಪ್ರಧಾನಿ ಶೆಹಬಾಜ್ ಷರೀಫ್ ಅವರು ಮುಖ್ಯಮಂತ್ರಿ ಮಹಮ್ಮದ್ ಸೊಹೈಲ್ ಅಫ್ರಿದಿ ಅವರಿಗೆ ಕರೆ ಮಾಡಿ ಸಂತ್ರಸ್ತ ಕುಟುಂಬಕ್ಕೆ ಸಾಂತ್ವನ ತಿಳಿಸಿದ್ದಾರೆ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ

(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ಅರ್ಹ ಗುತ್ತಿಗೆದಾರರಿಂದ ದ್ವಿ-ಹಂತದ ಟೆಂಡರ್ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕ್ರ ಸಂ.	ಕಾಮಗಾರಿಗಳ ವಿವರ	ಕಾಮಗಾರಿಗಿಟ್ಟ ಮೊತ್ತ / ಇಎಂಡಿ ಮೊತ್ತ
ಮುಖ್ಯ ಅಭಿಯಂತರರ ಕಛೇರಿ (ವಿನ್ಯಾಸ & ಗುಣ ಆಶ್ವಾಸನೆ), 9ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು – 560 009.		
ಸಂ: ಬೆಂ.ಜ.ಮಂ/ಮುಅ(ವಿನ್ಯಾಸ&ಗುಆ)/ಅಮುಅ/ತಾಂಸ/95/2026–27		ದಿನಾಂಕ: 05.05.2026
1	ಸಕಾನಿಅ(ಬಿಡಬ್ಲ್ಯೂ&ಪಿಎಸ್) ಉತ್ತರ ಉಪ ವಿಭಾಗದ ಅಡಿಯಲ್ಲಿ ಬರುವ ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ವಿವಿಧ ಸ್ಥಳಗಳಲ್ಲಿ 6.5 ಇಂಚ್ ವ್ಯಾಸದ ಹೊಸ ಬೋರ್‌ವೆಲ್‌ಗಳನ್ನು ಕೊರೆಯುವುದು ಮತ್ತು ಅಗತ್ಯ ಬಿಡಿಭಾಗಗಳೊಂದಿಗೆ ವಿದ್ಯುದ್ದೀಕರಿಸುವುದು.	ರೂ. 156.95 ಲಕ್ಷಗಳು / ರೂ. 2,36,000/-
ಮೇಲಿನ ಕಾಮಗಾರಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 18.05.2026ರ ಸಂಜೆ 4.00 ಗಂಟೆಯವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 19.05.2026 ರ ಸಂಜೆ 4.00 ಗಂಟೆಗೆ.		
ಸಂ: ಬೆಂ.ಜ.ಮಂ/ಮುಅ(ವಿನ್ಯಾಸ&ಗುಆ)/ಅಮುಅ(ವಿ)/ತಾಂಸ/97/2026–27		ದಿನಾಂಕ: 05.05.2026
2	ಬೆಂಗಳೂರಿನ ಮಲ್ಲೇಶ್ವರಂನಲ್ಲಿರುವ ಸಿಜೆಎಫ್ ಆವರಣದಲ್ಲಿ ಕೇಂದ್ರೀಕೃತ ನೀರು ಮತ್ತು ಮೀಟರ್ ಪರೀಕ್ಷಾ ಪ್ರಯೋಗಾಲಯದ ನಿರ್ಮಾಣ ಕಾಮಗಾರಿ.	ರೂ. 4,02,36,252/- / ರೂ. 6,03,600/-
3	ಟಿ.ಕೆ. ಹಳ್ಳಿಯಲ್ಲಿ ಕಲ್ಯಾಣ ಮಂಟಪ (ಅಂಬೇಡ್ಕರ್ ಸಮುದಾಯ ಭವನ) ನಿರ್ಮಾಣ ಕಾಮಗಾರಿ.	ರೂ. 3,96,03.281/- / ರೂ. 5,94,100/-
ಮೇಲಿನ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 25.05.2026ರ ಸಂಜೆ 4.00 ಗಂಟೆಯವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 26.05.2026 ರ ಸಂಜೆ 4.00 ಗಂಟೆಗೆ.		

ಸಹಿ/– ಮುಖ್ಯ ಅಭಿಯಂತರರು(ವಿನ್ಯಾಸ & ಗುಣ ಆಶ್ವಾಸನೆ)

ಟೆಂಡರ್ ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವುದಕ್ಕೆ ಸಂಬಂಧಿಸಿದ ವಿವರಗಳನ್ನು https://kppp.karnataka.gov.in ಗೆ ಭೇಟಿ ನೀಡುವ ಮೂಲಕ ಪಡೆದುಕೊಳ್ಳಬಹುದು. ಹೆಚ್ಚಿನ ವಿವರಗಳಿಗಾಗಿ ಮೇಲಿನ ಸಹಿದಾರರ ಕಛೇರಿಯನ್ನು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ವಾಸಾಸಂಇ/ವಾಪ್ರ/ಜಿಎ/570/2026–27

ಮಾರ್ಚ್ 28ರಿಂದ ಮೇ 31ರವರೆಗೆ

ಐಪಿಎಲ್ ಸಂಗ್ರಾಮ
2026ರ ಹಂಗಾಮ

2026ರ ಐಪಿಎಲ್ ಅಂಕಪಟ್ಟಿ

ತಂಡ	ಪಂದ್ಯ	ಜಯ	ಸೋಲು	ರದ್ದು	ಅಂಕ	ರನ್ ರೇಟ್
ಬೆಂಗಳೂರು	11	7	4	0	14	+1.103
ಹೈದರಾಬಾದ್	11	7	4	0	14	+0.737
ಗುಜರಾತ್	11	7	4	0	14	+0.228
ಪಂಜಾಬ್	10	6	3	1	13	+0.571
ಚೆನ್ನೈ	11	6	5	0	12	+0.185
ರಾಜಸ್ಥಾನ	11	6	5	0	12	+0.082
ಕೋಲ್ಕೊತಾ	10	4	5	1	09	-0.169
ಡೆಲ್ಲಿ	11	4	7	0	08	-1.154
ಮುಂಬಯಿ	11	3	8	0	06	-0.585
ಲಖನೌ	11	3	8	0	06	-0.907

494 ರನ್
ಹೆನ್ರಿಚ್ ಕ್ಲಾಸೆನ್
ಸನ್‌ರೈಸರ್ಸ್ ಹೈದರಾಬಾದ್

21 ವಿಕೆಟ್
ಭುವನೇಶ್ವರ್ ಕುಮಾರ್
ರಾಯಲ್ ಚಾಲೆಂಜರ್ಸ್ ಬೆಂಗಳೂರು

ಔಟ್ of ಸಿಲಬಸ್

ಚೆನ್ನೈ ಕಿಂಗ್ಸ್‌ಗೆ ವಿಜಯ್ ದಿವಸವೇ ?

ಭಾನುವಾರ ನಟ ವಿಜಯ್ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಬೆನ್ನಲ್ಲಿಯೇ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಅಭಿಮಾನಿ ವಲಯದಲ್ಲಿ ಅಚ್ಚರಿಯ ಭವಿಷ್ಯವಾಣಿಯೊಂದು ಓಡಾಡುತ್ತಿದೆ. ತಮಿಳುನಾಡಿನಲ್ಲಿ ಆಡಳಿತ ಪಕ್ಷಗಳು ಬದಲಾದಾಗಲೆಲ್ಲಾ ಸಿಎಸ್‌ಕೆ ತಂಡ ಐಪಿಎಲ್ ಟ್ರೋಫಿ ಗೆದ್ದಿದೆ. 2011ರಲ್ಲಿ ಜಯಲಲಿತಾ ಸರಕಾರ ಅಧಿಕಾರಕ್ಕೆ ಬಂದಿತು, 2021ರಲ್ಲಿ ಸ್ಟಾಲಿನ್ ಅಧಿಕಾರ ವಹಿಸಿಕೊಂಡರು. ಆವೆರಡೂ ವರ್ಷ ಸಿಎಸ್‌ಕೆ ತಂಡ ಐಪಿಎಲ್ ಟ್ರೋಫಿ ಗೆದ್ದಿದೆ. ಈಗ ರಾಜ್ಯದಲ್ಲಿ ಆಡಳಿತ ಪಕ್ಷ ಬದಲಾಗಿ ವಿಜಯ್ ಅಧಿಕಾರ ವಹಿಸಿಕೊಂಡಿರುವುದರಿಂದ ಈ ಬಾರಿಯೂ ಚೆನ್ನೈ ಗೆಲ್ಲಲಿದೆ ಎಂದು ಅಭಿಮಾನಿಗಳು ಚರ್ಚೆಯಲ್ಲಿ ನಿರತರಾಗಿದ್ದಾರೆ. ಸಿಎಸ್‌ಕೆ ಇದುವರೆಗೂ ಒಟ್ಟು 5 ಬಾರಿ ಐಪಿಎಲ್ ಟ್ರೋಫಿ ಗೆದ್ದಿದೆ.

ಟೈಟನ್ಸ್ ಖೆಡ್ಡಾಗೆ ಬಿದ್ದ ಸೂರ್ಯವಂಶಿ

ಗುಜರಾತ್ ಟೈಟನ್ಸ್ ಮತ್ತು ರಾಜಸ್ಥಾನ ರಾಯಲ್ಸ್ ನಡುವೆ ಶನಿವಾರ ಮೇ 9ರಂದು ನಡೆದ ಐಪಿಎಲ್ ಪಂದ್ಯದಲ್ಲಿ, ಟೈಟನ್ಸ್ ಕೋಚ್ ಆಶಿಶ್ ನೆಹ್ರಾ ಮತ್ತು ಮೊಹಮ್ಮದ್ ಸಿರಾಜ್ ಜಂಟಿಯಾಗಿ ಹೆಣೆದ ತಂತ್ರಕ್ಕೆ 15 ವರ್ಷದ ಬ್ಯಾಟಿಂಗ್ ಸ್ಟಾರ್ ವೈಭವ್ ಸೂರ್ಯವಂಶಿ ಔಟಾಗಿದ್ದು ಚರ್ಚೆಗೆ ಕಾರಣವಾಗಿದೆ. 230 ರನ್‌ಗಳ ಬೃಹತ್ ಗುರಿಯನ್ನು ಬೆನ್ನಟ್ಟಿದ ವೈಭವ್, ಸಿರಾಜ್ ಎಸೆದ ಮೊದಲ ಚೆಂಡನ್ನು ಸಿಕ್ಸರ್‌ಗೆ ಅಟ್ಟಿ, ಮೇಲಿಂದ ಮೇಲೆ ಫೋರ್‌ಗಳನ್ನೂ ಸಿಡಿಸಿ ಅಪಾಯಕಾರಿಯಾಗಿ ಪರಿಣಮಿಸುವ ಸೂಚನೆ ನೀಡಿದರು. ಇದನ್ನು ಗಮನಿಸಿದ ಕೋಚ್ ನೆಹ್ರಾ, ಡಗೌಟ್‌ನಿಂದಲೇ ಸಿರಾಜ್‌ಗೆ ಬೌನ್ಸರ್ ಎಸೆಯುವಂತೆ ಸನ್ನೆ ಮಾಡಿದರು. ನೆಹ್ರಾ ಸೂಚನೆಯಂತೆ ಸಿರಾಜ್ ಎಸೆದ 146.6 ಕಿ.ಮೀ ವೇಗದ ಆಕ್ರಮಣಕಾರಿ ಬೌನ್ಸರನ್ನು ಪುಲ್ ಮಾಡಲು ಹೋದ ವೈಭವ್ ಕ್ಯಾಚ್ ನೀಡಿ ಔಟಾದರು.

ಭುವನೇಶ್ವರ್, ಕೃಣಾಲ್ ಕೆಚ್ಚೆದೆಯ ಹೋರಾಟಕ್ಕೆ ಜಯ | ಪ್ಲೇಆಫ್ ಸ್ಪರ್ಧೆಯಿಂದ ಮುಂಬಯಿ ಇಂಡಿಯನ್ಸ್ ಔಟ್

ಹೊಸ ತವರಲ್ಲಿ ಆರ್‌ಸಿಬಿ ನವೋಲ್ಲಾಸ

■ ಮಂಜುನಾಥ ಕೆ. ಜಾಬಗೆರೆ ರಾಯಪುರ
manjunath.gowda@timesofindia.com

ಪಂದ್ಯದ ಕೊನೆಯ ಕ್ಷಣದಲ್ಲಿ ಹಲವು ನಾಟಕೀಯ ತಿರುವುಗಳಿಗೆ ಸಾಕ್ಷಿಯಾದ ಹೈವೋಲ್ಟೇಜ್ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ 2 ವಿಕೆಟ್‌ಗಳಿಂದ ಮುಂಬಯಿ ಇಂಡಿಯನ್ಸ್ ತಂಡದ ವಿರುದ್ಧ ರೋಚಕ ಗೆಲುವು ಸಾಧಿಸಿತು.

ಕೊನೆಯ ಎಸೆತದಲ್ಲಿ ರಸಿಖ್ ಸಲಾಮ್‌ದಾರ್ ಎರಡು ರನ್ ಕಲೆಹಾಕುವ ಮೂಲಕ ಆರ್‌ಸಿಬಿಗೆ ಗೆಲುವು ತಂದುಕೊಟ್ಟರು. ಇದಕ್ಕೂ ಮುನ್ನ ಕೃಣಾಲ್ ಪಾಂಡ್ಯ (73; 46 ಎಸೆತ, 4 ಫೋರ್, 6 ಸಿಕ್ಸರ್) ತಂಡದ ದಿಟ್ಟ ಹೋರಾಟಕ್ಕೆ ಬಲ ತುಂಬಿದರು. ಈ ಫಲಿತಾಂಶದೊಂದಿಗೆ ಸತತ ಎರಡು ಸೋಲುಗಳಿಂದ ಹೊರಬಂದ ಬೆಂಗಳೂರು ತಂಡ ತನ್ನ 2ನೇ ತವರಲ್ಲಿ ನವೋಲ್ಲಾಸ ಪಡೆಯುವಲ್ಲಿ ಯಶಸ್ವಿಯಾಯಿತು.

ಒಟ್ಟು 14 ಅಂಕಗಳನ್ನು ಕಲೆಹಾಕಿದ ಆರ್‌ಸಿಬಿ ಪ್ಲೇಆಫ್ ಪ್ರವೇಶವನ್ನು ಇನ್ನಷ್ಟು ಸನಿಹ ಮಾಡಿಕೊಂಡರೆ, ಮುಂಬಯಿ ಇಂಡಿಯನ್ಸ್, 8ನೇ ಸೋಲಿನೊಂದಿಗೆ ಪ್ರಸಕ್ತ ಐಪಿಎಲ್‌ನ ಪ್ಲೇಆಫ್ ಸ್ಪರ್ಧೆಯಿಂದ ಅಧಿಕೃತವಾಗಿ ನಿರ್ಗಮಿಸಿತು.

5.1 ಓವರ್‌ಗಳಲ್ಲಿ ಕೇವಲ 39ಕ್ಕೆ ವಿರಾಟ್ ಕೊಹ್ಲಿ ಸೇರಿದಂತೆ ಅಗ್ರ ಕ್ರಮಾಂಕದ 4 ವಿಕೆಟ್ ಕಳೆದುಕೊಂಡ ಆರ್‌ಸಿಬಿಗೆ ಸಣ್ಣ ಸವಾಲು ಬೆಟ್ಟವಾಗಿ ಮಾರ್ಪಟ್ಟಿತು. ಇದರ ಮಧ್ಯೆ ಜಾಕೋಬ್ ಬೆಥಲ್ ಮತ್ತು ಕೃಣಾಲ್ ಪಾಂಡ್ಯ ಜವಾಬ್ದಾರಿಯುತ ಹೋರಾಟ ನಡೆಸಿ ತಂಡದ ಹೋರಾಟಕ್ಕೆ ಆಸರೆಯಾದರು. ಆದರೆ ಬೆಥಲ್ 27 ರನ್‌ಗಳಿಗೆ ಔಟಾಗಿದ್ದು, ತವರು ತಂಡದ ಮೇಲೆ ದೊಡ್ಡ ಒತ್ತಡ ಹೆಚ್ಚಿತು. ಕಾರ್ಬಿನ್ ಬಾಷ್ (26ಕ್ಕೆ 4) ಎಸೆದ 13ನೇ ಓವರ್‌ನಲ್ಲಿ ಜಿತೇಶ್ ಮತ್ತು ಕೃಣಾಲ್ ಜೋಡಿ ಒಂದೇ ಒಂದು ರನ್ ಗಳಿಸಲು ವಿಫಲಗೊಂಡಿದ್ದು, ತಂಡದ ಮೇಲಿನ ಒತ್ತಡವನ್ನು ಬಿಂಬಿಸಿತು.

ಜಿತೇಶ್ ಶರ್ಮ ಅವರೊಂದಿಗೆ ಇನಿಂಗ್ಸ್ ಮುಂದುವರಿಸಿದ ಕೃಣಾಲ್, ಬುಮ್ರಾ ಎಸೆದ 15ನೇ ಓವರ್‌ನ 5ನೇ ಎಸೆತದಲ್ಲಿ ಅವಳಿ ರನ್ ಗಳಿಸಿ 2025ರ ಬಳಿಕ ಮೊದಲ ಅರ್ಧ ಶತಕ ಗಳಿಸಿದರು. ಕೊನೆಯದಾಗಿ ಅವರು ಡೆಲ್ಲಿ ವಿರುದ್ಧ ಅಜೇಯ 73 ರನ್ ಗಳಿಸಿದ್ದರು. ಕಾಲಿನ ನೋವಿನ ನಡುವೆಯೂ ತಂಡದ ದಿಟ್ಟ ಬ್ಯಾಟಿಂಗ್ ಪ್ರದರ್ಶಿಸಿದ ಕೃಣಾಲ್, 18ನೇ ಓವರ್‌ನಲ್ಲಿ ನಮನ್ ಧೀರ್ ಮತ್ತು ತಿಲಕ್ ವರ್ಮ ಬೌಂಡರಿ ಗೆರೆಯ ಬಳಿ ಮಾಡಿದ ಎಡವಟ್ಟಿನಿಂದ ಜೀವದಾನ ಪಡೆದರು. ಸ್ನಾಯು ಸೆಳೆತಕ್ಕೆ ಪದೇ ಪದೇ ತುತ್ತಾದ ಕೃಣಾಲ್, ಎರಡು ಸಿಕ್ಸರ್ ಸಿಡಿಸಿ ತಂಡದ ಗೆಲುವಿನ ಅಂತರವನ್ನು ತಗ್ಗಿಸಿದರು. ಆದರೆ ಆದೇ ಓವರ್‌ನಲ್ಲಿ ತಿಲಕ್‌ಗೆ ಕ್ಯಾಚಿತ್ತು ಡಗ್ ಔಟ್ ಸೇರಿದರು.

ಹತ್ತು ವರ್ಷಗಳ ನಂತರ ಮೊದಲ ಬಾರಿ ಐಪಿಎಲ್ ಪಂದ್ಯಕ್ಕೆ ಸಾಕ್ಷಿಯಾದ ಶಹೀದ್ ವೀರ್ ನಾರಾಯಣ್ ಸಿಂಗ್ ಕ್ರೀಡಾಂಗಣ ಹೈವೋಲ್ಟೇಜ್ ಪಂದ್ಯಕ್ಕೆ ಸಾಕ್ಷಿಯಾಯಿತು. 65 ಸಾವಿರ ಆಸನಗಳ ಸಾಮರ್ಥ್ಯವಿರುವ ಮೈದಾನದಲ್ಲಿ ಬಹುತೇಕ ಕಿಕ್ಕಿರಿದು ತುಂಬಿದ್ದ ಉಭಯ ತಂಡಗಳ ಅಭಿಮಾನಿಗಳು ಚುಟುಕು ಕ್ರಿಕೆಟ್‌ನ ರಸದೌತಣವನ್ನು ಅನುಭವಿಸಿದರು.

ಇದಕ್ಕೂ ಮುನ್ನ ಟಾಸ್ ಗೆದ್ದ ಆರ್‌ಸಿಬಿ ತಂಡದ ನಾಯಕ ರಜತ್ ಪಾಟೀದಾರ್ ಬೌಲಿಂಗ್ ಆಯ್ಕೆ ಮಾಡಿಕೊಂಡರು. ಮೊದಲ 3 ಓವರ್‌ಗಳಲ್ಲಿಯೇ ಅಗ್ರಕ್ರಮಾಂಕದ ಮೂವರನ್ನು ಔಟ್ ಮಾಡಿದ ಭುವನೇಶ್ವರ್ ನಾಯಕನ ನಿಲುವನ್ನು ಬಲವಾಗಿ ಸಮರ್ಥಿಸಿಕೊಂಡರು.

3 ಓವರ್‌ಗಳಲ್ಲಿ 28ಕ್ಕೆ 3 ವಿಕೆಟ್ ಕಳೆದುಕೊಂಡ ಇಂಡಿಯನ್ಸ್, ಸಾಧಾರಣ ಮೊತ್ತಕ್ಕೆ ಕುಸಿಯುವ ಭೀತಿ ಎದುರಿಸಿತು. ಆದರೆ ನಮನ್ ಧೀರ್ ಮತ್ತು ತಿಲಕ್ ವರ್ಮ ತಂಡಕ್ಕೆ ಆಸರೆಯಾದರು. 32 ಎಸೆತ ಎದುರಿಸಿದ ಧೀರ್, 5 ಫೋರ್, 2 ಸಿಕ್ಸರ್ ಒಳಗೊಂಡ 47 ರನ್ ಗಳಿಸಿ ರಸಿಖ್ ಸಲಾಮ್‌ಗೆ ಕ್ಲೀನ್ ಬೌಲ್ಡ್ ಆದರು. ಆದಾಗ್ಯೂ ಅವರು 57 ಎಸೆತಗಳಲ್ಲಿ ಮಹತ್ವದ 82 ರನ್‌ಗಳ ಪಾಲುದಾರಿಕೆ ಆಟಕ್ಕೆ ನೆರವಾದರು.

ಪವರ್ ಪ್ಲೇ ಅವಧಿಯಲ್ಲಿ 53ಕ್ಕೆ 3 ವಿಕೆಟ್ ಕಳೆದುಕೊಂಡು ಸಂಕಷ್ಟ ಎದುರಿಸಿದ ಮುಂಬಯಿ ಇಂಡಿಯನ್ಸ್, ತಿಲಕ್ ವರ್ಮ ಮತ್ತು ನಮನ್ ಧೀರ್ ಅವರ ಸಮಯೋಚಿತ ಬ್ಯಾಟಿಂಗ್‌ನಿಂದ ಚೇತರಿಸಿಕೊಂಡಿತು. ಹತ್ತು ಓವರ್‌ಗಳ ಮುಕ್ತಾಯಕ್ಕೆ ತಂಡದ ಮೊತ್ತವನ್ನು 82 ರನ್‌ಗಳಿಗೆ ವಿಸ್ತರಿಸಿದ ಈ ಜೋಡಿ, 12ನೇ ಓವರ್‌ನಲ್ಲಿ ಮೂರಂಕಿ ಮೊತ್ತಕ್ಕೆ ಹಿಗ್ಗಿಸಿದರು.

ಪವರ್ ಪ್ಲೇ ಅವಧಿಯಲ್ಲಿ 53ಕ್ಕೆ 3 ವಿಕೆಟ್ ಕಬಳಿಸಿದ ಆರ್‌ಸಿಬಿ ಪ್ರಸಕ್ತ ಐಪಿಎಲ್‌ನಲ್ಲಿ ಮೊದಲ ಆರು ಓವರ್‌ಗಳಲ್ಲಿ 22 ವಿಕೆಟ್ ಪಡೆಯುವ ಮೂಲಕ ಗುಜರಾತ್ ಟೈಟನ್ಸ್ ತಂಡದ ದಾಖಲೆಯನ್ನು ಹಿಂದಿಕ್ಕಿತು. ಆರ್‌ಸಿಬಿ 22 ವಿಕೆಟ್ ಪಡೆದರೆ, ಗುಜರಾತ್ 21 ವಿಕೆಟ್ ಪಡೆದಿದೆ.

9 ರನ್ ಗಳಿಸಿದ್ದ ವೇಳೆ ಜೀವದಾನ ಪಡೆದ ತಿಲಕ್ ವರ್ಮ, ಸಂಕಷ್ಟದಲ್ಲಿದ್ದ ಮುಂಬಯಿ ಇಂಡಿಯನ್ಸ್ ತಂಡಕ್ಕೆ ಆಸರೆಯಾದರು.

ಪವರ್ ಪ್ಲೇನಲ್ಲಿ ಭುವಿ ಮಾರಕ ದಾಳಿ: ಸತತ ಎರಡು ಸೋಲುಗಳಿಂದ ಹೊರಬರುವ ನಿಟ್ಟಿನಲ್ಲಿ ಮುಂಬಯಿ ವಿರುದ್ಧ ಕಣಕ್ಕಿಳಿದ ಆರ್‌ಸಿಬಿ, ಭುವನೇಶ್ವರ್ ಕುಮಾರ್ ಅವರ ಮಾರಕ ದಾಳಿಯ ನೆರವಿನಿಂದ ಮೇಲುಗೈ ಸಾಧಿಸಿತು. ಮೊದಲ ಓವರ್‌ನಲ್ಲೇ ರಯಾನ್ ರಿಕೆಲ್ಟನ್ ಅವರ ವಿಕೆಟ್ ಪಡೆದ ಬಲಗೈ ವೇಗಿ ಭುವನೇಶ್ವರ್, ನಂತರ ರೋಹಿತ್ ಶರ್ಮ ಮತ್ತು ಸೂರ್ಯಕುಮಾರ್ ಯಾದವ್ ಅವರನ್ನು ಸಹ ಔಟ್ ಮಾಡಿದರು. ಇದರೊಂದಿಗೆ ಹಾಲಿ ಆವೃತ್ತಿಯ ಪವರ್ ಪ್ಲೇ ಅವಧಿಯಲ್ಲಿ 12 ವಿಕೆಟ್ ಪಡೆದ ಭುವನೇಶ್ವರ್, ಪವರ್ ಪ್ಲೇನಲ್ಲಿ ಅತ್ಯಧಿಕ ವಿಕೆಟ್ ಪಡೆದ ಎರಡನೇ ಬೌಲರ್ ಎಂಬ ಹಿರಿಮೆಯನ್ನು ತಮ್ಮದಾಗಿಸಿಕೊಂಡರು. 13 ವಿಕೆಟ್ ಪಡೆದಿರುವ ಕಗಿಸೊ ರಬಾಡ ಮೊದಲ ಸ್ಥಾನದ್ದಾರೆ.

ಕೃಣಾಲ್ ಪಾಂಡ್ಯ

ಟರ್ನಿಂಗ್ ಪಾಯಿಂಟ್

ಕೊನೆಯ ಓವರ್‌ನಲ್ಲಿ ಆರ್‌ಸಿಬಿ ಗೆಲುವಿಗೆ 15 ರನ್ ಅಗತ್ಯವಿತ್ತು. ಸೂಕ್ತ ಬೌಲರ್ ಕೊರತೆ ಎದುರಿಸಿದ ಮುಂಬಯಿ, ರಾಜ್ ಬವಗೆ ಚೆಂಡು ನೀಡಿತು. 8 ವಿಕೆಟ್ ಕಳೆದುಕೊಂಡಿದ್ದ ಆರ್‌ಸಿಬಿ ರನ್ ಗಳಿಸಲು ಹೆಣಗಾಡುತ್ತಿತ್ತು. ನಿರ್ಣಾಯಕ ಓವರ್‌ನಲ್ಲಿ ಶಿಸ್ತಿನ ದಾಳಿ ನಡೆಸಬೇಕಿದ್ದ ರಾಜ್ ಬವ, ಒಂದು ನೋಬಾಲ್ ಮತ್ತು 3 ವೈಡ್ ನೀಡಿದ್ದು, ಆರ್‌ಸಿಬಿಗೆ ವರವಾದರೆ, ಮುಂಬಯಿಗೆ ಶಾಪವಾಯಿತು.

ಧೋನಿ ದಾಖಲೆ ಸರಿಗಟ್ಟಿದ ಕೊಹ್ಲಿ, ರೋಹಿತ್

ದಾಖಲೆಗಳ ವೀರ ವಿರಾಟ್ ಕೊಹ್ಲಿ ಐಪಿಎಲ್ ಇತಿಹಾಸದಲ್ಲಿ ಅತ್ಯಧಿಕ ಪಂದ್ಯಗಳನ್ನು ಆಡಿದ್ದ ಮಹೇಂದ್ರ ಸಿಂಗ್ ಧೋನಿ ಅವರ ದಾಖಲೆಯನ್ನು ಸರಿಗಟ್ಟಿದರು. ಶಹೀದ್ ವೀರ್ ನಾರಾಯಣ್ ಸಿಂಗ್ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ಭಾನುವಾರ ಮುಂಬಯಿ ಇಂಡಿಯನ್ಸ್ ವಿರುದ್ಧ ಕಣಕ್ಕಿಳಿಯುವ ಮೂಲಕ ಕೊಹ್ಲಿ ಈ ದಾಖಲೆ ಬರೆದರು. ವಿಶೇಷ ಅಂದರೆ ಮುಂಬಯಿ ತಂಡದ ರೋಹಿತ್ ಶರ್ಮ ಸಹ 278 ಪಂದ್ಯಗಳನ್ನಾಡಿದ ದಾಖಲೆಯನ್ನು ಇದೇ ಪಂದ್ಯದಲ್ಲಿ ಬರೆದರು. ಇದರೊಂದಿಗೆ ಟೀಮ್ ಇಂಡಿಯಾದ ಮಾಜಿ ನಾಯಕರಾದ ಧೋನಿ, ರೋಹಿತ್ ಮತ್ತು ಕೊಹ್ಲಿ ಐಪಿಎಲ್ ನಲ್ಲಿ ಅತ್ಯಧಿಕ ಪಂದ್ಯಗಳನ್ನಾಡಿದ ಜಂಟಿ ದಾಖಲೆಯನ್ನು ಹೊಂದಿದ್ದಾರೆ. ಧೋನಿ ಮತ್ತು ರೋಹಿತ್ ಕ್ರಮವಾಗಿ ಚೆನ್ನೈ ಮತ್ತು ಮುಂಬಯಿ ಪರ ತಲಾ 5 ಟ್ರೋಫಿಗಳನ್ನು ಗೆದ್ದರೆ, ಕೊಹ್ಲಿ ಆರ್‌ಸಿಬಿ ಪರ ಒಂದು ಟ್ರೋಫಿ ಗೆದ್ದುಕೊಟ್ಟಿದ್ದಾರೆ.

ಸ್ಕೋರ್ ವಿವರ

ಮುಂಬಯಿ ಇಂಡಿಯನ್ಸ್
20 ಓವರ್‌ಗಳಲ್ಲಿ 7 ವಿಕೆಟ್‌ಗೆ 166

ರಯಾನ್ ರಿಕೆಲ್ಟನ್ ಸಿ ರಜತ್ ಬಿ ಭುವನೇಶ್ವರ್	02
ರೋಹಿತ್ ಶರ್ಮ ಸಿ ಜಿತೇಶ್ ಬಿ ಭುವನೇಶ್ವರ್	22
ನಮನ್ ಧೀರ್ ಬಿ ರಸಿಖ್ ಸಲಾಮ್	47
ಸೂರ್ಯಕುಮಾರ್ ಸಿ ವಿರಾಟ್ ಬಿ ಭುವನೇಶ್ವರ್	00
ತಿಲಕ್ ವರ್ಮ ಬಿ ಭುವನೇಶ್ವರ್	57
ವಿಲ್ ಜಾಕ್ಸ್ ಸಿ ಜಾಕೋಬ್ ಬಿ ರೊಮಾರಿಯೊ	10
ರಾಜ್ ಬವ ಸಿ ರಜತ್ ಬಿ ಹೇಜಲ್‌ವುಡ್	16
ಕಾರ್ಬಿನ್ ಬಾಷ್ ಔಟಾಗದೇ	05
ದೀಪಕ್ ಚಾಹರ್ ಔಟಾಗದೇ	01

ಇತರ: (ಲೆಗ್ ಬೈ 3, ವೈಡ್ 3) 06
ವಿಕೆಟ್ ಪತನ: 1-4, 2, 28, 3-28, 4-110, 5-132, 6-155, 7-161.

ಬೌಲಿಂಗ್ ವಿವರ

ಭುವನೇಶ್ವರ್ ಕುಮಾರ್	4	0	23	4
ಜೋಶ್ ಹೇಜಲ್‌ವುಡ್	4	0	33	1
ರಸಿಖ್ ಸಲಾಮ್‌ದಾರ್	4	0	42	1
ರೊಮಾರಿಯೊ ಶೆಫರ್ಡ್	3	0	18	1
ಕೃಣಾಲ್ ಪಾಂಡ್ಯ	3	0	26	0
ಸುಯಾಶ್ ಶರ್ಮ 2	0	21	0	0

ರಾಯಲ್ ಚಾಲೆಂಜರ್ಸ್ ಬೆಂಗಳೂರು:
20 ಓವರ್‌ಗಳಲ್ಲಿ 8 ವಿಕೆಟ್‌ಗೆ 167

ಜಾಕೋಬ್ ಬೆಥಲ್ ಸಿ ತಿಲಕ್ ಬಿ	27
ವಿರಾಟ್ ಕೊಹ್ಲಿ ಸಿ ಬವ ಬಿ ದೀಪಕ್	00
ದೇವದತ್ ಪಡಿಕ್ಕಲ್ ಸಿ ರಿಕೆಲ್ಟನ್ ಬಿ ದೀಪಕ್	12
ರಜತ್ ಪಾಟೀದಾರ್ ಸಿ ರಿಕೆಲ್ಟನ್ ಬಿ ಬಾಷ್	08
ಕೃಣಾಲ್ ಪಾಂಡ್ಯ ಸಿ ತಿಲಕ್ ಬಿ ಘಜನ್ಫರ್	73
ಜಿತೇಶ್ ಶರ್ಮ ಸಿ ನಮನ್ ಬಿ ಬಾಷ್	18
ಟಿಮ್ ಡೇವಿಡ್ ಸಿ ರಿಕೆಲ್ಟನ್ ಬಿ ಬಾಷ್	00
ಶೆಫರ್ಡ್ ಸಿ ತಿಲಕ್ ವರ್ಮ ಬಿ ಬವ	03
ರಸಿಖ್ ಸಲಾಮ್‌ದಾರ್ ಔಟಾಗದೇ	07
ಭುವನೇಶ್ವರ್‌ಕುಮಾರ್ ಔಟಾಗದೇ	07

ಇತರ: (ಲೆಗ್ ಬೈ 3, ವೈಡ್ 11, ನೋಬಾಲ್ 1) 15
ವಿಕೆಟ್ ಪತನ: 1-10, 2-24, 3-39, 4-94, 5-131, 6-131, 7-149, 8-157.

ಬೌಲಿಂಗ್ ವಿವರ

ದೀಪಕ್ ಚಾಹರ್	4	0	33	2
ಜಸ್‌ಪ್ರಿತ್ ಬುಮ್ರಾ	4	0	20	0
ಕಾರ್ಬಿನ್ ಬಾಷ್	4	1	26	4
ವಿಲ್ ಜಾಕ್ಸ್	2	0	13	0
ಘಜನ್ಫರ್	3	0	33	1
ರಾಜ್ ಬವ	3	0	39	1

ಭಾರತ ತಂಡಕ್ಕೆ ಚಿನ್ನ

ಆರ್ಚರಿ ವಿಶ್ವಕಪ್

ಅಂಕಿತಾ ಭಕತ್, ದೀಪಿಕಾಕುಮಾರಿ ಮತ್ತು ಕುಂಕುಮ್ ಮೊಹೊದ್.

ಶಾಂಘೈ: ಆರ್ಚರಿ ವಿಶ್ವಕಪ್‌ನ ಸ್ಟೇಜ್ 2 ಸ್ಪರ್ಧೆಯಲ್ಲಿ ದೀಪಿಕಾಕುಮಾರಿ ನೇತೃತ್ವದ ಭಾರತದ ಮಹಿಳಾ ರಿಕರ್ವ್ ತಂಡವು ಚೀನಾ ವಿರುದ್ಧ ರೋಚಕ ಜಯ ಸಾಧಿಸಿ ಚಿನ್ನದ ಪದಕ ಗೆದ್ದಿದೆ. ದೀಪಿಕಾ ಕುಮಾರಿ, ಅಂಕಿತಾ ಭಕತ್ ಮತ್ತು ಕುಂಕುಮ್ ಮೊಹೊದ್ ಅವರನ್ನೊಳಗೊಂಡ ತಂಡವು ಲ್ಲಿ 5-4 ಅಂತರದಿಂದ ಆತಿಥೇಯ ಚೀನಾವನ್ನು ಸೋಲಿಸಿತು.

ಒಂದು ಹಂತದಲ್ಲಿ 2-4ರಿಂದ ಹಿನ್ನಡೆಯಲ್ಲಿದ್ದ ಭಾರತ, ದೀಪಿಕಾ ಅವರ ಅನುಭವ ಮತ್ತು ಸಮಯೋಚಿತ ಪ್ರದರ್ಶನದಿಂದ ಪುಟಿದೆದ್ದಿತು. ಸೆಮಿಫೈನಲ್‌ನಲ್ಲಿ 10 ಬಾರಿ ಒಲಿಂಪಿಕ್ ಚಾಂಪಿಯನ್ ಆಗಿರುವ ದಕ್ಷಿಣ ಕೊರಿಯಾ ತಂಡವನ್ನು ಸೋಲಿಸಿದ್ದು ಭಾರತ ತಂಡದ ಆತ್ಮವಿಶ್ವಾಸ ಹೆಚ್ಚಿಸಿತ್ತು. 2021ರ ನಂತರ ಭಾರತದ ಮಹಿಳಾ ರಿಕರ್ವ್ ತಂಡಕ್ಕೆ ಲಭಿಸಿದ ಮೊದಲ ವಿಶ್ವಕಪ್ ಚಿನ್ನ ಇದಾಗಿದೆ. ವೈಯಕ್ತಿಕ ವಿಭಾಗದಲ್ಲಿ ಸಿಮ್ರನ್‌ಜೀತ್ ಕೌರ್ ಪದಕದ ಹತ್ತಿರ ಬಂದು ನಾಲ್ಕನೇ ಸ್ಥಾನಕ್ಕೆ ತೃಪ್ತಿಪಟ್ಟರು. ಒಟ್ಟಾರೆಯಾಗಿ ಭಾರತ ಈ ಕೂಟದಲ್ಲಿ ಸಾಹಿಲ್ ಜಾಧವ್ ಅವರ ಕಂಚಿನ ಪದಕ ಸೇರಿದಂತೆ ಒಟ್ಟು ಎರಡು ಪದಕಗಳೊಂದಿಗೆ ಅಭಿಯಾನ ಮುಕ್ತಾಯಗೊಳಿಸಿದೆ.

ಕಂಚಿನ ಸಾಧನೆ: ನೀರೂ ಧಂಡಾ ಮತ್ತು ವಿವಾನ್ ಕಪೂರ್ ಜೋಡಿಯು ಟ್ರ್ಯಾಪ್ ಮಿಶ್ರ ತಂಡ ವಿಭಾಗದಲ್ಲಿ ಕಂಚಿನ ಪದಕ ಗೆದ್ದು ಸಾಧನೆ ಮಾಡಿದೆ. ಈ ವಿಭಾಗವು ಒಲಿಂಪಿಕ್ಸ್‌ಗೆ ಸೇರ್ಪಡೆಗೊಂಡ ಬಳಿಕ ಭಾರತಕ್ಕೆ ಒಲಿದ ಎರಡನೇ ಪದಕ ಇದಾಗಿದೆ.

ಅರ್ಹತಾ ಸುತ್ತಿನಲ್ಲಿ ಅದ್ಭುತ ಪ್ರದರ್ಶನ ನೀಡಿದ ಭಾರತೀಯ ಜೋಡಿ ಒಟ್ಟು 143 ಅಂಕಗಳನ್ನು ಗಳಿಸಿ ಫೈನಲ್‌ಗೆ ಲಗ್ಗೆಯಿಟ್ಟಿತ್ತು. ಅವರಿಗೆ ಇಟಲಿಯ ಬಲಿಷ್ಠ ಜೋಡಿ ಸಿಲ್ವಾನಾ- ಮೌರೊ ತೀವ್ರ ಪೈಪೋಟಿ ನೀಡಿತಾದರೂ, ಅರ್ಹತಾ ಸುತ್ತಿನ ಶ್ರೇಯಾಂಕದ ಆಧಾರದ ಮೇಲೆ ಭಾರತ ಕಂಚಿನ ಪದಕಕ್ಕೆ ತೃಪ್ತಿಪಡಬೇಕಾಯಿತು. ಇದೇ ಸ್ಪರ್ಧೆಯಲ್ಲಿ ಚೈನೀಸ್ ತೈಪೆಯ ಕುನ್ ಪಿಯಾಂಗ್ ಮತ್ತು ವಾನ್ ಯು ಲಿಯು ಜೋಡಿಯು 36 ಅಂಕಗಳೊಂದಿಗೆ ವಿಶ್ವದಾಖಲೆ ಬರೆದು ಚಿನ್ನದ ಪದಕ ಮುಡಿಗೇರಿಸಿಕೊಂಡಿತು.

ಪಾಕ್- ಬಾಂಗ್ಲಾ ಮಧ್ಯೆ ಕ್ರಿಕೆಟ್ ಸಹಕಾರ ಒಪ್ಪಂದ

ಲಾಹೋರ್: ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ಮತ್ತು ಬಾಂಗ್ಲಾದೇಶ ಕ್ರಿಕೆಟ್ ಮಂಡಳಿ (ಬಿಸಿಬಿ) ಏಷ್ಯನ್ ಮತ್ತು ಅಂತಾರಾಷ್ಟ್ರೀಯ ಕ್ರಿಕೆಟ್ ವೇದಿಕೆಗಳಲ್ಲಿ ಪರಸ್ಪರ ಬೆಂಬಲಿಸುವ ಒಪ್ಪಂದ ಮಾಡಿಕೊಂಡಿವೆ. ಪಿಸಿಬಿ ಅಧ್ಯಕ್ಷ ಮೊಹ್ಸಿನ್ ನಖ್ವಿ ಅವರು ಢಾಕಾಗೆ ಭೇಟಿ ನೀಡಿದ ಸಂದರ್ಭದಲ್ಲಿ ಬಾಂಗ್ಲಾದೇಶದ ಕ್ರಿಕೆಟ್ ಮುಖ್ಯಸ್ಥ ತಮೀಮ್ ಇಕ್ಬಾಲ್ ಅವರೊಂದಿಗೆ ಈ ಮಹತ್ವದ ಚರ್ಚೆ ನಡೆಸಿದ್ದಾರೆ.

ಭಾರತ, ಆಸ್ಟ್ರೇಲಿಯಾ, ಇಂಗ್ಲೆಂಡ್ ಹೊರತುಪಡಿಸಿ ಉಳಿದ ತಂಡಗಳ ಪ್ರಬಲ ಗುಂಪು ರಚನೆಗೆ ಪಣ

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನಲ್ಲಿ (ಡಬ್ಲ್ಯುಟಿಸಿ) 'ಎರಡು ಹಂತದ ವ್ಯವಸ್ಥೆ' (ಟೂ ಟಯರ್ ಸಿಸ್ಟಮ್) ಜಾರಿಗೆ ತರುವ ಯಾವುದೇ ಕ್ರಮವನ್ನು ವಿರೋಧಿಸಲು ಮತ್ತು 2028- 31ರ ಭವಿಷ್ಯದ ಕ್ರಿಕೆಟ್ ಪ್ರವಾಸಗಳ ಕಾರ್ಯಕ್ರಮದಲ್ಲಿ ಹೆಚ್ಚಿನ ಸಮತೋಲನವನ್ನು ಸಾಧಿಸಲು ಉಭಯ ಮಂಡಳಿಗಳು ಒಪ್ಪಿಕೊಂಡಿವೆ. ಪ್ರಸ್ತುತ ಭಾರತ, ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್ ತಂಡಗಳು ಹೆಚ್ಚಿನ ಪಂದ್ಯಗಳನ್ನು ಪಡೆಯುತ್ತಿದ್ದು, ಪಾಕಿಸ್ತಾನ, ಬಾಂಗ್ಲಾದೇಶ, ಶ್ರೀಲಂಕಾ, ವೆಸ್ಟ್‌ಇಂಡೀಸ್ ದೇಶಗಳಿಗೆ ಸೂಕ್ತ ಪ್ರಾಮುಖ್ಯತೆ ಸಿಗುತ್ತಿಲ್ಲ ಎಂಬುದು ಪಿಸಿಬಿ ಮತ್ತು ಬಿಸಿಬಿ ಎರಡರ ಆರೋಪವಾಗಿದೆ.

ಐಸಿಸಿ ಕಾರ್ಯಕ್ರಮಗಳ ಆದಾಯ ಹಂಚಿಕೆಯಲ್ಲಿ ಹೆಚ್ಚಿನ ಪಾಲನ್ನು ಪಡೆಯಲು ಮತ್ತು ಇತರ ಕ್ರಿಕೆಟ್ ಮಂಡಳಿಗಳನ್ನು ಒಗ್ಗೂಡಿಸಿ ಪ್ರಬಲ ಗುಂಪು ರಚಿಸಲು ಪಾಕ್ ಮತ್ತು ಬಾಂಗ್ಲಾ ಕ್ರಿಕೆಟ್ ಮಂಡಳಿಯ ಇಬ್ಬರೂ ನಾಯಕರು ಒಪ್ಪಿದ್ದಾರೆ ಎನ್ನಲಾಗಿದೆ. ಬಾಂಗ್ಲಾದೇಶದ ಹೊಸ ಸರಕಾರವು ಭಾರತದ ಕಡೆಗೆ ಒಲವು ತೋರುತ್ತಿದೆ ಎಂಬ ಊಹಾಪೋಹಗಳನ್ನು ಈ ಭೇಟಿ ತಳ್ಳಿಹಾಕಿದೆ.

ಪ್ಲೇ-ಆಫ್‌ನಿಂದ ಲಖನೌ ಸೂಪರ್ ಜಯಂಟ್ಸ್ ಔಟ್

ಚೆನ್ನೈ ಸೂಪರ್ ಕಿಂಗ್ಸ್‌ಗೆ ಜಯ

ಉರ್ವಿಲ್ ಪಟೇಲ್

ಚೆನ್ನೈ: ಉರ್ವಿಲ್ ಪಟೇಲ್ ಅವರ ಸಿಡಿಲಬ್ಬರದ ಬ್ಯಾಟಿಂಗ್ ನೆರವಿನಿಂದ ಚೆನ್ನೈ ಸೂಪರ್ ಕಿಂಗ್ಸ್, ಲಖನೌ ಸೂಪರ್ ಜಯಂಟ್ಸ್ ವಿರುದ್ಧ 5 ವಿಕೆಟ್‌ಗಳ ಜಯ ಸಾಧಿಸಿದೆ. ಈ ಗೆಲುವಿನೊಂದಿಗೆ ಸಿಎಸ್‌ಕೆ ತನ್ನ ಪ್ಲೇ-ಆಫ್ ಆಸೆಯನ್ನು ಜೀವಂತವಾಗಿರಿಸಿಕೊಂಡರೆ, ಸೋತ ಲಖನೌ ಪ್ಲೇ-ಆಫ್ ಸ್ಪರ್ಧೆಯಿಂದ ಹೊರಬಿದ್ದಿದೆ.

ಮೊದಲು ಬ್ಯಾಟಿಂಗ್ ಮಾಡಿದ ಲಖನೌ, ಜೋಶ್ ಇಂಗ್ಲಿಸ್ ಅವರ ಬಿರುಸಿನ 85 ರನ್‌ಗಳ ನೆರವಿನಿಂದ 8 ವಿಕೆಟ್‌ಗೆ 203 ರನ್ ಗಳಿಸಿತು. ಸಿಎಸ್‌ಕೆ ಪರ ಜೇಮಿ ಓವರ್ಟನ್ 3 ವಿಕೆಟ್ ಪಡೆದು ಮಿಂಚಿದರು. 204 ರನ್ ಗುರಿ ಬೆನ್ನಟ್ಟಿದ ಸಿಎಸ್‌ಕೆ ಪರ ಉರ್ವಿಲ್ ಪಟೇಲ್ ಕೇವಲ 13 ಎಸೆತಗಳಲ್ಲಿ ಅರ್ಧಶತಕ ಸಿಡಿಸಿ ಯಶಸ್ವಿ ಜೈಸ್ವಾಲ್ ಅವರ ಹೆಸರಲ್ಲಿದ್ದ ದಾಖಲೆಯನ್ನು ಸರಿಗಟ್ಟಿದರು. ಒಟ್ಟು 23 ಎಸೆತಗಳಲ್ಲಿ 65 ರನ್ (8 ಸಿಕ್ಸರ್, 2 ಫೋರ್) ಚಚ್ಚಿದ ಅವರು ತಮ್ಮ ಈ ಸಾಧನೆಯನ್ನು ದಿವಂಗತ ತಂದೆಗೆ ಅರ್ಪಿಸಿದರು.

ಅಂತಿಮವಾಗಿ ಶಿವಂ ದುಬೆ ಮತ್ತು ಪ್ರಶಾಂತ್ ವೀರ್ ಅವರ ಜವಾಬ್ದಾರಿಯುತ ಆಟದಿಂದ ಸಿಎಸ್‌ಕೆ 4 ಎಸೆತಗಳು ಬಾಕಿ ಇರುವಂತೆಯೇ ಗುರಿ ತಲುಪಿತು. ದುಬೆ ಸತತ 2 ಸಿಕ್ಸರ್ ಸಿಡಿಸಿ ಪಂದ್ಯವನ್ನು ಮುಕ್ತಾಯಗೊಳಿಸಿದರು. ಈ 'ಜಯವು ಚೆನ್ನೈ ಅಭಿಮಾನಿಗಳಲ್ಲಿ ಸಂಭ್ರಮ ತಂದಿದೆ.

ಸಂಕ್ಷಿಪ್ತ ಸ್ಕೋರ್: ಲಖನೌ ಸೂಪರ್ ಜಯಂಟ್ಸ್: 20 ಓವರ್‌ಗಳಲ್ಲಿ 8 ವಿಕೆಟ್‌ಗೆ 203 (ಜೋಶ್ ಇಂಗ್ಲಿಸ್ 85, ಶಹಬಾಜ್ ಅಹ್ಮದ್ 43; ಜೇಮಿ ಓವರ್ಟನ್ 36ಕ್ಕೆ 3). **ಚೆನ್ನೈ ಸೂಪರ್ ಕಿಂಗ್ಸ್:** 19.2 ಓವರ್‌ಗಳಲ್ಲಿ 5 ವಿಕೆಟ್‌ಗೆ 204 (ಉರ್ವಿಲ್ ಪಟೇಲ್ 65, ಸ್ಯಾಮ್ಸನ್ 28; ಮೊಹಮ್ಮದ್ ಶಮಿ 38ಕ್ಕೆ 1, ಆವೇಶ್ ಖಾನ್ 42ಕ್ಕೆ 1).

ಐಪಿಎಲ್‌ನಲ್ಲಿ ವೇಗದ ಅರ್ಧಶತಕ (ಎಸೆತಗಳಲ್ಲಿ)

ಆಟಗಾರ	ಎಸೆತಗಳು	ತಂಡ	ಎದುರಾಳಿ	ಸೀಸನ್
ಯಶಸ್ವಿ ಜೈಸ್ವಾಲ್	13	ರಾಜಸ್ಥಾನ ರಾಯಲ್ಸ್	ಕೋಲ್ಕೊತಾ ನೈಟ್ ರೈಡರ್ಸ್	2023
ಉರ್ವಿಲ್ ಪಟೇಲ್	13	ಚೆನ್ನೈ ಸೂಪರ್ ಕಿಂಗ್ಸ್	ಲಖನೌ ಸೂಪರ್ ಜಯಂಟ್ಸ್	2026
ಕೆ.ಎಲ್. ರಾಹುಲ್	14	ಕಿಂಗ್ಸ್ ಇಲೆವೆನ್ ಪಂಜಾಬ್	ಡೆಲ್ಲಿ ಡೇರ್‌ಡೆವಿಲ್ಸ್	2018
ಪ್ಯಾಟ್ ಕಮಿನ್ಸ್	14	ಕೋಲ್ಕೊತಾ ನೈಟ್ ರೈಡರ್ಸ್	ಮುಂಬಯಿ ಇಂಡಿಯನ್ಸ್	2022
ರೊಮಾರಿಯೋ ಶೆಫರ್ಡ್	14	ರಾಯಲ್ ಚಾಲೆಂಜರ್ಸ್ ಬೆಂಗಳೂರು	ಚೆನ್ನೈ ಸೂಪರ್ ಕಿಂಗ್ಸ್	2025

ವೇಪಿಂಗ್

ವಿಕ ಜ್ಞಾನ ತಾಣ

ಐಪಿಎಲ್‌ನಲ್ಲಿ ಇತ್ತೀಚೆಗೆ ಪಂದ್ಯವೊಂದರ ವೇಳೆ ರಾಜಸ್ಥಾನ ರಾಯಲ್ಸ್ ತಂಡದ ನಾಯಕ **ರಿಯಾನ್ ಪರಾಗ್** ಡಗೌಟ್‌ನಲ್ಲಿ 'ವೇಪಿಂಗ್' ಮಾಡುತ್ತಿರುವುದು ಕ್ಯಾಮೆರಾದಲ್ಲಿ ಸೆರೆಯಾಗಿರುವುದು ವಿವಾದಕ್ಕೆ ಕಾರಣವಾಗಿದೆ. ಇ-ಸಿಗರೇಟ್ ಅಥವಾ ಹೊಗೆಯನ್ನು ಬಿಡುಗಡೆಗೊಳಿಸುವ ಎಲೆಕ್ಟ್ರಾನಿಕ್ ಸಾಧನಗಳನ್ನು ಬಳಸುವುದಕ್ಕೆ ವೇಪಿಂಗ್ ಎಂದು ಕರೆಯುತ್ತಾರೆ. ಈ ಪ್ರಕ್ರಿಯೆಯಲ್ಲಿ ಎಲೆಕ್ಟ್ರಾನಿಕ್ ಸಾಧನವು ನಿಕೋಟಿನ್ ಮತ್ತು ಇತರ ರಾಸಾಯನಿಕಗಳನ್ನು ಒಳಗೊಂಡಿರುವ ದ್ರವವನ್ನು ಬಿಸಿಮಾಡಿ ಹೊರಸೂಸುವ ಆವಿಯನ್ನು ಒಳಗೆಳೆದುಕೊಳ್ಳಲಾಗುತ್ತದೆ. ಕ್ರಿಕೆಟ್ ಮೈದಾನ ಅಥವಾ ಡಗೌಟ್‌ನಲ್ಲಿ ಧೂಮಪಾನ ಅಥವಾ ವೇಪಿಂಗ್ ಮಾಡುವುದನ್ನು ಐಸಿಸಿ ಮತ್ತು ಬಿಸಿಸಿಐ ಕಟ್ಟುನಿಟ್ಟಾಗಿ ನಿಷೇಧಿಸಿದೆ. ಇದು ಕ್ರೀಡಾ ಸ್ಫೂರ್ತಿಗೆ ವಿರುದ್ಧವಾದುದು ಎಂದು ಪರಿಗಣಿಸಲಾಗುತ್ತದೆ. ಇಂಥ ವರ್ತನೆಯು ಐಪಿಎಲ್ ನೀತಿ ಸಂಹಿತೆಯ ಉಲ್ಲಂಘನೆ ಎಂದು ಪರಿಗಣಿತವಾಗುತ್ತದೆ. ಪಂದ್ಯದ ವೇಳೆ ಇಂತಹ ಕೃತ್ಯಗಳಲ್ಲಿ ತೊಡಗಿದರೆ ಆಟಗಾರರಿಗೆ ಪಂದ್ಯದ ಶುಲ್ಕದಲ್ಲಿ ದಂಡ ಅಥವಾ ಎಚ್ಚರಿಕೆಯ ಶಿಕ್ಷೆ ನೀಡುವ ಅವಕಾಶವಿದೆ. ವೇಪಿಂಗ್ ಶ್ವಾಸಕೋಶದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಇದು ಕ್ರೀಡಾಪಟುಗಳ ರಕ್ತದೊತ್ತಡ ಹೆಚ್ಚಿಸಿ, ಉಸಿರಾಟದ ಸಾಮರ್ಥ್ಯ ಕುಗ್ಗಿಸುತ್ತದೆ. ನಿಕೋಟಿನ್ ಅಂಶವು ಹೃದಯದ ಮೇಲೆ ಒತ್ತಡ ಹೇರುವುದರಿಂದ, ಫಿಟ್ನೆಸ್ ಅಗತ್ಯವಿರುವ ಕ್ರಿಕೆಟಿಗರಿಗೆ ಹಾನಿಕಾರಕ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ನೀಮನ್ ಚಾಂಪಿಯನ್: ಗುಕೇಶ್‌ಗೆ 6ನೇ ಸ್ಥಾನ

ಸೂಪರ್ ರ್‍ಯಾಪಿಡ್ ಮತ್ತು ಬ್ಲಿಟ್ಜ್

ವಾರ್ಸಾ(ಪೋಲೆಂಡ್): ಗ್ರ್ಯಾಂಡ್ ಚೆಸ್ ಟೂರ್‌ನ ಭಾಗವಾದ 'ಸೂಪರ್ ರ್‍ಯಾಪಿಡ್ ಮತ್ತು ಬ್ಲಿಟ್ಜ್' ಚೆಸ್ ಟೂರ್ನಮೆಂಟ್‌ನಲ್ಲಿ ವಿಶ್ವ ಚಾಂಪಿಯನ್ ಭಾರತದ ಡಿ. ಗುಕೇಶ್ 6ನೇ ಸ್ಥಾನಕ್ಕೆ ತೃಪ್ತಿಪಟ್ಟಿದ್ದಾರೆ. ಅಮೆರಿಕದ ಹ್ಯಾನ್ಸ್ ಮೋಕ್ ನೀಮನ್ ಒಟ್ಟು 22.5 ಅಂಕಗಳನ್ನು ಗಳಿಸುವ ಮೂಲಕ ಪ್ರಶಸ್ತಿ ಹಾಗೂ 50,000 ಯುಎಸ್ ಡಾಲರ್ (47.21 ಲಕ್ಷ ರೂ.) ಬಹುಮಾನವನ್ನು ಮುಡಿಗೇರಿಸಿಕೊಂಡರು.

ಗುಕೇಶ್‌ರವರು ರ್‍ಯಾಪಿಡ್ ವಿಭಾಗದಲ್ಲಿ 9 ಮತ್ತು ಬ್ಲಿಟ್ಜ್ ವಿಭಾಗದಲ್ಲಿ 8 ಅಂಕಗಳೊಂದಿಗೆ ಒಟ್ಟು 17 ಅಂಕಗಳನ್ನು ಗಳಿಸಿದರು. ಅಂತಿಮ ದಿನದಂದು ಅವರು ಅಮೆರಿಕದ ವೆಸ್ಲಿ ಸೋ, ನೀಮನ್ ಮತ್ತು ಪೋಲೆಂಡ್‌ನ ಡುಡಾ ಜಾನ್ ವಿರುದ್ಧ ಜಯ ಸಾಧಿಸಿದರು. ಆದರೆ, ಉಜ್ಬೇಕಿಸ್ತಾನದ ಜವೋಖಿರ್ ಸಿಂದರೊವ್ ವಿರುದ್ಧದ ಸೋಲು ಅವರಿಗೆ ಹಿನ್ನಡೆಯಾಯಿತು.

ಅಮೆರಿಕದ ಫ್ಯಾಬಿಯಾನೊ ಕರುವಾನಾ (22 ಅಂಕ) ಎರಡನೇ ಸ್ಥಾನ ಪಡೆದರೆ, ವೆಸ್ಲಿ ಸೋ ಮೂರನೇ ಸ್ಥಾನ ಪಡೆದರು. ಕಿರಿಯ ವಯಸ್ಸಿನ ವಿಶ್ವ ಚಾಂಪಿಯನ್ ಗುಕೇಶ್ ಮುಂದೆ ನಾರ್ವೆ ಚೆಸ್ ಟೂರ್ನಿಯಲ್ಲಿ ಭಾಗವಹಿಸಲಿದ್ದಾರೆ. ಈ ಸರಣಿಯ ಮುಂದಿನ ಹಂತವಾದ 'ಸೂಪರ್ ಕ್ಲಾಸಿಕ್' ರೊಮೇನಿಯಾದ ಬುಕಾರೆಸ್ಟ್‌ನಲ್ಲಿ ನಡೆಯಲಿದ್ದು, ಅಲ್ಲಿ ಭಾರತದ ಆರ್. ಪ್ರಜ್ಞಾನಂದ ಕಣಕ್ಕಿಳಿಯಲಿದ್ದಾರೆ.

ಇಂದಿನಿಂದ ಏಷ್ಯನ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್

ಗಾಂಧಿನಗರ: ಸೋಮವಾರದಿಂದ ಗುಜರಾತ್‌ನ ಗಾಂಧಿನಗರದಲ್ಲಿ ಆರಂಭವಾಗಲಿರುವ ಏಷ್ಯನ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಭಾರತೀಯ ವೇಟ್‌ಲಿಫ್ಟರ್‌ಗಳು ತವರಿನ ಬೆಂಬಲದೊಂದಿಗೆ ಉತ್ತಮ ಪ್ರದರ್ಶನ ನೀಡಲು ಸಜ್ಜಾಗಿದ್ದಾರೆ. ಮುಂಬರುವ ಕಾಮನ್‌ವೆಲ್ತ್ ಮತ್ತು ಏಷ್ಯನ್ ಗೇಮ್ಸ್‌ಗೂ ಮುನ್ನ ಈ ಕೂಟವು ಕ್ರೀಡಾಪಟುಗಳಿಗೆ ಆತ್ಮವಿಶ್ವಾಸ ಹೆಚ್ಚಿಸಿಕೊಳ್ಳಲು ಉತ್ತಮ ವೇದಿಕೆಯಾಗಿದೆ.

ಮೀರಾಬಾಯಿ ಚಾನು ಗೈರು

ಒಲಿಂಪಿಕ್ ಪದಕ ವಿಜೇತೆ ಮೀರಾಬಾಯಿ ಚಾನು ಭುಜದ ನೋವಿನ ಕಾರಣ ಈ ಕೂಟದಿಂದ ಹೊರಗುಳಿದಿದ್ದಾರೆ. ಅವರ ಅನುಪಸ್ಥಿತಿಯಲ್ಲಿ ಬಿಂದ್ಯಾರಾಣಿ ದೇವಿ, ಹರ್ಜಿಂದರ್ ಕೌರ್ ಮತ್ತು ಲವ್‌ಪ್ರೀತ್ ಸಿಂಗ್ ಅವರಂತಹ ಅನುಭವಿಗಳ ಮೇಲೆ ಹೆಚ್ಚಿನ ನಿರೀಕ್ಷೆ ಇದೆ. ಭಾರತವು ಈ ಬಾರಿ 16 ಸದಸ್ಯರ ಬಲಿಷ್ಠ ತಂಡವನ್ನು ಕಣಕ್ಕಿಳಿಸುತ್ತಿದ್ದು, ಭರಾಲಿ ಮತ್ತು ಜ್ಞಾನೇಶ್ವರಿ ಯಾದವ್ ಅವರಂತಹ ಉದಯೋನ್ಮುಖ ಪ್ರತಿಭೆಗಳೂ ತಂಡದಲ್ಲಿದ್ದಾರೆ.

30 ದೇಶಗಳ 170ಕ್ಕೂ ಹೆಚ್ಚು ಕ್ರೀಡಾಪಟುಗಳು ಭಾಗವಹಿಸುತ್ತಿರುವ ಈ ಕೂಟದಲ್ಲಿ ಚೀನಾದ ಲಿಯು ಹುವಾನ್ಹುವಾ ಮತ್ತು ಕತಾರ್‌ನ ಫಾರಿಸ್ ಇಬ್ರಾಹಿಂ ಅವರಂಥ ಒಲಿಂಪಿಕ್ ಚಾಂಪಿಯನ್‌ಗಳು ಸ್ಪರ್ಧಿಸಲಿದ್ದಾರೆ. ಕಳೆದ ಬಾರಿ ಭಾರತವು ಈ ಕೂಟದಲ್ಲಿ ಯಾವುದೇ ಪದಕ ಗೆದ್ದಿರಲಿಲ್ಲ, ಹಾಗಾಗಿ ಈ ಬಾರಿ ತವರಿನಲ್ಲಿ ಹೆಚ್ಚಿನ ಪದಕಗಳನ್ನು ಗೆಲ್ಲುವ ಗುರಿ ಹೊಂದಿದೆ.

ಜಸ್ಟಿನಾಗೆ ಸಿಂಗಲ್ಸ್ ಮುಕುಟ

ತುಮಕೂರು ಓಪನ್ ಟೆನಿಸ್ ಟೂರ್ನಿ

ತುಮಕೂರು: ಜಿಲ್ಲಾ ಟೆನಿಸ್ ಸಂಸ್ಥೆಯ ಆವರಣದಲ್ಲಿ ನಡೆದ ಐಟಿಎಫ್ ಡಬ್ಲ್ಯು35 ತುಮಕೂರು ಓಪನ್ ಟೆನಿಸ್ ಟೂರ್ನಿಯಲ್ಲಿ ಅಗ್ರ ಶ್ರೇಯಾಂಕಿತೆ ಜಸ್ಟಿನಾ ಮಿಕುಲ್‌ಸ್ಕೈಟ್ ಸಿಂಗಲ್ಸ್ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ. ಭಾನುವಾರ ನಡೆದ ಫೈನಲ್ ಪಂದ್ಯದಲ್ಲಿ ಎರಡನೇ ಶ್ರೇಯಾಂಕದ ಪೋಲೆಂಡ್ ಆಟಗಾರ್ತಿ ಜುಜಾನಾ ಪಾವ್ಲಿಕೋವ್‌ಸ್ಕಾ ಗಾಯದ ಕಾರಣ ಪಂದ್ಯದಿಂದ ಹಿಂದೆ ಸರಿದಿದ್ದರಿಂದ ಲಿಥುವೇನಿಯಾದ ಜಸ್ಟಿನಾರಿಗೆ ಪ್ರಶಸ್ತಿ ಒಲಿಯಿತು.

ಭುಜದ ನೋವಿನಿಂದ ಬಳಲುತ್ತಿದ್ದರೂ ಅದ್ಭುತ ಧೈರ್ಯ ತೋರಿ ಅಂಗಳಕ್ಕಿಳಿದ ಪಾವ್ಲಿಕೋವ್‌ಸ್ಕಾ, ಕೇವಲ ಒಂದು ಗೇಮ್ ಆಡಿದ ಬಳಿಕ ನೋವು ಹೆಚ್ಚಾದ ಕಾರಣ ಆಟ ಮುಂದುವರಿಸಲು ಸಾಧ್ಯವಾಗದೆ ನಿವೃತ್ತಿ ಹೊಂದಿದರು. ಇದರಿಂದಾಗಿ ಇಬ್ಬರು ಶ್ರೇಷ್ಠ ಆಟಗಾರ್ತಿಯರ ನಡುವಿನ ರೋಚಕ ಹಣಾಹಣಿ ನಿರೀಕ್ಷಿಸಿದ್ದ ಅಭಿಮಾನಿಗಳಿಗೆ ನಿರಾಸೆಯಾಯಿತು.

ಜಸ್ಟಿನಾ ಅವರಿಗೆ ಇದು 8ನೇ ಐಟಿಎಫ್ ಸಿಂಗಲ್ಸ್ ಪ್ರಶಸ್ತಿಯಾಗಿದ್ದು, ಈ ವಿಜಯದೊಂದಿಗೆ ಅವರು 4,860 ಯುಎಸ್ ಡಾಲರ್(4.5 ಲಕ್ಷ) ಬಹುಮಾನ ಹಾಗೂ 35 ಡಬ್ಲ್ಯುಟಿಎ ರ್‍ಯಾಂಕಿಂಗ್ ಪಾಯಿಂಟ್‌ಗಳನ್ನು ತಮ್ಮದಾಗಿಸಿಕೊಂಡರು. ರನ್ನರ್ ಅಪ್ ಪಾವ್ಲಿಕೋವ್‌ಸ್ಕಾ 2,637 ಯುಎಸ್ ಡಾಲರ್(2.5 ಲಕ್ಷ ರೂ.) ಮತ್ತು 23 ಅಂಕಗಳನ್ನು ತಮ್ಮದಾಗಿಸಿಕೊಂಡರು.

ಇಂದು ಡೆಲ್ಲಿ ಎದುರಾಳಿ

ಗೆಲುವಿನ ಒತ್ತಡದಲ್ಲಿ ಪಂಜಾಬ್ ಕಿಂಗ್ಸ್

ಧರ್ಮಶಾಲಾ: ಹಿಮಚ್ಛಾದಿತ ಸುಂದರ ಪರಿಸರದಲ್ಲಿ ಸೋಮವಾರ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ತಂಡವು ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಗೆಲುವಿನ ಹಾದಿಗೆ ಮರಳುವ ಗುರಿ ಹೊಂದಿದೆ. ಸತತ ಮೂರು ಸೋಲುಗಳಿಂದ ಕಂಗಾಲಾಗಿರುವ ಪಂಜಾಬ್, ಪ್ಲೇ-ಆಫ್ ಆಸೆಯನ್ನು ಜೀವಂತವಾಗಿರಿಸಿಕೊಳ್ಳಲು ಈ ಪಂದ್ಯವನ್ನು ಗೆಲ್ಲಲೇಬೇಕಿದೆ.

ನಾಯಕ ಶ್ರೇಯಸ್ ಅಯ್ಯರ್ ತಂಡವನ್ನು ಮುನ್ನಡೆಸುತ್ತಿದ್ದು, ಆರಂಭಿಕರಾದ ಪ್ರಿಯಾಂಶ್ ಆರ್ಯ ಮತ್ತು ಪ್ರಭ್‌ಸಿಮ್ರನ್ ಸಿಂಗ್ ಮತ್ತೆ ಫಾರ್ಮ್‌ಗೆ ಮರಳುವ ನಿರೀಕ್ಷೆಯಿದೆ. ಮತ್ತೊಂದೆಡೆ, ಕಳೆದ ಆರು ಪಂದ್ಯಗಳಲ್ಲಿ ಐದರಲ್ಲಿ ಸೋತಿರುವ ಅಕ್ಷರ್ ಪಟೇಲ್ ನೇತೃತ್ವದ ಡೆಲ್ಲಿ ಕ್ಯಾಪಿಟಲ್ಸ್ ಬಹುತೇಕ ಟೂರ್ನಿಯಿಂದ ಹೊರಬಿದ್ದಿದೆ. ಕುಲದೀಪ್ ಯಾದವ್ ಅವರ ಕಳಪೆ ಫಾರ್ಮ್ ಡೆಲ್ಲಿಗೆ ತಲೆನೋವಾಗಿದೆ. ಉಭಯ ತಂಡಗಳಿಗೂ ಫೀಲ್ಡಿಂಗ್ ಸಮಸ್ಯೆಯಾಗಿದ್ದು, ಧರ್ಮಶಾಲಾದ ವೇಗದ ಪಿಚ್‌ನಲ್ಲಿ ಪುಟಿದೇಳಲು ಎರಡೂ ತಂಡಗಳು ಸಜ್ಜಾಗಿವೆ.

ಪಂದ್ಯ: ಎಚ್‌ಪಿಸಿಎ ಕ್ರೀಡಾಂಗಣ, ಧರ್ಮಶಾಲಾ; **ಸಮಯ:** ರಾತ್ರಿ 7.30; **ನೇರಪ್ರಸಾರ:** ಸ್ಟಾರ್ ಸ್ಪೋರ್ಟ್ಸ್.

ಲವಲVK

ವಿಜಯ್ ದೇವರಕೊಂಡ ಹುಟ್ಟುಹಬ್ಬದ ಪ್ರಯುಕ್ತ ಅವರ ನಟನೆಯ 'ರಣಬಾಲಿ' ಸಿನಿಮಾದ ಆ್ಯಕ್ಷನ್ ಪ್ರಧಾನ ಟೀಸರ್ ಹಾಗೂ 'ರೌಡಿ ಜನಾರ್ಧನ' ಚಿತ್ರದ ರೊಮ್ಯಾಂಟಿಕ್ ಪೋಸ್ಟರ್ ರಿಲೀಸ್ ಆಗಿವೆ.

ನಟ ಮೋಹನ್‌ಲಾಲ್ ತಮ್ಮ ಸೂಪರ್‌ಹಿಟ್ ಫ್ರಾಂಚೈಸ್ ಸಿನಿಮಾ 'ದೃಶ್ಯಂ–3' ನಂತರ 'ದೃಶ್ಯಂ 4' ಹಾಗೂ 'ದೃಶ್ಯಂ 5' ಬರಬಹುದು ಎನ್ನುವ ಮೂಲಕ ಕುತೂಹಲ ಹೆಚ್ಚಿಸಿದ್ದಾರೆ.

ಚುರುಮುರಿ

ಗಾಯಕಿಯಾದ ಶಿಲ್ಪಾ ಗಣೇಶ್

ನಟ ಗಣೇಶ್ ಪತ್ನಿ ಶಿಲ್ಪಾ 'ಪಿಚ್ಚರ್' ಸಿನಿಮಾದ 'ಗೋಕುಲದ ರಾಧೆ' ಎಂಬ ಹಾಡನ್ನು ಗಾಯಕ ಜಸ್ಕರಣ್ ಸಿಂಗ್ ಜತೆಗೆ ಕನ್ನಡ ಹಾಗೂ ತುಳು ಭಾಷೆಗಳಲ್ಲಿ ಹಾಡಿದ್ದಾರೆ. ಕನ್ನಡದಲ್ಲಿ ಅರಸು ಅಂತಾರೆ ಹಾಗೂ ತುಳುವಿನಲ್ಲಿ ಕೀರ್ತನ್ ಭಂಡಾರಿ ಈ ಹಾಡು ರಚಿಸಿದ್ದು, ಸ್ಯಾಮುವೆಲ್ ಅಭಿ ಸಂಗೀತ ನೀಡಿದ್ದಾರೆ. ಸಂದೀಪ್ ಬೆದ್ರ ನಿರ್ದೇಶನದಲ್ಲಿ ನಿತ್ಯಪ್ರಕಾಶ್ ಬಂಟ್ವಾಳ ಹೀರೊ ಆಗಿ ನಟಿಸುತ್ತಿರುವ ಈ ಸಿನಿಮಾದ ಹಾಡಿನ ಚಿತ್ರೀಕರಣ ಕಾಶ್ಮೀರದಲ್ಲಿ ನಡೆದಿದೆ.

ನಿರ್ಮಾಪಕರಿಗೆ ನಟಿಯರೇ ಟಾರ್ಗೆಟ್ ಎಂದ ಕೃತಿ

ಬಾಲಿವುಡ್ ನಟಿ ಕೃತಿ ಸನನ್, ಸಿನಿಮಾ ಬಜೆಟ್ ಕಡಿಮೆ ಮಾಡಬೇಕು ಎಂದುಕೊಂಡಾಗ ನಿರ್ಮಾಪಕರ ಕಣ್ಣಿಗೆ ಮೊದಲು ಬೀಳುವುದೇ ನಟಿಯರ ಸಂಭಾವನೆ ಎಂದು ಹೇಳಿದ್ದಾರೆ. ಈ ವಿಷಯದಲ್ಲಿ ಕೆಲವು ಸಂಘರ್ಷಗಳು ನಡೆದಿವೆ. ನಿರ್ಮಾಪಕರು ಹಣ ಉಳಿಸಬೇಕಾದಾಗ ನಾಯಕಿಯರ ಸಂಭಾವನೆ ಕಡಿಮೆ ಮಾಡಲು ಮುಂದಾಗುತ್ತಾರೆ. ಸಿನಿಮಾ ಬಜೆಟ್‌ನ ಬಹುಪಾಲು ಹೀರೊಗಳಿಗೆ ಹೋಗುತ್ತಿದ್ದರೂ ನಟಿಯರ ವಿರುದ್ಧ ಈ ತಾರತಮ್ಯ ನಡೆಯುತ್ತದೆ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ವಿಜಿ ಮತ್ತು ಜೆನ್ ಜೀ ದುನಿಯಾ

ಜೆನ್ ಜೀಗಳು ಒಂದು ರಾಜ್ಯದ ಆಡಳಿತ ಪಕ್ಷವನ್ನೇ ಬದಲಿಸುತ್ತಾರೆ, ಒಬ್ಬ ಜನನಾಯಕನ ಉದಯಕ್ಕೆ ಕಾರಣರಾಗುತ್ತಾರೆ ಎಂದಾಗ ಅವರಿಗೆ ಸ್ಯಾಂಡಲ್‌ವುಡ್‌ನ ಸದ್ಯದ ಪರಿಸ್ಥಿತಿ ಬದಲಿಸಲು ಸಾಧ್ಯವಿಲ್ಲವೆ? ಈ ಬಗ್ಗೆ ನಟ ದುನಿಯಾ ವಿಜಯ್ ಲವಲvkಯೊಂದಿಗೆ ಮಾತನಾಡಿದ್ದಾರೆ.

ಕಿರಣ್ ಚಂದ್ರ
kiran.b@timesofindia.com

ನಟ ದುನಿಯಾ ವಿಜಯ್ ತಮ್ಮ ನಿರ್ದೇಶನದ ಸಿನಿಮಾಗಳಲ್ಲಿ ಜೆನ್ ಜೀ ಪೀಳಿಗೆಯವರನ್ನೇ ಟಾರ್ಗೆಟ್ ಮಾಡುತ್ತಾರೆ. ಯುವಜನತೆಯನ್ನು ಎಚ್ಚರಿಸುವ, ಅವರಿಗೆ ಶಕ್ತಿಶಾಲಿ ಸಂದೇಶ ನೀಡುವ ಕಥೆಗಳನ್ನು ಆಯ್ಕೆ ಮಾಡುತ್ತಾರೆ. ಈ ಜನರೇಷನ್‌ಗೆ ಇಷ್ಟವಾಗುವ ಶೈಲಿಯಲ್ಲಿಯೇ ಸಂಭಾಷಣೆ, ರ‍್ಯಾಪ್ ಹಾಡು, ಲಿರಿಕ್ಸ್ ಇತ್ಯಾದಿಯನ್ನು ಮಾಡುತ್ತಿದ್ದಾರೆ. ಅವರ ಈ ಪ್ರಯತ್ನ ಯಶಸ್ವಿಯೂ ಆಗಿದೆ. ಇದು ಉದ್ದೇಶಪೂರ್ವಕ ಹಾಗೂ ವರ್ಕ್ ಆಗುತ್ತಿರುವ ಫಾರ್ಮುಲಾ ಎನ್ನುವುದು ಅವರ ನಂಬಿಕೆ.

ಜೆನ್ ಜೀಯಿಂದ ಬದಲಾವಣೆ

ಈ ಬಗ್ಗೆ ದುನಿಯಾ ವಿಜಯ್, 'ಈಗ ಎಲ್ಲಾ ಕಡೆ ಬದಲಾವಣೆ ಬೇಕು ಎಂದಾಗ ಜೆನ್ ಜೀಗಳೇ ಮುಖ್ಯವಾಗುತ್ತಾರೆ. ಅವರಿಂದ ನಮ್ಮ ಚಿತ್ರರಂಗದಲ್ಲಿಯೂ ಬದಲಾವಣೆ ಆಗಬಹುದು ಎನ್ನುವುದು ನನ್ನ ನಂಬಿಕೆ. ಈ ವಿಷಯದಲ್ಲಿ ನಾನು ಕೆಲವು ಪ್ರಯತ್ನಗಳನ್ನು ಮಾಡುತ್ತಿದ್ದೇನೆ. ಕಥೆ ಎಷ್ಟೇ ನೋವುಂಟು ಮಾಡಿದರೂ, ಭಾವುಕವಾಗಿಸಿದರೂ ಸಿನಿಮಾ ಎಂಜಾಯ್ ಮಾಡಲು ಚಿತ್ರಮಂದಿರಕ್ಕೆ ಬಂದವರಿಗೆ ಏನಾದರೂ ಸಂದೇಶ ನೀಡಬೇಕೆನ್ನುವುದು ನನ್ನಾಸೆ. ಅದು ದೊಡ್ಡದಾಗಿ ಸದ್ದು ಮಾಡಿದಾಗಲಷ್ಟೇ ನನ್ನ ಶ್ರಮ ಸಾರ್ಥಕವಾಗುತ್ತದೆ' ಎಂದು ಹೇಳಿದ್ದಾರೆ.

ಯುವಜನತೆಗೆ ಆದ್ಯತೆ

'ಸ್ಯಾಂಡಲ್‌ವುಡ್‌ನಲ್ಲಿ 'ಸಲಗ', 'ಭೀಮ', 'ಸಿಟಿಲೈಟ್ಸ್' ಸಿನಿಮಾಗಳು ನೈಜ ಘಟನೆ ಆಧರಿತವಾಗಿದ್ದರೂ ಆ ನೈಜ ವ್ಯಕ್ತಿಗಳನ್ನು ರಿವೀಲ್ ಮಾಡಲು ಸಾಧ್ಯವಿಲ್ಲ. 'ಸಲಗ'ದಲ್ಲಿ ಅಂಡರ್‌ವರ್ಲ್ಡ್ ಕಥೆ ಹೇಳಿದ್ದೆ, 'ಭೀಮ'ದಲ್ಲಿ ಗಾಂಜಾ ಹಾಗೂ ಮಾದಕ ವ್ಯಸನದ ಬಗ್ಗೆ ಹೇಳಿದೆ. ಅಂಥದ್ದೇ ಒಂದು ವಾಸ್ತವ ಸಮಸ್ಯೆ ಕುರಿತು 'ಸಿಟಿ ಲೈಟ್ಸ್'ನಲ್ಲಿಯೂ ಹೇಳುತ್ತಿದ್ದೇನೆ. ಪ್ರೇಕ್ಷಕರೇ ನಮಗೆ ದೇವರು. ಆದ್ದರಿಂದ ಈಗ ಜೆನ್ ಜೀಗಳಿಗೆ ಏನು ಬೇಕೋ ಅದನ್ನೇ ನಾನು ಕೊಡಬೇಕಾಗಿದೆ. ಅವರು ಇಷ್ಟಪಡುವ ಶೈಲಿಯಲ್ಲಿ ನಾನು ಹೇಳುತ್ತೇನೆ ಎನ್ನುವುದು ಅವರಿಗೆ ಖಚಿತವಾದ ಮೇಲೆಯೇ ಅವರು ಥಿಯೇಟರ್‌ಗೆ ಬರುತ್ತಾರೆ ಹಾಗೂ ಬಂದವರು ಸಿನಿಮಾ ಎಂಜಾಯ್ ಮಾಡಿದರಷ್ಟೇ ಇನ್ನೊಬ್ಬರಿಗೆ ಹೇಳುತ್ತಾರೆ. ಆಗ ಸಿನಿಮಾ ಗೆಲ್ಲುತ್ತದೆ. ಜೆನ್ ಜೀಯನ್ನು ಚಿತ್ರಮಂದಿರಕ್ಕೆ ಕರೆತರುವುದು ಸದ್ಯಕ್ಕೆ ತುಂಬಾ ಚಾಲೆಂಜಿಂಗ್. ಅವರನ್ನು ಕರೆತಂದು ಫ್ಯಾಮಿಲಿ ಡ್ರಾಮಾ ತೋರಿಸಿದರೆ ನಿರಾಕರಿಸುತ್ತಾರೆ ಎಂಬ ಅಂಜಿಕೆಯೂ ಇದೆ' ಎಂದು ವಿವರಿಸಿದ್ದಾರೆ ದುನಿಯಾ ವಿಜಿ.

> ಜೆನ್ ಜೀಗಳಿಂದಲೇ ನೇಪಾಳ, ಶ್ರೀಲಂಕಾ, ತಮಿಳುನಾಡಿನಲ್ಲಿ ಬದಲಾವಣೆ ಆಗಿದ್ದರೂ ದುರಾಡಳಿತವೂ ಅದಕ್ಕೆ ಮುಖ್ಯ ಕಾರಣ. ಈ ಮೊದಲು ಯುವಕರು ಮನೆಯ ಹಿರಿಯರು ಹೇಳಿದವರಿಗೆ ಮತ ಹಾಕುತ್ತಿದ್ದರು. ಈಗ ಅವರ ನಿರ್ಧಾರ ಅವರೇ ತೆಗೆದುಕೊಳ್ಳುತ್ತಾರೆ. ನಮ್ಮ ಮಕ್ಕಳು ಮುಂದೆ ಚೆನ್ನಾಗಿರಬೇಕೆಂದು ಹಿರಿಯರು ಯುವಜನಾಂಗ ಸಾಗಿದ ದಾರಿ ಹಿಡಿಯುತ್ತಾರೆ.
>
> –ದುನಿಯಾ ವಿಜಯ್ I ನಟ, ನಿರ್ದೇಶಕ

ನವ ಕ್ರಾಂತಿ

ತೆಲಂಗಾಣ, ತಮಿಳುನಾಡಿನಲ್ಲಿ ಸಿನಿಮಾ ನಟರಿಗಿರುವ ಸ್ಟಾರ್‌ಗಿರಿಯು ಒಬ್ಬನನ್ನು ದೇಶದ ಮಹಾನ್ ರಾಜಕೀಯ ನಾಯಕನನ್ನಾಗಿ ಮಾಡಬಹುದು. ಆದರೆ ಇದು ಕನ್ನಡದಲ್ಲಿ ಕಷ್ಟ ಎಂದಿರುವ ವಿಜಯ್, 'ಅಲ್ಲೆಲ್ಲಾ ಎಲ್ಲರೂ ಒಟ್ಟಾಗಿ ಒಂದು ಬದಲಾವಣೆ ಬೇಕೆನ್ನುವ ನಿರ್ಧಾರ ಮಾಡಿದ್ದರು. ಜಗತ್ತಿಗೆ ಗೊತ್ತಿಲ್ಲದೇ ಅಂಥದ್ದೊಂದು ಯೋಚನೆ ಅಲ್ಲಿ ಗುಪ್ತಗಾಮಿನಿಯಾಗಿ ಹುಟ್ಟಿತ್ತು. ಅದರ ಪರಿಣಾಮವೇ ದಳಪತಿ ವಿಜಯ್ ಗೆಲುವು. ಬದಲಾವಣೆ ಬೇಕೆನ್ನುವುದು ಒಂದು ಬಯಕೆಯಾದರೆ ಅವರ ಮೇಲಿನ ಅಭಿಮಾನ ಇನ್ನೊಂದು ಕಾರಣ. ಇದನ್ನೊಂದು ಹೊಸ ಕ್ರಾಂತಿ ಎನ್ನಬಹುದು' ಎಂದು ಹೇಳಿದ್ದಾರೆ.

ಹೊಸ ಭರವಸೆ

ಕರ್ನಾಟಕದಲ್ಲೂ ಇಂಥ ರಾಜಕೀಯ ಬದಲಾವಣೆಯ ಅಗತ್ಯವಿದೆ ಎಂದಿರುವ ದುನಿಯಾ ವಿಜಿ, 'ಈಗಿರುವ ರಾಜಕೀಯ ಪಕ್ಷಗಳು ಈವರೆಗೆ ಮಾಡಿರುವ ಕೆಲಸಗಳಲ್ಲಿ ಜನರಿಗೆ ಇಂದಿಗೂ ದೊಡ್ಡಮಟ್ಟದ ಅಸಮಾಧಾನವಿದೆ. ಈ ಪಕ್ಷಗಳ ಸರಕಾರಗಳಿಗೆ ನೊಂದವರ ಎಲ್ಲಾ ಸಮಸ್ಯೆಗಳನ್ನು ಸಂಪೂರ್ಣ ನಿವಾರಿಸಲು ಸಾಧ್ಯವಾಗಿಲ್ಲ. ಆ ನೊಂದವರೇ ಒಂದು ಶಕ್ತಿಯಾಗಿ ಮುಂದಿನ ದಿನಗಳಲ್ಲಿ ಇಲ್ಲಿಯೂ ಬದಲಾವಣೆ ತರಬಹುದು. ಮಾತನಾಡಲು ಅಂಜುವ ಅವರು ತಮ್ಮ ನಿರ್ಧಾರವನ್ನು ಮತ ಹಾಕುವ ಮೂಲಕ ತೋರುತ್ತಾರೆ. ಗುಡ್ಡಗಾಡು ಪ್ರದೇಶದ ಹಿಂದುಳಿದ ಜನಾಂಗದಿಂದ ಹಿಡಿದು ಶಿಕ್ಷಣ ಕಲಿತ ಪಟ್ಟಣದ ಜನರವರೆಗೂ ಬಗೆಹರಿಯದ ಸಾಕಷ್ಟು ಸಮಸ್ಯೆಗಳಿವೆ. ಹಾಗಾಗಿ ಕರ್ನಾಟಕದಲ್ಲಿಯೂ ಶೀಘ್ರದಲ್ಲೇ ತಮಿಳುನಾಡಿನಲ್ಲಿ ಆಗಿರುವ ಕ್ರಾಂತಿ ಆಗಿಯೇ ಆಗುತ್ತದೆ' ಎಂಬ ಭರವಸೆ ವ್ಯಕ್ತಪಡಿಸಿದ್ದಾರೆ. ■

ಗೆದ್ದೇ ಗೆಲ್ಲುವೆ ಒಂದು ದಿನ

ಸಿನಿಮಾ ನಟನೆ ಬಿಟ್ಟು ಬೇರೇನು ಮಾಡಲ್ಲ, ಟಿವಿ, ವೆಬ್ ಸೀರಿಸ್ ಮಾಡಲು ಆತುರವಿಲ್ಲ, ಬಂದ ಅವಕಾಶ ಬಿಡುವುದಿಲ್ಲ ಎಂದಿರುವ ನಟಿ ಪ್ರಿಯಾಂಕಾ ತಿಮ್ಮೇಶ್ ಈ ವರ್ಷ ತೆರೆಕಾಣಲಿರುವ ತಮ್ಮ ಸಿನಿಮಾಗಳ ಬಗ್ಗೆ ಮಾತನಾಡಿದ್ದಾರೆ.

ಮಲ್ವೀರ
feedbacklvk@vijaykarnataka.com

ಪ್ರಿಯಾಂಕಾ ತಿಮ್ಮೇಶ್ ಅಭಿನಯದ 'ರುದ್ರಾಭಿಷೇಕಂ', 'ಕೌಂತೇಯ' ಹಾಗೂ ಕೋಮಲ್ ಜತೆಗಿನ ಮತ್ತೊಂದು ಸಿನಿಮಾ ಬಿಡುಗಡೆಗೆ ಸಿದ್ಧವಾಗಿವೆ. ಒಂದೇ ವರ್ಷದಲ್ಲಿ ತಮ್ಮ ಮೂರು ಚಿತ್ರಗಳು ರಿಲೀಸ್ ಆಗಲಿರುವ ಖುಷಿಯಲ್ಲಿರುವ ಅವರು ತಮ್ಮ 12 ವರ್ಷಗಳ ಸಿನಿಮಾ ಕರಿಯರ್‌ನಲ್ಲಿ ಯಾವುದೇ ಧಾವಂತವಿಲ್ಲದ ಆಯ್ಕೆಯ ಬಗ್ಗೆ ಸಮಾಧಾನವಿದೆ ಎಂದಿದ್ದಾರೆ.

'ನಾನು ಚಿಕ್ಕ ವಯಸ್ಸಿನಲ್ಲಿಯೇ ಚಿತ್ರೋದ್ಯಮಕ್ಕೆ ಬಂದೆ. ಇವತ್ತಿಗೂ ನನ್ನಲ್ಲಿ ಆ ಎನರ್ಜಿ ಕಡಿಮೆಯಾಗಿಲ್ಲ. ನಾನು ಒಂದು ದಿನವೂ ಸಿನಿಮಾ ಮರೆತಿಲ್ಲ. ನಿತ್ಯವೂ ಅದರದೇ ಯೋಚನೆ, ಒಳ್ಳೆಯ ಪಾತ್ರದ ನಿರೀಕ್ಷೆ, ಪ್ರಾರ್ಥನೆ ಇದ್ದೇ ಇರುತ್ತದೆ. ನನ್ನ ಗುರಿ ತಲುಪುತ್ತೇನೆ, ಗೆಲುವನ್ನು ಕಾಣುತ್ತೇನೆ ಎಂಬ ಭರವಸೆ ಎಂದಿಗೂ ಕಡಿಮೆಯಾಗಿಲ್ಲ. ಈಗಿನ ಪರಿಸ್ಥಿತಿಯಲ್ಲಿ ಹೊಸಬರಿಗೂ ಅವಕಾಶಗಳು ಬೇಕಿವೆ, ಆದರೆ ಹಳೆಯ ಕಲಾವಿದರಾಗಿ ನಾವೂ ನಿರೀಕ್ಷೆ ಮಾಡುತ್ತಿರುತ್ತೇವೆ. ನಮ್ಮ ಪಾಲಿನ ಊಟವನ್ನಷ್ಟೇ ನಾವು ತಿನ್ನಲು ಸಾಧ್ಯ. ನನಗೆ ಸಿನಿಮಾ ಅವಕಾಶಗಳು ಇಲ್ಲವಾಗಿಲ್ಲ, ತಡವಾಗುತ್ತಿದೆ ಅಷ್ಟೇ. ಈಗಲೂ ಚಿತ್ರರಂಗದಲ್ಲಿ ಆ್ಯಕ್ಟಿವ್ ಆಗಿದ್ದೇನೆ, ಜನರು ನನಗೆ ಪ್ರೀತಿ ಕೊಡುತ್ತಿದ್ದಾರೆ. ಇದಕ್ಕಾಗಿ ದೇವರಿಗೆ ಧನ್ಯವಾದ ಹೇಳುತ್ತೇನೆ' ಎಂದು ಪ್ರಿಯಾಂಕಾ ತಿಮ್ಮೇಶ್ ಹೇಳಿದ್ದಾರೆ.

ರಿಯಾಲಿಟಿ ಶೋಗಳಿಂದ ಸಿಗುವ ಜನಪ್ರಿಯತೆ ತಮಗೆ ಸಿನಿಮಾ ಅವಕಾಶಗಳನ್ನು ಹೆಚ್ಚು ಮಾಡಲ್ಲ ಎಂದು ಸ್ಪಷ್ಟಪಡಿಸಿರುವ ಅವರು, 'ರಿಯಾಲಿಟಿ ಶೋಗೆ ಹೋಗುವ ಮುನ್ನವೂ ನಾನು ಸಿನಿಮಾಗಳಲ್ಲಿ ನಟಿಸಿದ್ದೆ. 2021ರ ಕೋವಿಡ್ ಸಮಯದಲ್ಲಿ ಇಂಥ ಶೋ ಅವಕಾಶ ತಪ್ಪಿಸಿಕೊಳ್ಳಬಾರದೆಂದು ಮಾಡಿದೆ. ಅದರಿಂದ ನನಗೆ ಹೆಚ್ಚು ಅವಕಾಶಗಳು ಬರುತ್ತವೆ ಎಂದು ನಾನು ಯಾವತ್ತೂ ನಿರೀಕ್ಷೆ ಮಾಡಿರಲಿಲ್ಲ. ರಿಯಾಲಿಟಿ ಶೋನಲ್ಲಿ ನಾನು ನಾನಾಗಿದ್ದೆ. ನನ್ನ ಪರ್ಫಾರ್ಮೆನ್ಸ್ ನೋಡಿ ನನಗೆ ಸಿನಿಮಾ ಆಫರ್‌ಗಳು ಬರುತ್ತವೆಯೇ ಹೊರತು ಯಾವುದೇ ಶೋನಲ್ಲಿ ನೋಡಿ ಸಿಗುವುದಿಲ್ಲ ಎನ್ನುವುದು ನನ್ನ ಭಾವನೆ' ಎಂದಿದ್ದಾರೆ.

> ನನಗೆ ನೆಮ್ಮದಿ ಮುಖ್ಯ. ಇಂದಿಗೂ ಚಿತ್ರರಂಗ ನನಗೆ ಅನ್ನ ಹಾಕುತ್ತಿದೆ. ಸಿಕ್ಕಿರುವ ಅವಕಾಶಗಳಲ್ಲಿ ಖುಷಿ ಇದೆ. ಮಾಡುವ ಸಿನಿಮಾಗಳಿಂದ ಮೊದಲು ನನಗೆ ತೃಪ್ತಿ ಸಿಗಬೇಕು. ಯಾರನ್ನೋ ಮೆಚ್ಚಿಸಲು ಹತ್ತು ಸಿನಿಮಾ ಮಾಡುವ ಬದಲು ಒಂದೊಳ್ಳೆಯ ಚಿತ್ರ ಮಾಡಬೇಕು. ಅದಕ್ಕಾಗಿ ಪ್ರಯತ್ನ ಮಾಡುತ್ತಲೇ ಇರುತ್ತೇನೆ.
>
> –ಪ್ರಿಯಾಂಕಾ ತಿಮ್ಮೇಶ್ I ನಟಿ

'ನಾನು ಅಂತರ್ಮುಖಿ, ನನಗೆ ಹೆಚ್ಚು ಸ್ನೇಹಿತರಿಲ್ಲ ಹಾಗೂ ನಾನಾಗಿಯೇ ಯಾರನ್ನೂ ಅವಕಾಶಕ್ಕಾಗಿ ಕೇಳುವುದಿಲ್ಲ. ನನ್ನ ನಟನೆ ನೋಡಿ ಅವಕಾಶ ನೀಡಿದರೆ ಮಾಡುತ್ತೇನೆ. ತಮಿಳಿನಲ್ಲಿ ಎರಡು ಹಾಗೂ ಮಲಯಾಳಂನಲ್ಲಿ ಒಂದು ಸಿನಿಮಾ ಮಾಡಿದ್ದೇನೆ. ನಾನು ಚಿತ್ರೋದ್ಯಮಕ್ಕೆ ಬಂದಾಗ ಸಿನಿಮಾ ಎಂದರೇನು ಎಂದೇ ತಿಳಿದಿರಲಿಲ್ಲ. ಈಗ ತುಂಬಾ ಕಲಿತಿದ್ದೇನೆ. ಅಂದುಕೊಂಡಿರುವ ಗುರಿ ಮುಟ್ಟಿದ್ದೇನೆ. ವೆಬ್ ಸೀರಿಸ್‌ಗಳನ್ನು ದೊಡ್ಡ ಸ್ಟಾರ್‌ಗಳೇ ಮಾಡುತ್ತಿದ್ದಾರೆ, ಆದರೆ ನನ್ನ ಆದ್ಯತೆ ಸಿನಿಮಾ. ಸೀರಿಸ್‌ನಲ್ಲಿ ನಟಿಸುವ ಅವಕಾಶ ಬಂದರೆ ಮಾಡಲ್ಲ ಎಂದೇನಿಲ್ಲ, ನಾನೇ ಅದಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡಿಲ್ಲ ಅಷ್ಟೇ. ಆದರೆ ಒಂದಲ್ಲ ಒಂದು ದಿನ ಪ್ರಿಯಾಂಕಾ ತಿಮ್ಮೇಶ್ ಯಾಕಿಷ್ಟು ದಿನ ಕಾದರು ಎನ್ನುವುದು ಸಿನಿ ಪ್ರೇಕ್ಷಕರಿಗೆ ಅರ್ಥವಾಗುತ್ತದೆ. ಜನರು ನನ್ನ 'ಗಣಪ' ಸಿನಿಮಾವನ್ನು ಇಂದಿಗೂ ಮರೆತಿಲ್ಲ. ಅಂತಹ ಅವಕಾಶಗಳಿಗಾಗಿ ಕಾಯುತ್ತಿದ್ದೇನೆ. ನಾನೇ ಹತ್ತು ಸಿನಿಮಾಗಳಲ್ಲಿ ನಟಿಸಿದ್ದೇನೆ ಎಂದು ಹೇಳಿಕೊಳ್ಳುವುದಕ್ಕೂ, ನಾನು ಮಾಡಿದ ಒಂದೇ ಸಿನಿಮಾವನ್ನು ಜನರು ಮರೆಯದೆ ನೆನಪಿನಲ್ಲಿ ಇಟ್ಟುಕೊಳ್ಳುವುದಕ್ಕೂ ವ್ಯತ್ಯಾಸವಿದೆ' ಎಂದು ವಿವರಿಸಿದ್ದಾರೆ ಪ್ರಿಯಾಂಕಾ ತಿಮ್ಮೇಶ್. ■

ಸ್ಯಾಂಡಲ್‌ವುಡ್‌ನಲ್ಲೂ ನೀನೇ ಬೇಕು ಅಮ್ಮ

ಲವಲvk ಸುದ್ದಿಲೋಕ
feedbacklvk@vijaykarnataka.com



ಭಾನುವಾರ ನಡೆದ ಅಮ್ಮಂದಿರ ದಿನವನ್ನು ಸ್ಯಾಂಡಲ್‌ವುಡ್‌ನ ಕಲಾವಿದರು ಕೂಡ ತಮ್ಮದೇ ರೀತಿಯಲ್ಲಿ ಆಚರಿಸಿದ್ದಾರೆ. ಕೆಲವರು ತಮ್ಮ ಸಿನಿಮಾದಲ್ಲಿರುವ ಅಮ್ಮನ ಹಾಡನ್ನು ಬಿಡುಗಡೆಗೊಳಿಸಿದರೆ, ಇನ್ನು ಕೆಲವರು ತಮ್ಮ ತಾಯಿಯನ್ನು ಸ್ಮರಿಸಿದ್ದಾರೆ.

ಡಾಲಿ ಬರೆದ ಅಮ್ಮನ ಹಾಡು: ಧನಂಜಯ ಅಭಿನಯದ 'ಮದರ್ ಪ್ರಾಮಿಸ್' ಸಿನಿಮಾದ ಅಮ್ಮನ ಹಾಡು ಅಮ್ಮಂದಿರ ದಿನದಂದು ಬಿಡುಗಡೆಯಾಗಿದೆ. ಅವರೇ ಬರೆದಿರುವ ಈ 'ನೀನೇ ಬೇಕು ಅಮ್ಮ' ಎಂಬ ಭಾವನಾತ್ಮಕ ಹಾಡಿಗೆ ನವನೀತ್ ಶ್ಯಾಮ್ ಸಂಗೀತ ಸಂಯೋಜನೆ ಮಾಡಿದ್ದು, ಸಂಚಿತ್ ಹೆಗ್ಡೆ ಹಾಡಿದ್ದಾರೆ. ಪೂರ್ಣಚಂದ್ರ ಮೈಸೂರು ನಿರ್ದೇಶನದ ಈ ಸಿನಿಮಾದ ಅಮ್ಮನ ಹಾಡು ಹಿಟ್ ಲಿಸ್ಟ್ ಸೇರುವ ನಿರೀಕ್ಷೆ ಇದೆ. ಇದರಲ್ಲಿ ತಾಯಿ ಮಗನ ಚಿತ್ರಣ ಜನರ ಗಮನ ಸೆಳೆದಿದೆ. ಈ ಹಾಡನ್ನು ಶೇರ್ ಮಾಡಿರುವ ಡಾಲಿ, 'ಎಲ್ಲಾ ತಾಯಂದಿರಿಗೂ ಅರ್ಪಣೆ, ಹ್ಯಾಪಿ ಮದರ್ಸ್ ಡೇ' ಎಂದು ಬರೆದಿದ್ದಾರೆ.

ಸುನಿಯ ಸಿಂಪಲ್ ವಿಶ್: ನಿರ್ದೇಶಕ ಸಿಂಪಲ್ ಸುನಿ ದಂಪತಿ ಭಾನುವಾರ ತಮ್ಮ ಪುಟ್ಟ ಮಗುವಿನ ಫೋಟೊ ಶೇರ್ ಮಾಡಿ ಮದರ್ಸ್ ಡೇ ವಿಶ್ ಮಾಡಿದ್ದಾರೆ. 'ಅವಳು, ನಾನು ಮತ್ತು ಆತ ಎಂಬ ನಾವು ಜಗತ್ತಿನ ಎಲ್ಲಾ ತ್ಯಾಗಮಯಿ ತಾಯಂದಿರಿಗೆ ಅಮ್ಮನ ದಿನಾಚರಣೆಯ ಶುಭ ಕೋರುತ್ತೇವೆ' ಎಂದು ಅವರು ಬರೆದುಕೊಂಡಿದ್ದಾರೆ.

ಅತ್ತೆಗೆ ವಿಶ್ ಮಾಡಿದ ದರ್ಶನ್ ಪತ್ನಿ: ನಟ ದರ್ಶನ್ ಪತ್ನಿ ವಿಜಯಲಕ್ಷ್ಮಿ ಮದರ್ಸ್ ಡೇಯಂದು ತಮ್ಮ ಅತ್ತೆ ಮೀನಾ ತೂಗುದೀಪ ಅವರಿಗೆ ವಿಶ್ ಮಾಡಿದ ಗಮನ ಸೆಳೆದಿದ್ದಾರೆ. ದರ್ಶನ್ ತಾಯಿಯನ್ನೇ ತಮ್ಮ ಅಮ್ಮ ಎಂದು ಕರೆಯುವ ಅವರು ಫೋಟೊ ಶೇರ್ ಮಾಡಿ ಅಮ್ಮ ಎಂದು ಬರೆದಿದ್ದಾರೆ. ಇದರ ಜತೆಗೆ ಎಐ ತಂತ್ರಜ್ಞಾನದಿಂದ ದರ್ಶನ್ ಮತ್ತು ಅವರ ತಾಯಿ ಜತೆಗಿರುವ ಫೋಟೊ ಕೂಡ ಶೇರ್ ಆಗಿದೆ. ಇನ್ನೊಂದೆಡೆ, ನಟಿ ನಭಾ ನಟೇಶ್ ತಮ್ಮ ತಾಯಿ ಜತೆಗಿರುವ ಸುಂದರ ಫೋಟೊಗಳನ್ನು ಶೇರ್ ಮಾಡಿ, ನನ್ನ ತಾಯಿ ಸೇರಿದಂತೆ ಪ್ರತಿಯೊಬ್ಬರ ಸೂಪರ್‌ಮಾಮ್‌ಗಳಿಗೆ ವಿಶ್ ಮಾಡಿದ್ದಾರೆ.

ಅಮ್ಮನನ್ನು ಸ್ಮರಿಸಿದ ಕಿಚ್ಚ: ನಟ ಸುದೀಪ್ ಸೋಶಿಯಲ್ ಮೀಡಿಯಾದಲ್ಲಿ ತಮ್ಮ ತಾಯಿಯ ಫೋಟೊ ಶೇರ್ ಮಾಡಿ, 'ಪ್ರತಿಯೊಬ್ಬರು ಕೂಡ ತಾಯಿಯನ್ನು ಕೇವಲ ಇಂದು ಮಾತ್ರವಲ್ಲ, ಪ್ರತಿದಿನವೂ ಸೆಲೆಬ್ರೇಟ್ ಮಾಡಿ. ನೀವು ಅವರಿಂದ ಪಡೆದ ಪ್ರತಿ ಕ್ಷಣ ಮತ್ತು ಪ್ರತಿ ನಿಮಿಷವನ್ನೂ ಆಚರಿಸಿ. ನಿಮ್ಮದೆಲ್ಲವನ್ನೂ ಆಕೆಗೆ ಕೊಡಿ, ಯಾಕೆಂದರೆ ಅವಳು ತನ್ನದೆಲ್ಲವನ್ನೂ ಕೊನೆಯೇ ಇಲ್ಲದಂತೆ ಎಂದೆಂದಿಗೂ ನಿಮಗೇ ಕೊಟ್ಟಿರುತ್ತಾಳೆ' ಎಂದು ಭಾವನಾತ್ಮಕವಾಗಿ ಬರೆದಿದ್ದಾರೆ. ನಟ ಶಿವರಾಜ್‌ಕುಮಾರ್ ತಾನು ಮತ್ತು ತನ್ನಮ್ಮನೊಂದಿಗೆ ಇರುವ ವರ್ಣಚಿತ್ರವನ್ನು ಶೇರ್ ಮಾಡಿ 'ಜಗತ್ತನ್ನು ಮುನ್ನಡೆಸುವ ದೇವರ ಪ್ರತಿರೂಪ ಅಮ್ಮ. ಎಲ್ಲಾ ತಾಯಂದಿರಿಗೂ ಶುಭಾಶಯಗಳು' ಎಂದು ಹೇಳಿದ್ದಾರೆ. ■

ಯುವಜನತೆಯ ಫ್ಯಾಷನ್ ಕ್ರೇಜ್ ಪ್ರಿಂಟ್‌ಮ್ಯಾಕ್ಸಿಂಗ್

ಕಳೆದ ಕೆಲವು ವರ್ಷಗಳಿಂದ ಫ್ಯಾಷನ್ ಜಗತ್ತನ್ನು ಆಳುತ್ತಿದ್ದ ಸರಳ ಮತ್ತು ಶಾಂತ ಬಣ್ಣಗಳ ಟ್ರೆಂಡ್ ಈಗಿಲ್ಲ. ಫ್ಯಾಷನ್ ಕ್ಷೇತ್ರ ಮತ್ತೆ ಬಣ್ಣ ಮತ್ತು ವಿನ್ಯಾಸಗಳ ಅಬ್ಬರಕ್ಕೆ ಸಾಕ್ಷಿಯಾಗುತ್ತಿದೆ. ಈ ಬದಲಾವಣೆ ಪ್ರಿಂಟ್‌ಮ್ಯಾಕ್ಸಿಂಗ್ ಹೆಸರಿನಲ್ಲಿ ಗಮನ ಸೆಳೆಯುತ್ತಿದೆ.

ಲವಲVK Fashion ಗುರು

ಲವಲvk ಸುದ್ದಿಲೋಕ
feedbacklvk@vijaykarnataka.com

ಸರಳ ವಿನ್ಯಾಸಗಳಿಂದ ತುಂಬಿದ್ದ ಫ್ಯಾಷನ್ ಲೋಕ ಈಗ ವರ್ಣರಂಜಿತ ಶೈಲಿಯತ್ತ ಮುಖ ಮಾಡಿದೆ. ಪ್ರಿಂಟ್ ಮ್ಯಾಕ್ಸಿಂಗ್ ಎಂಬ ಹೆಸರಿನ ಈ ಬೋಲ್ಡ್ ಮತ್ತು ಕಲರ್‌ಫುಲ್ ಟ್ರೆಂಡ್ ಹೊಸ ಸಂಚಲನ ಮೂಡಿಸಿದೆ. ಮ್ಯಾಕ್ಸಿಂಗ್ ಎಂದರೆ ಯಾವುದನ್ನಾದರೂ ಗರಿಷ್ಠಗೊಳಿಸುವುದು. ಫ್ಯಾಷನ್‌ನಲ್ಲಿ ಒಂದೇ ಉಡುಪಿನಲ್ಲಿ ಹಲವಾರು ರೀತಿಯ ಪ್ರಿಂಟ್‌ಗಳನ್ನು ಒಟ್ಟಿಗೆ ಬಳಸುವುದೇ ಪ್ರಿಂಟ್‌ಮ್ಯಾಕ್ಸಿಂಗ್. ಇದು ಸರಳತೆಗೆ ತದ್ವಿರುದ್ಧವಾದ ಮ್ಯಾಕ್ಸಿಮಲಿಸಂ ಪರಿಕಲ್ಪನೆಯನ್ನು ಎತ್ತಿ ಹಿಡಿಯುತ್ತದೆ. ಬಣ್ಣ ಬಣ್ಣದ ಪಟ್ಟಿ, ಚುಕ್ಕೆ, ಹೂವಿನ ಚಿತ್ತಾರ, ಅನಿಮಲ್ ಪ್ರಿಂಟ್‌ಗಳನ್ನು ಯಾವುದೇ ಮುಜುಗರವಿಲ್ಲದೆ ಒಟ್ಟಿಗೆ ಧರಿಸುವುದು ಪ್ರಿಂಟ್‌ಮ್ಯಾಕ್ಸಿಂಗ್ ಶೈಲಿಯ ವಿಶೇಷತೆಯಾಗಿದೆ. ಕಡಿಮೆ ಇರುವುದೇ ಅಂದ ಎಂಬ ಟ್ರೆಂಡ್ ಮುಗಿದು ಈಗ ಹೆಚ್ಚಿರುವುದೇ ಆನಂದ ಎಂಬ ಟ್ರೆಂಡ್ ಶುರುವಾಗಿದೆ.

ಯುವಜನತೆಯ ಹೊಸ ಕ್ರೇಜ್

ಕಳೆದ ಕೆಲವು ವರ್ಷಗಳಿಂದ ಫ್ಯಾಷನ್ ಜಗತ್ತಿನಲ್ಲಿ ಸರಳ ಮತ್ತು ಬಣ್ಣರಹಿತ ಕ್ವಯ್ಟ್ ಲಕ್ಷುರಿ ಶೈಲಿ ಪ್ರಚಲಿತದಲ್ಲಿತ್ತು. ಆದರೆ ಈಗ ಜೆನ್ ಜೀಗಳು ಸಾಧಾರಣ ಬಣ್ಣಗಳ ಬದಲು ಕಣ್ಣಿಗೆ ಎದ್ದು ಕಾಣುವ ಅಬ್ಬರದ ವಿನ್ಯಾಸಗಳನ್ನು ಇಷ್ಟಪಡುತ್ತಿದ್ದಾರೆ. ಅವರೀಗ ಉಡುಪನ್ನು ಕೇವಲ ದೇಹ ಮುಚ್ಚುವ ವಸ್ತುವನ್ನಾಗಿ ನೋಡದೆ ತಮ್ಮ ಮನಸ್ಥಿತಿ ಉತ್ತಮಗೊಳಿಸುವ ಮಾರ್ಗವಾಗಿ ನೋಡುತ್ತಿದ್ದಾರೆ. ಬಣ್ಣ ಬಣ್ಣದ ವಿನ್ಯಾಸ ಮತ್ತು ವಿಭಿನ್ನ ಪ್ರಿಂಟ್‌ಗಳನ್ನು ಧರಿಸುವುದರಿಂದ ಮನಸ್ಸಿಗೆ ಸಂತೋಷ ಸಿಗುತ್ತದೆ ಎಂಬುದು ಅವರ ನಂಬಿಕೆ.

ಡಿಜಿಟಲ್ ಪ್ರಭಾವ

ಈಗಿನವರಿಗೆ ಇನ್‌ಸ್ಟಾಗ್ರಾಮ್‌ನಂಥ ಸೋಶಿಯಲ್ ಮೀಡಿಯಾದಲ್ಲಿ ತಮ್ಮ ಫೋಟೊ ಅಥವಾ ವಿಡಿಯೊಗಳು ಎದ್ದು ಕಾಣುವುದು ಬಹಳ ಮುಖ್ಯ. ಸರಳ ಉಡುಪುಗಳಿಗಿಂತ ಅವರಿಗೆ ಸಂಕೀರ್ಣ ಪ್ರಿಂಟ್ ಮತ್ತು ಗಾಢ ಬಣ್ಣಗಳು ಪರದೆಯ ಮೇಲೆ ಹೆಚ್ಚು ಆಕರ್ಷಕವಾಗಿ ಕಾಣುತ್ತವೆ. ಈ ಫೋಟೊಜೆನಿಕ್ ಆಸಕ್ತಿಯೇ ಪ್ರಿಂಟ್‌ಮ್ಯಾಕ್ಸಿಂಗ್ ಫ್ಯಾಷನ್‌ನ ಜನಪ್ರಿಯತೆಗೆ ಮುಖ್ಯ ಕಾರಣ ಎನ್ನಲಾಗಿದೆ. ಈ ಟ್ರೆಂಡ್‌ನಲ್ಲಿ ಯಾವುದೇ ಕಟ್ಟುನಿಟ್ಟಿನ ನಿಯಮಗಳಿಲ್ಲ. ಅವರವರ ಕಲ್ಪನೆಗೆ ತಕ್ಕಂತೆ ಉಡುಪುಗಳನ್ನು ಮ್ಯಾಚ್ ಮಾಡಬಹುದು. ಇಂಥ ಫೋಟೊಗಳು ನೆನಪಿನ ಬುತ್ತಿಯಾಗಿ ಉಳಿಯುತ್ತವೆ. ಹೀಗೆ ತಂತ್ರಜ್ಞಾನ ಎಷ್ಟು ಮುಂದುವರಿದರೂ ಮನುಷ್ಯನಿಗೆ ನೈಜ ವಸ್ತುಗಳ ಮೇಲಿರುವ ಮೋಹ ಕಡಿಮೆಯಾಗುವುದಿಲ್ಲ ಎಂಬುದಕ್ಕೆ ಪ್ರಿಂಟ್‌ಮ್ಯಾಕ್ಸಿಂಗ್ ಅತ್ಯುತ್ತಮ ಉದಾಹರಣೆ. ಅತಿ ಹೆಚ್ಚು ವಿನ್ಯಾಸ ಮತ್ತು ಬಣ್ಣಗಳನ್ನು ಬಳಸಿ ತನ್ನದೇ ಆದ ವಿಶಿಷ್ಟ ಗುರುತು ಸೃಷ್ಟಿಸಿಕೊಳ್ಳುವ ಸಾಹಸಮಯ ಫ್ಯಾಷನ್ ಟ್ರೆಂಡ್ ಇದಾಗಿದೆ. ■

ವಿನ್ಯಾಸ ವೈವಿಧ್ಯ

- ಪ್ರಿಂಟ್‌ಮ್ಯಾಕ್ಸಿಂಗ್‌ನಲ್ಲಿ ಚಿರತೆ ಅಥವಾ ಹಾವಿನ ಚರ್ಮದಂಥ ಅನಿಮಲ್ ಪ್ರಿಂಟ್‌ಗಳು ಹೆಚ್ಚು ಪ್ರಚಲಿತದಲ್ಲಿವೆ.
- ವಿಭಿನ್ನ ರೇಖಾಗಣಿತದ ಆಕಾರಗಳಿರುವ ಜಿಯೋಮೆಟ್ರಿಕ್ ವಿನ್ಯಾಸ ಹಾಗೂ 70ರ ದಶಕದ ವರ್ಣರಂಜಿತ ಮತ್ತು ವಿಚಿತ್ರ ವಿನ್ಯಾಸಗಳು ಕೂಡ ಈ ಫ್ಯಾಷನ್‌ನ ವಿಶೇಷತೆ.
- ವಿಭಿನ್ನ ಪ್ರಿಂಟ್‌ಗಳ ಉಡುಪು ಧರಿಸುವಾಗ ಅವುಗಳಲ್ಲಿ ಯಾವುದಾದರೂ ಒಂದು ಬಣ್ಣ ಸಾಮ್ಯತೆ ಇರಲಿ. ಇದು ಗೊಂದಲದ ನಡುವೆಯೂ ಅಂದವಾಗಿ ಕಾಣುತ್ತದೆ.
- ಇಂಥ ವಿನ್ಯಾಸದ ಉಡುಪಿಗೆ ಪ್ರಿಂಟ್ ಇರುವ ಬ್ಯಾಗ್, ಸ್ಕಾರ್ಫ್, ಬೂಟ್‌ಗಳನ್ನು ಧರಿಸುವ ಮೂಲಕ ನಿಮ್ಮ ಫ್ಯಾಷನ್ ಲುಕ್ ಅನ್ನು ಇನ್ನಷ್ಟು ಗರಿಷ್ಠಗೊಳಿಸಬಹುದು.
- ಒಂದು ದೊಡ್ಡ ಪ್ರಿಂಟ್ ಇರುವ ಉಡುಪಿನ ಜತೆಗೆ ಸಣ್ಣ ವಿನ್ಯಾಸದ ಪ್ರಿಂಟ್ ಬಳಕೆಯು ಸಮತೋಲನ ಕಾಪಾಡಲು ನೆರವಾಗುತ್ತದೆ.
- ಪ್ರಿಂಟ್‌ಮ್ಯಾಕ್ಸಿಂಗ್ ಉಡುಪು ಇರುವುದೇ ಎಲ್ಲರ ಗಮನ ಸೆಳೆಯಲು. ಆದ್ದರಿಂದ ನೀವು ಧರಿಸಿದ ಉಡುಪಿನ ಬಗ್ಗೆ ನಿಮಗೆ ಹೆಮ್ಮೆ ಮತ್ತು ಆತ್ಮವಿಶ್ವಾಸವಿರಲಿ.

ಮರಳಿ ಬಂದಿದೆ 90ರ ವಿನ್ಯಾಸ ವೈಭವ

ಈ ಬೇಸಿಗೆಯ ಫ್ಯಾಷನ್ ಲೋಕದಲ್ಲಿ 90ರ ದಶಕದ ಸ್ಟೈಲಿಶ್ ಉಡುಪುಗಳು ಗಮನ ಸೆಳೆದಿವೆ.

ಲವಲvk ಸುದ್ದಿಲೋಕ
feedbacklvk@vijaykarnataka.com

ಕೂಲ್ ಚಾಯ್

ಅಮ್ಮನ ಯೌವನದ ಕಾಲದ ಫ್ಯಾಷನ್ ಹರೆಯದ ಮಗಳಿಗೆ ಈಗ ಆಪ್ತ. ಹೀಗೆ ಮಗಳ ತಲೆಮಾರಿನ ಅಭಿರುಚಿಗೆ ತಕ್ಕಂತೆ ಹಳೆಯ ಫ್ಯಾಷನ್ ಬದಲಾಗಿ ಮತ್ತೆ ಹೊಸದಾಗಿ ಕಂಗೊಳಿಸುತ್ತದೆ. ಫ್ಯಾಷನ್ ಜಗತ್ತಿನಲ್ಲಿ ಹಳೆಯ ಶೈಲಿಗಳು ಹೊಸ ರೂಪದಲ್ಲಿ ಮರಳುವುದು ಸಹಜ. ಈ ನಿಟ್ಟಿನಲ್ಲಿ 90ರ ದಶಕದಲ್ಲಿ ಕಂಡಿದ್ದ ಸರಳ ಮತ್ತು ಸೌಮ್ಯ ಶೈಲಿ ಈ ಬಾರಿಯ ಬೇಸಿಗೆಯಲ್ಲಿ ಮತ್ತೆ ಮುಂಚೂಣಿಗೆ ಬಂದಿದೆ. ಆರಾಮದಾಯಕವೇ ಈ ಉಡುಪುಗಳ ವಿಶೇಷ ಗುಣ.

ಸ್ಲಿಪ್ ಡ್ರೆಸ್: ಸರಳತೆಯೇ ಉಡುಪಿನ ಸೊಬಗು. ಒಳಉಡುಪಿಗೆ ಸೀಮಿತವಾಗಿದ್ದ ಸ್ಲಿಪ್ ಈಗ ಪ್ರಮುಖ ದಿರಸು. ವೈವಿಧ್ಯಮಯ ಬಣ್ಣ, ಸ್ಯಾಟಿನ್ ಮೆಟೀರಿಯಲ್‌ನಲ್ಲಿ ಇದು ಕ್ಯೂಟ್ ಲುಕ್ ನೀಡುತ್ತದೆ. 90ರ ದಶಕದಲ್ಲಿ ಹಾಲಿವುಡ್ ನಟಿಯರು ಇದನ್ನು ಜನಪ್ರಿಯಗೊಳಿಸಿದ್ದರು. ಪಾರ್ಟಿಗಳಿಗೆ ಇದು ಹೇಳಿ ಮಾಡಿಸಿದ ಉಡುಪು.

ಮಿನಿ ಫ್ರಾಕ್: ಚಿಕ್ಕದಾದ ಮತ್ತು ತುಸು ಫ್ರಿಲ್ಸ್ ಇರುವ ಮಿನಿ ಫ್ರಾಕ್‌ಗಳು ಬೇಸಿಗೆಯ ಬಿಸಿಲಿಗೆ ಆರಾಮದಾಯಕ. ಸ್ಟೈಲಿಶ್ ಲುಕ್ ನೀಡುವ ಇದು ಪಾರ್ಟಿಗಳಿಗೆ ಸೂಕ್ತ.

ಸ್ಪಾಗೆಟ್ಟಿ ಸ್ಟ್ರಾಪ್: ಬೇಸಿಗೆಯಲ್ಲಿ ತರುಣಿಯರ ನೆಚ್ಚಿನ ಆಯ್ಕೆಯಾಗಿರುವ ಸ್ಪಾಗೆಟ್ಟಿ ಸ್ಟ್ರಾಪ್ ತೆಳು ಸ್ಟ್ರಾಪ್‌ಗಳನ್ನು ಹೊಂದಿರುತ್ತದೆ. ಇದು 90ರ ದಶಕದ ಕ್ಲಾಸಿಕ್ ಫ್ಯಾಷನ್ ಆಗಿದ್ದು, ಹಗಲಿನಲ್ಲಿ ಕ್ಯಾಶುವಲ್ ಆಗಿ ಮತ್ತು ರಾತ್ರಿಯ ಪಾರ್ಟಿಗಳಿಗೆ ಹೀಲ್ಸ್ ಜೊತೆ ಇದನ್ನು ಧರಿಸಬಹುದು.

ವೆಲ್ವೆಟ್ ಉಡುಪು: ರಾಜ ಗಾಂಭೀರ್ಯದ ಲುಕ್ ನೀಡುವ ಇದು ಈ ಬೇಸಿಗೆಯಲ್ಲಿ ವೆಲ್ವೆಟ್ ಬಾಡಿಕಾನ್ ಡ್ರೆಸ್ ರೂಪದಲ್ಲಿ ಮಾರುಕಟ್ಟೆಗೆ ಲಗ್ಗೆ ಇಟ್ಟಿದೆ. ಇದು ಯುವತಿಯರಿಗೆ ಗಂಭೀರ ಮತ್ತು ರಿಚ್ ಲುಕ್ ನೀಡುತ್ತದೆ. ಉದ್ದನೆಯ ವೆಲ್ವೆಟ್ ಗೌನ್‌ಗಳು ಮದುವೆ ಸಮಾರಂಭಗಳಿಗೂ ಅತ್ಯುತ್ತಮ ಆಯ್ಕೆ.

ಕಾಲಂ ಡ್ರೆಸ್: ಹೆಸರೇ ಸೂಚಿಸುವಂತೆ ಇದು ಕಂಬದಂತೆ ನೇರವಾದ ಮತ್ತು ದೇಹಕ್ಕೆ ಅಂಟಿಕೊಳ್ಳುವಂತಹ ವಿನ್ಯಾಸ. ಎತ್ತರದ ನಿಲುವಿನವರಿಗೆ ಮತ್ತು ಸ್ಲಿಮ್ ಆಗಿ ಕಾಣಬಯಸುವವರಿಗೆ ಕಾಲಂ ಡ್ರೆಸ್ ಹೇಳಿ ಮಾಡಿಸಿದ ವಿನ್ಯಾಸ. ■

RNI No. KARKAN/2016/71628
Vol. 11 Issue no. 130
This newspaper/periodical is published by Lokesh K V from No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru-560011. (Ph: 080-40877666) on behalf of Metropolitan Media Company Limited, edited by Sudarshan Channangihalli and printed by (a) Sekar S at Bennett Coleman & Co Ltd., The Times of India Press, No. 9/10/11-A, 4th Main, KIADB Bommasandra Industrial Area, Anekal Taluk, Bangalore - 560 099 (Ph: 080-42200500). (b) Murthy D from Metropolitan Media Company Limited, Plot No.34/B, Hootagalli Industrial Area, Belavadi post, Mysuru - 570 018. (c) Narappa G from Metropolitan Media Company Limited., Sy. No.45/2, Savalanga Road, Navule, Kasaba Hobli, Shivamogga- 577 204. (d) Siddappa Kashibadiger from Metropolitan Media Company Limited, Plot No 33 R.S. No. 536, Honaga Industrial Estate, Honaga , Belagavi Taluk, Belagavi 591156. (e) Sanjay Kanekal from Metropolitan Media Company Limited Plot No. 15 & 16, KIADB Rayapur Industrial Area, Hubballi - 580 009. (f) R Gururaj from Metropolitan Media Co. Ltd., Plot No. 9, KSSIDC, Industrial Area, Kaladagi Road, Vidyagiri, Bagalakote- 587102 (g)Raghavendra Rao from Metropolitan Media Company Limited., Plot No. 224, in Sy. No. 41/2, 41/B & 42, Kapnoor II Stage Industrial Area, Kalaburagi- 585 104.(h) Shivakumar V Hiremath from Metropolitan Media Company Limited., Plot No. 124 (part) and Plot No. 125 (part) of Sy. No. 132/1, Oddarahatti village, Gangavathi (i) Girish K from Metropolitan Media Company Limited No. 284 (Part), 285, 286 & 287, Baikampady Industrial Area, Mangaluru – 575 011." © All Rights Reserved. Reproduction in whole or part without permission is prohibited.

ಚಿಕಿತ್ಸೆ ಫಲಿಸದೇ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಕೊನೆಯುಸಿರು | ಇಂದು ಚಳ್ಳಕೆರೆಯಲ್ಲಿ ಅಂತ್ಯಕ್ರಿಯೆ

ಅಜಾತಶತ್ರು ಸಚಿವ ಸುಧಾಕರ್ ವಿಧಿವಶ

■ **ವಿಕ ಸುದ್ದಿಲೋಕ** ಹಿರಿಯೂರು (ಚಿತ್ರದುರ್ಗ)

ಹಿರಿಯೂರು ಶಾಸಕ, ರಾಜ್ಯ ಸರಕಾರದ ಯೋಜನೆ ಮತ್ತು ಸಾಂಖ್ಯಿಕ ಸಚಿವರು ಹಾಗೂ ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್ (66) ಭಾನುವಾರ ಬೆಂಗಳೂರಿನ ಕಿಮ್ಸ್ ಆಸ್ಪತ್ರೆಯಲ್ಲಿ ನಿಧನರಾದರು.

ತೀವ್ರ ಅನಾರೋಗ್ಯ ಹಿನ್ನೆಲೆ ಕಳೆದ ಒಂದೂವರೆ ತಿಂಗಳಿಂದ ಬೆಂಗಳೂರಿನ ಕಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಚಿಕಿತ್ಸೆ ಫಲಕಾರಿಯಾಗದೆ ಭಾನುವಾರ ಮುಂಜಾನೆ 3.15ರ ಸುಮಾರಿಗೆ ವಿಧಿವಶರಾಗಿದ್ದಾರೆ. ದಶಕಗಳ ಕಾಲ ಸಕ್ರಿಯ ರಾಜಕಾರಣದಲ್ಲಿದ್ದ ಸುಧಾಕರ್ ಅವರು ನಾಲ್ಕು ಬಾರಿ ಶಾಸಕರಾಗಿ, ಎರಡು ಬಾರಿ ಸಚಿವರಾಗಿದ್ದರು.

ಮೊಣಕಾಲುನೋವಿನಿಂದ ಬಳಲುತ್ತಿದ್ದ ಅವರು ಮಾ.26ರಂದು ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗೆ ದಾಖಲಾಗಿದ್ದರು. ಮಾ.27ರಂದು ಮೊಣಕಾಲು ನೋವಿನ ಶಸ್ತ್ರಚಿಕಿತ್ಸೆ ಮಾಡಿಸಿದ್ದು, ಐಸಿಯು ವಾರ್ಡ್‌ನಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾಗ ಕಾಣಿಸಿಕೊಂಡ ಶ್ವಾಸಕೋಶದ ಸೋಂಕು ಉಲ್ಬಣಿಸುತ್ತಾ ಹೋಯಿತು. ಸೋಂಕು ಕಡಿಮೆಯಾಗದ ಹಿನ್ನೆಲೆ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯಲ್ಲಿನ ಕಿಮ್ಸ್ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿತ್ತು. ವೈದ್ಯರು ತೀವ್ರ ನಿಗಾವಹಿಸಿ ಚಿಕಿತ್ಸೆ ನೀಡಿದರೂ ಚಿಕಿತ್ಸೆ ಫಲಕಾರಿಯಾಗಲಿಲ್ಲ,

ಇಂದು ಅಂತ್ಯಕ್ರಿಯೆ

ಮೃತರಿಗೆ ಪತ್ನಿ ಹರ್ಷಿಣಿ ಸುಧಾಕರ್, ಒಬ್ಬ ಪುತ್ರ, ಒಬ್ಬ ಪುತ್ರಿ ಇದ್ದಾರೆ. ಸಚಿವ ಡಿ.ಸುಧಾಕರ್ ಅವರ ಕುಟುಂಬದ ಇಚ್ಛೆಯಂತೆ ಮತ್ತು ಜೈನ ಸಮುದಾಯದ ಸಂಪ್ರದಾಯದಂತೆ ಚಳ್ಳಕೆರೆಯ ಚಿತ್ರದುರ್ಗ ರಸ್ತೆಯ ಸಚಿವರ ಸೆಟಲ್ ಬ್ಯಾಡ್ಮಿಂಟನ್ ಕೋರ್ಟ್ ಆವರಣದಲ್ಲಿ ಮೇ 11ರ ಸೋಮವಾರ ಸಂಜೆ ಸರಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆ ನಡೆಸಲು ಜಿಲ್ಲಾಡಳಿತ ಸಿದ್ಧತೆ ಮಾಡಿಕೊಂಡಿದೆ.

ಬೆಂಗಳೂರಿನ ಸದಾಶಿವ ನಗರದಲ್ಲಿ ಸಚಿವ ಸುಧಾಕರ್ ಪಾರ್ಥಿವ ಶರೀರಕ್ಕೆ ರಾಜ್ಯಪಾಲ ಗೆಹ್ಲೋಟ್, ಸಿಎಂ ಸಿದ್ದರಾಮಯ್ಯ ಅಂತಿಮ ನಮನ ಸಲ್ಲಿಸಿದರು.

3 ದಿನ ಶೋಕಾಚರಣೆ, ದುರ್ಗದಲ್ಲಿ ರಜೆ

ಸಕಲ ಸರಕಾರಿ ಗೌರವದೊಂದಿಗೆ ಚಳ್ಳಕೆರೆಯಲ್ಲಿ ಸುಧಾಕರ್ ಪಾರ್ಥಿವ ಶರೀರದ ಅಂತ್ಯ ಸಂಸ್ಕಾರ ಸೋಮವಾರ ನಡೆಯಲಿದೆ. ಸಿಎಂ, ಡಿಸಿಎಂ, ಸಚಿವರುಗಳು ಪಾಲ್ಗೊಳ್ಳಲಿದ್ದಾರೆ. ಸುಧಾಕರ್ ನಿಧನದ ಹಿನ್ನೆಲೆಯಲ್ಲಿ ರಾಜ್ಯದಲ್ಲಿ 3 ದಿನಗಳ ಶೋಕಾಚರಣೆ ಘೋಷಿಸಲಾಗಿದೆ. ಮೃತರ ಗೌರವಾರ್ಥವಾಗಿ ಮೇ 11ರಂದು ಚಿತ್ರದುರ್ಗ ಜಿಲ್ಲೆಯ ಸಾರ್ವಜನಿಕ ಸರಕಾರಿ ಕಚೇರಿಗಳು, ಶಾಲಾ ಕಾಲೇಜುಗಳು, ಸರಕಾರಿ ಸ್ವಾಮ್ಯದ ಅಂಗ ಸಂಸ್ಥೆಗಳು ಒಳಗೊಂಡಂತೆ ಸಾರ್ವಜನಿಕ ರಜೆ ಘೋಷಿಸಿದೆ.

20 ವರ್ಷದಿಂದ ಅಧ್ಯಕ್ಷ

20 ವರ್ಷದಿಂದಲೂ ನಿರಂತರವಾಗಿ ಚಿತ್ರದುರ್ಗ ಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದರು.

ಜನನ: 28.3.1961 ನಿಧನ: 10.5.2026

ಉದ್ಯಮಿಯಾಗಿ ಸೇವೆ, ರಾಜಕೀಯ ಪ್ರವೇಶ

1961ರ ಮಾರ್ಚ್ 28ರಂದು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಯಲ್ಲಿ ದಶರಥಯ್ಯ ಹಾಗೂ ಕಾಂಚನಮಾಲಮ್ಮ ಅವರ ಪುತ್ರನಾಗಿ ಜನನ. ರಾಜಕೀಯಕ್ಕೂ ಬರುವ ಮುನ್ನ ಸೆವೆನ್ ಹಿಲ್ಸ್ ಎಂಬ ಮದ್ಯ ತಯಾರಿಕ ಘಟಕದ ಉದ್ಯಮಿಯಾಗಿದ್ದರು. ಇದರ ನಡುವೆ ತಮ್ಮ ಚಿಕ್ಕಪ್ಪ, ಶಾಸಕರಾಗಿದ್ದ ಎನ್.ಜಯಣ್ಣ ಅವರ ಆಶ್ರಯದಲ್ಲಿ ರಾಜಕೀಯ ರಂಗ ಪ್ರವೇಶ ಮಾಡಿದ್ದರು. ಎನ್.ಜಯಣ್ಣ ವಿಧಾನಸಭೆ ಚುನಾವಣೆಗೆ ಸ್ಪರ್ಧೆ ಮಾಡಿದಾಗ ಇವರ ಗೆಲುವಿಗೆ 3 ಬಾರಿ ಟೊಂಕಕಟ್ಟಿ ದುಡಿದರು. ಡಿ.ಕೆ. ಶಿವಕುಮಾರ್ ಜತೆ ವ್ಯವಹಾರಿಕ ಪಾಲುದಾರರಾಗಿದ್ದರಿಂದ ನಂತರದ ದಿನಗಳಲ್ಲಿ ಡಿಕೆಶಿ ಆಪ್ತನಾಗಿ ಗುರುತಿಸಿಕೊಂಡಿದ್ದರು. ರಾಜಕೀಯ ಅಲ್ಲದೇ ಖಾಸಗಿ ಶಾಲೆಗಳು ಹಾಗೂ ಹೊಯ್ಸಳ ಬ್ಯಾಂಕ್ ನಡೆಸುತ್ತಿದ್ದರು. ಸುಧಾಕರ್, ಹಿಂದುಳಿದ ವರ್ಗದ ಜನನಾಯಕ ಎಂದು ಹೆಸರು ಪಡೆದಿದ್ದರು.

ತಿಪ್ಪೇರುದ್ರಸ್ವಾಮಿಯ ಪರಮ ಭಕ್ತ

ನಾಯಕನಹಟ್ಟಿ: ಚಿತ್ರದುರ್ಗ ಜಿಲ್ಲೆಯ ನಾಯಕನಹಟ್ಟಿಯ ಗುರು ತಿಪ್ಪೇರುದ್ರಸ್ವಾಮಿ ದೇವರ ಪರಮ ಭಕ್ತರಾದ ಡಿ.ಸುಧಾಕರ್ ಎಲ್ಲ ಧರ್ಮಗಳ ಬಗ್ಗೆ ವಿಶೇಷ ಗೌರವ ಮತ್ತು ಅಭಿಮಾನ ಹೊಂದಿದ್ದರು.

ಹಟ್ಟಿ ತಿಪ್ಪೇಶನ ಜಾತ್ರೆಯಲ್ಲಿ ಆರು ಬಾರಿ ಮುಕ್ತಿ ಬಾವುಟವನ್ನು ಪಡೆದಿದ್ದಾರೆ. 2024 ರಲ್ಲಿ 61 ಲಕ್ಷ ರೂ.ಗೆ ಮುಕ್ತಿಬಾವುಟ ಪಡೆದಿದ್ದರು. ಮುಕ್ತಿಬಾವುಟದ ಮೂಲಕ ಒಟ್ಟಾರೆ 1.85 ಕೋಟಿ ರೂ. ಭಕ್ತಿಯ ಕಾಣಿಕೆ ನೀಡಿದ್ದಾರೆ. ಮುಕ್ತಿ ಬಾವುಟವನ್ನು ಪಡೆದರೆ ಅಧಿಕಾರ, ಅಂತಸ್ತು, ಆರೋಗ್ಯ ಹೆಚ್ಚುತ್ತದೆ. ದೇವರ ಆಶೀರ್ವಾದವಿರುತ್ತದೆ ಎನ್ನುವ ನಂಬಿಕೆಯನ್ನು ಡಿ.ಸುಧಾಕರ್ ಹೊಂದಿದ್ದರು. ಆರು ಬಾರಿ ಮುಕ್ತಿ ಬಾವುಟವನ್ನು ಪಡೆದಿದ್ದರು. ಮುಕ್ತಿ ಬಾವುಟ ಪಡೆದಾಗಲೆಲ್ಲಾ (2010, 2012, 2013, 2015, 2023 ಮತ್ತು 2024ರಲ್ಲಿ)ಅವರಿಗೆ ಒಂದಲ್ಲ ಒಂದು ರಾಜಕೀಯ ಸ್ಥಾನಮಾನ ಲಭಿಸಿದ್ದವು.

ಪ್ರಮಾಣವಚನ ಮುಂದೂಡಿಕೆ

ಸಚಿವ ಸುಧಾಕರ್ ನಿಧನದ ಹಿನ್ನೆಲೆಯಲ್ಲಿ ಸೋಮವಾರ ನಡೆಯಬೇಕಿದ್ದ ನೂತನ ಶಾಸಕರಾದ ಉಮೇಶ್ ಮೇಟಿ ಹಾಗೂ ಸಮರ್ಥ್ ಶಾಮನೂರು ಪ್ರಮಾಣವಚನ ಸ್ವೀಕಾರ ಸಮಾರಂಭ ಮುಂದೂಡಿಕೆಯಾಗಿದೆ.

ಸಂಪುಟದಲ್ಲಿ ಒಟ್ಟು 3 ಸ್ಥಾನ ಖಾಲಿ

ಸುಧಾಕರ್ ನಿಧನದಿಂದಾಗಿ ರಾಜ್ಯ ಸಂಪುಟದಲ್ಲಿ 3 ಸ್ಥಾನ ಖಾಲಿಯಾದಂತಾಗಿದೆ. ಈ ಮೊದಲು ಬಿ.ನಾಗೇಂದ್ರ ರಾಜೀನಾಮೆ ಮತ್ತು ಕೆ.ಎನ್.ರಾಜಣ್ಣ ವಜಾದಿಂದ ಸಂಪುಟದಲ್ಲಿ 2 ಸ್ಥಾನಗಳು ತೆರವಾಗಿದ್ದವು. ಈಗ ಮತ್ತೊಂದು ಸ್ಥಾನ ತೆರವಾದಂತಾಗಿದೆ.

ರಾಜಕೀಯ ಹೆಜ್ಜೆ ಗುರುತುಗಳು

- 2004 ಮೊದಲ ಬಾರಿಗೆ ಚಳ್ಳಕೆರೆ ಕ್ಷೇತ್ರದಿಂದ ಕಾಂಗ್ರೆಸ್ ಶಾಸಕ
- 2008 ಹಿರಿಯೂರು ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಭರ್ಜರಿ ಗೆಲುವು. (ಬಳಿಕ ಬಿಜೆಪಿ ಸರಕಾರ ಬೆಂಬಲಿಸಿ ಬಿಎಸ್‌ವೈ ಸಂಪುಟದಲ್ಲಿ ನಾಲ್ಕು ಖಾತೆಗಳ ನಿರ್ವಹಣೆ)
- 2013 ಮತ್ತೆ ಕಾಂಗ್ರೆಸ್ ಪಕ್ಷಕ್ಕೆ ಮರಳಿ, ಹಿರಿಯೂರು ಕ್ಷೇತ್ರದಿಂದ ಜೆಡಿಎಸ್‌ನ ಎ. ಕೃಷ್ಣಪ್ಪ ವಿರುದ್ಧ ಗೆಲುವು
- 2016 ಕಿಯೋನಿಕ್ಸ್ ಅಧ್ಯಕ್ಷರಾಗಿ ನೇಮಕ
- 2018 ಹಿರಿಯೂರು ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಪೂರ್ಣಿಮಾ ಶ್ರೀನಿವಾಸ್ ವಿರುದ್ಧ ಸೋಲು
- 2023 ಮತ್ತೆ ಹಿರಿಯೂರು ಕ್ಷೇತ್ರದಿಂದ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಭರ್ಜರಿ ಜಯ
- 2023 ಸಿಎಂ ಸಿದ್ದರಾಮಯ್ಯ ಸರಕಾರದ ಸಂಪುಟದಲ್ಲಿ ಸಚಿವ, ಜಿಲ್ಲಾ ಉಸ್ತುವಾರಿ ಸಚಿವ

ಆಪ್ತನ ನೆನೆದು ಕಣ್ಣೀರಾದ ಡಿಸಿಎಂ

ಹಿರಿಯೂರು (ಚಿತ್ರದುರ್ಗ): ನಗರದ ನೆಹರೂ ಮೈದಾನದಲ್ಲಿ ಭಾನುವಾರ ಸಚಿವ ಡಿ.ಸುಧಾಕರ್ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆಯಲು ಆಗಮಿಸಿದ್ದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಆಪ್ತನನ್ನು ನೆನೆದು ಕಣ್ಣೀರು ಹಾಕಿದರು.

''ನನ್ನ ಆತ್ಮೀಯ ಸ್ನೇಹಿತ ಇಷ್ಟು ಬೇಗ ಬಿಟ್ಟು ಹೋಗುತ್ತಾನೆಂದು ಎಣಿಸಿರಲಿಲ್ಲ. ಆಸ್ಪತ್ರೆ ಸೇರುವ ಎರಡು ದಿನ ಹಿಂದಷ್ಟೇ ನಾವು ಭೇಟಿಯಾಗಿದ್ದೆವು. ಮೊಣಕಾಲು ನೋವಿನ ಶಸ್ತ್ರಚಿಕಿತ್ಸೆ ನಂತರ ಆಸ್ಪತ್ರೆಯಿಂದ ಕಳುಹಿಸುವಾಗ ವೈದ್ಯರು ಶ್ವಾಸಕೋಶ ಸೋಂಕು ಬಗ್ಗೆ ತಿಳಿಸಿದ್ದರು,'' ಎಂದರು.

''ನಾವಿಬ್ಬರೂ ಚಿಕ್ಕವಯಸ್ಸಿನಿಂದ ಸ್ನೇಹಿತರು. ರೈತರ ಬಗ್ಗೆ ವಿಶೇಷ ಕಾಳಜಿ ಹೊಂದಿದ್ದ ಸುಧಾಕರ್, ಭದ್ರಾ ಯೋಜನೆ ಬಗ್ಗೆ ಅತೀವ ಕಾಳಜಿ ಹೊಂದಿದ್ದರು. ಆದರೆ, ಉದ್ಘಾಟನೆ ಮಾಡುವ ವೇಳೆ ಅವರೇ ಇಲ್ಲ. ಹಾಗಾಗಿ ನೀರಾವರಿ ಯೋಜನೆಗೆ ಅವರ ಹೆಸರಿಡಲು ಆಲೋಚನೆ ಮಾಡಲಾಗುವುದು. ಪಕ್ಷ ಮತ್ತು ಇಡೀ ಸರಕಾರ ಹೇಗೆ ಸುಧಾಕರ್ ಬೆಂಬಲಕ್ಕೆ ನಿಂತಿದ್ದವೋ ಹಾಗೇ ಅವರ ಕುಟುಂಬದ ಬೆನ್ನಿಗೆ ನಿಲ್ಲುತ್ತೇವೆ,'' ಎಂದರು. ''ಪಕ್ಷದ ಸದಸ್ಯತ್ವ ಯೋಜನೆಯಲ್ಲಿ ಅತಿ ಹೆಚ್ಚು ಸದಸ್ಯರ ನೋಂದಣಿ ಮಾಡಿಸಿದ್ದರು. ರಾಹುಲ್ ಅವರೂ ಸುಧಾಕರ್ ಕುಟುಂಬ ಸದಸ್ಯರೊಂದಿಗೆ ಮಾತನಾಡಲಿದ್ದಾರೆ,'' ಎಂದು ಡಿಕೆಶಿ ತಿಳಿಸಿದರು.

ಡಿ.ಸುಧಾಕರ್ ಪುತ್ರ ಸುಹಾಸ್ ಅವರನ್ನು ಸಂತೈಸಿದ ಡಿಸಿಎಂ ಡಿ.ಕೆ. ಶಿವಕುಮಾರ್.

ಸಿಎಂ ಸಹಿತ ಗಣ್ಯರ ಸಂತಾಪ

ಬೆಂಗಳೂರು: ಸಚಿವ ಡಿ.ಸುಧಾಕರ್ ನಿಧನಕ್ಕೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಸೇರಿದಂತೆ ಸಂಪುಟದ ಸದಸ್ಯರು, ಗಣ್ಯರು ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದು ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದರು. ''ಸಚಿವ ಡಿ.ಸುಧಾಕರ್ ಅಗಲಿಕೆಯಿಂದ ರಾಜಕೀಯ ಕ್ಷೇತ್ರಕ್ಕೆ ದೊಡ್ಡ ನಷ್ಟವಾಗಿದೆ. ಸಹಕಾರ ಕ್ಷೇತ್ರಕ್ಕೂ ಸುಧಾಕರ್ ಕೊಡುಗೆಯಿತ್ತು. ಸುಧಾಕರ್ ಆತ್ಮಕ್ಕೆ ಶಾಂತಿ ಸಿಗಲಿ. ಕುಟುಂಬದವರಿಗೆ ಈ ದುಃಖ ಭರಿಸುವ ಶಕ್ತಿಯನ್ನು ಭಗವಂತ ನೀಡುವಂತೆ ಪ್ರಾರ್ಥಿಸುತ್ತೇನೆ,'' ಎಂದು ಸಿಎಂ ಸಿದ್ದರಾಮಯ್ಯ ತಮ್ಮ ಶೋಕ ಸಂದೇಶದಲ್ಲಿ ಹೇಳಿದ್ದಾರೆ. ''ಸುಧಾಕರ್ ಅವರು ಜೈನ ಸಮುದಾಯಕ್ಕೆ ಸೇರಿದವರಾಗಿದ್ದರು. ಅವರ ಕ್ಷೇತ್ರದಲ್ಲಿ (ಹಿರಿಯೂರು) ಸುಮಾರು 500 ಮನೆಗಳಿಗೂ ಕಡಿಮೆ ಜೈನ ಮತಗಳಿರುವ ಮನೆಗಳಿರಬಹುದು. ಆದರೆ, ಅಲ್ಲಿದ್ದ ಜನಪ್ರಿಯತೆಯಿಂದ ಪದೇಪದೆ ಗೆದ್ದು ಬರುತ್ತಿದ್ದರು,'' ಎಂದು ಸಚಿವ ಡಾ. ಪರಮೇಶ್ವರ್ ಸ್ಮರಿಸಿದರು.

ಸಂಖ್ಯಾಬಲ ಇಲ್ಲದಿದ್ದರೂ ಜನಬಲದಿಂದ ಗೆಲ್ಲುತ್ತಿದ್ದರು

■ **ಎಂ.ಎನ್.ಅಹೋಬಳಪತಿ** ಚಿತ್ರದುರ್ಗ
Ahobalapathy.Narayanappa@timesgroup.com

ಜಾತಿ ಮತ್ತು ಸಂಖ್ಯಾಬಲವೇ ಪ್ರಧಾನವಾಗಿರುವ ಇಂದಿನ ರಾಜಕಾರಣದಲ್ಲಿ, ಕೇವಲ ಜನಪರ ಕಾಳಜಿ ಮತ್ತು ಅಭಿವೃದ್ಧಿ ಮಂತ್ರದ ಮೂಲಕ ಅಸಾಧ್ಯವಾದುದನ್ನು ಸಾಧ್ಯವಾಗಿಸಿ ತೋರಿಸಿದವರು ಸಚಿವ ಡಿ.ಸುಧಾಕರ್. ಜಿಲ್ಲಾ ಉಸ್ತುವಾರಿ ಸಚಿವ ಸುಧಾಕರ್ ಅವರು ತಮ್ಮ ಸಮುದಾಯ ಮೀರಿ ಬೆಳೆದ ನಾಯಕ. ಎಲ್ಲರನ್ನೂ ತಬ್ಬಿಕೊಳ್ಳುವ ಗುಣ ಅವರ ರಾಜಕೀಯ ಮತ್ತು ನಾಯಕತ್ವಕ್ಕೆ ಸ್ಥಿರತೆ ತಂದುಕೊಟ್ಟಿತ್ತು.

ಡಿ.ಸುಧಾಕರ್ ಅವರು ಅಲ್ಪಸಂಖ್ಯಾತ ಜೈನ ಸಮುದಾಯಕ್ಕೆ ಸೇರಿದವರಾದರೂ, ಅವರು ರಾಜಕೀಯ ನೆಲೆ ಕಂಡುಕೊಂಡಿದ್ದು ಮಾತ್ರ ದಲಿತರು ಮತ್ತು ಹಿಂದುಳಿದ ವರ್ಗಗಳೇ ಪ್ರಧಾನವಾಗಿರುವ ಚಳ್ಳಕೆರೆ ಮತ್ತು ಹಿರಿಯೂರು ಕ್ಷೇತ್ರದಲ್ಲಿ. ಜಾತಿ ಪ್ರಾಬಲ್ಯದ ಅಳುಕು ಇಲ್ಲದೇ, ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುವ ಅವರ 'ಒಳಗೊಳ್ಳುವ' ಡೈನಾಮಿಕ್ ಗುಣವೇ ಅವರನ್ನು ಒಬ್ಬ ಅಜಾತಶತ್ರು ನಾಯಕನನ್ನಾಗಿ ರೂಪಿಸಿತ್ತು.

ವ್ಯವಹಾರಿಕ ಹಿನ್ನೆಲೆಯ ಕುಟುಂಬದಿಂದ ಬಂದ ಸುಧಾಕರ್ ಅವರಿಗೆ ರಾಜಕೀಯ ಪಟ್ಟುಗಳು ರಕ್ತಗತವಾಗಿ ಬಂದಿದ್ದವು. ಅವರ ಚಿಕ್ಕಪ್ಪ ಎನ್.ಜಯಣ್ಣ 1978 ರಿಂದ 1983 ಹಾಗೂ 1989 ರಿಂದ 1994 ರವರೆಗೆ ಕಾಂಗ್ರೆಸ್ ಶಾಸಕರಾಗಿದ್ದರು. ಸುಧಾಕರ್ 2004ರಲ್ಲಿ ಮಾಜಿ ಶಾಸಕ ತಿಪ್ಪೇಸ್ವಾಮಿ, ಬಸವರಾಜ ಮಂಡಿಮಠರಂಥ ದಿಗ್ಗಜರನ್ನು ಚಳ್ಳಕೆರೆಯಲ್ಲಿ ಸೋಲಿಸಿ ವಿಧಾನಸಭೆ ಪ್ರವೇಶಿಸಿದರು. ನಂತರ ಕ್ಷೇತ್ರ ಪುನರ್‌ವಿಂಗಡಣೆಯಾದಾಗ 2008ರಲ್ಲಿ ಹಿರಿಯೂರಿನತ್ತ ಮುಖ ಮಾಡಿದಾಗ ಕಾಂಗ್ರೆಸ್ ಟಿಕೆಟ್ ನೀಡಲಿಲ್ಲ, ಆಗ ಜೈನ ಮತಗಳು ನಗಣ್ಯವಾಗಿದ್ದರೂ, ಯಾದವ, ಕುಂಚಿಟಿಗ ಮತ್ತು ಮಾದಿಗ ಸಮುದಾಯದ ಪ್ರಬಲ ಅಭ್ಯರ್ಥಿಗಳ ಎದುರು ಅಚ್ಚರಿಯ ಗೆಲುವು ಸಾಧಿಸಿ ರಾಜಕೀಯ ಲೆಕ್ಕಾಚಾರ ಬುಡಮೇಲು ಮಾಡಿದರು.

ಇದು ರಾಜಕೀಯವಾಗಿ ಡಿ.ಸುಧಾಕರ್ ಅವರಿಗೆ ಆತ್ಮವಿಶ್ವಾಸ ತಂದುಕೊಟ್ಟ ಗೆಲುವಾಗಿತ್ತು. ಅದೇ ವೇಳೆ ಅತಂತ್ರವಾಗಿದ್ದ ಬಿಜೆಪಿಗೆ ಡಿ.ಸುಧಾಕರ್ ಸೇರಿದಂತೆ ಐವರು ಶಾಸಕರು ಬೆಂಬಲಿಸಿ, ದಕ್ಷಿಣ ಭಾರತದಲ್ಲಿ ಬಿಜೆಪಿ ಸರಕಾರ ರಚಿಸಲು ವೇದಿಕೆ ಕಲ್ಪಿಸಿದ ಹೆಗ್ಗಳಿಕೆಗೂ ಪಾತ್ರರಾದರು. ಅದೇ ಸರಕಾರದಲ್ಲಿ ಸಮಾಜ ಕಲ್ಯಾಣ ಸಚಿವರಾದರು.

ಸವಾಲಿನ ಚುನಾವಣೆಯಲ್ಲೂ ಗೆಲುವು: ಹಿರಿಯೂರು ಕ್ಷೇತ್ರದಲ್ಲಿ 2013 ಚುನಾವಣೆ ಅತ್ಯಂತ ಸವಾಲಿನದಾಗಿತ್ತು. ಕಾಂಗ್ರೆಸ್‌ನ ಹಿರಿಯ ನಾಯಕ ಎ.ಕೃಷ್ಣಪ್ಪ ಜೆಡಿಎಸ್‌ಗೆ ಸೇರ್ಪಡೆಯಾಗಿ, ಪಕ್ಷದ ರಾಜ್ಯಾಧ್ಯಕ್ಷರೂ ಆಗಿದ್ದರು. ಅವರು ಹಿರಿಯೂರು ವಿಧಾನಸಭೆ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದರು. ಎರಡು ಪ್ರಬಲ ಸಮುದಾಯದ ಮತ ಬ್ಯಾಂಕ್ ನಡುವೆ ತನ್ನ ಸಮುದಾಯದ ಮತಗಳ ನೆಲೆಯೇ ಇಲ್ಲದ ಡಿ.ಸುಧಾಕರ್ ಗೆಲ್ಲುವುದು ಸಾಧ್ಯವೇ ಇಲ್ಲ ಎನ್ನುವ ಅಭಿಪ್ರಾಯಗಳು ವ್ಯಕ್ತವಾಗಿದ್ದವು. ಆಗ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಡಿ.ಸುಧಾಕರ್ ಎಲ್ಲ ಲೆಕ್ಕಾಚಾರ, ವಿಶ್ಲೇಷಣೆಗಳನ್ನು ಬುಡಮೇಲು ಮಾಡಿ 1205 ಮತಗಳ ಅಂತರದಿಂದ ಗೆಲುವು ಸಾಧಿಸಿದರು. ಅಂದಿನ ಕಾಂಗ್ರೆಸ್ ಸರಕಾರದಲ್ಲಿ ಎಚ್.ಆಂಜನೇಯ ಅವರು ಸಮಾಜ ಕಲ್ಯಾಣ ಸಚಿವರಾಗಿದ್ದರಿಂದ ಸುಧಾಕರ್ ಅವರಿಗೆ ಮಂತ್ರಿಗಿರಿ ಸಿಗಲಿಲ್ಲ.

ಬೆನ್ನು ಹತ್ತಿದ ಅಪಪ್ರಚಾರಗಳು: ಡಿ.ಸುಧಾಕರ್ ರಾಜಕೀಯ ಜೀವನದಲ್ಲಿ 2018ರ ಚುನಾವಣೆ ಜೈತ್ರಯಾತ್ರೆಗೆ ಬ್ರೇಕ್ ಹಾಕಿದ ಚುನಾವಣೆ. ಕ್ಷೇತ್ರದಲ್ಲಿ ಎಷ್ಟೇ ಅಭಿವೃದ್ಧಿ ಕೆಲಸಗಳನ್ನು ಮಾಡಿದಾಗಲೂ ಅಲ್ಪ ಸಂಖ್ಯಾತರೊಬ್ಬರು ರಾಜಕೀಯ ಹಿಡಿತ ಸಾಧಿಸಿದ್ದರ ವಿರುದ್ಧ ತರಹೇವಾರಿ ಅಪ ಪ್ರಚಾರಗಳು ನಡೆದವು. ನಾಯಕನಹಟ್ಟಿ ಸಮೀಪದ ಡಿ.ಆರ್.ಡಿ.ಒ, ಐಐಎಸ್ಸಿ, ಬಾರ್ಕ್ ಸಂಸ್ಥೆಗಳಿಗೆ, ಆ ಮಾರ್ಗದಲ್ಲಿನ ಹಳ್ಳಿಗಳಿಗೆ ನೀರು ಪೂರೈಸಿದ್ದನ್ನು ರಾಜಕೀಕರಣಗೊಳಿಸಿ, ಚಳ್ಳಕೆರೆ ತಾಲೂಕಿಗೆ ಅನುಕೂಲ ಮಾಡುತ್ತಿದ್ದಾರೆನ್ನುವ ಅಪಪ್ರಚಾರ ನಡೆಸಲಾಯಿತು. ಕೆಲವೇ ಬೆಂಬಲಿಗರಿಗೆ ಮಣೆ ಹಾಕುತ್ತಿದ್ದಾರೆನ್ನುವ ಆರೋಪಗಳು, ಕೆಲ ಸಮುದಾಯಗಳನ್ನು ನಿರ್ಲಕ್ಷಿಸುತ್ತಿದ್ದಾರೆನ್ನುವ ಟೀಕೆಗಳ ಜತೆ ವೈಯಕ್ತಿಕ ಚಾರಿತ್ರ್ಯ ವಧೆಯ ಪರ್ವ ಆರಂಭವಾಯಿತು. ಇವೆಲ್ಲ ಆಡಳಿತ ವಿರೋಧಿ ಅಲೆಯ ಸ್ವರೂಪ ಪಡೆದುಕೊಂಡು 2018 ರ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಮಾಜಿ ಸಚಿವ ಎ.ಕೃಷ್ಣಪ್ಪರ ಪುತ್ರಿ ಪೂರ್ಣಿಮಾ ಕೃಷ್ಣಪ್ಪರ ವಿರುದ್ಧ ಸೋಲು ಅನುಭವಿಸಿದರು.

ಮತ್ತೆ ಗೆಲುವು, ಸಚಿವಗಿರಿ: ಪ್ರಬಲ ಸಮುದಾಯಗಳು ಎಚ್ಚೆತ್ತುಕೊಂಡಿವೆ. ಮೂರಂಕಿಯ ಮತಗಳ ಬೆಂಬಲವೂ ಇಲ್ಲದ ಡಿ.ಸುಧಾಕರ್‌ರ ರಾಜಕೀಯ ಜೀವನ ಮುಗಿದು ಹೋಯಿತು ಎನ್ನುವಷ್ಟರ ಮಟ್ಟಿಗೆ ಪ್ರಚಾರಗಳು ಚಾಲ್ತಿಗೆ ಬಂದವು. ಇವೆಲ್ಲವನ್ನೂ ಸುಳ್ಳು ಮಾಡಿ 2023ರ ಚುನಾವಣೆಯಲ್ಲಿ ಬಿಜೆಪಿಯ ಪೂರ್ಣಿಮಾ ಕೃಷ್ಣಪ್ಪ, ಜೆಡಿಎಸ್‌ನ ಎಂ.ರವೀಂದ್ರಪ್ಪ ವಿರುದ್ಧ ಸ್ಪರ್ಧಿಸಿ 30 ಸಾವಿರ ಮತಗಳ ಅಂತರ ಗೆಲುವು ಸಾಧಿಸಿದ್ದರು. ಕಾಂಗ್ರೆಸ್ ಸಚಿವ ಸಂಪುಟದಲ್ಲಿ ಯೋಜನೆ ಹಾಗೂ ಸಾಂಖ್ಯಿಕ ಇಲಾಖೆ ಸಚಿವರಾಗಿ, ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಡಿ. ಸುಧಾಕರ್ ಅಕಾಲಿಕವಾಗಿ ನಿರ್ಗಮಿಸುವ ಮೂಲಕ ಜಿಲ್ಲೆಯಲ್ಲೊಂದು ರಾಜಕೀಯ ನಿರ್ವಾತ ನಿರ್ಮಿಸಿ ಹೋಗಿದ್ದಾರೆ.

ಜಾತಿ, ಸಮುದಾಯಗಳ ಸಂಖ್ಯಾಬಲವೇ ಪ್ರಧಾನವಾಗಿರುವ ರಾಜಕಾರಣ ಪ್ರಾಬಲ್ಯ ಸಾಧಿಸುತ್ತಿರುವ ಇಂದಿನ ದಿನಗಳಲ್ಲಿ, ಅಲ್ಪಸಂಖ್ಯಾತ ಜೈನ ಸಮುದಾಯದಿಂದ ಬಂದು ಪರಿಶಿಷ್ಟರು, ಹಿಂದುಳಿದವರೇ ಪ್ರಧಾನವಾಗಿರುವ ಕ್ಷೇತ್ರಗಳಲ್ಲಿ ಜನರ ಒಲವು ಗಳಿಸಿ ಅಧಿಕಾರ ಹಿಡಿಯುವುದು ಸುಲಭದ ಮಾತೇನಲ್ಲ, ಅದನ್ನು ಪ್ರಾಯೋಗಿಕವಾಗಿ ಮಾಡಿ ತೋರಿಸಿದ, ಅಪರೂಪದ ಜನ ನಾಯಕ ಡಿ.ಸುಧಾಕರ್‌ರವರು.

ಅಹಿಂದ ಪ್ರಾಬಲ್ಯದಲ್ಲಿ ರಾಜಕೀಯ ನೆಲೆ ಕಂಡ ಜೈನ ಸಮಾಜದ ಡಿ.ಸುಧಾಕರ್

ಸುಧಾಕರ್ ನಿಧನಕ್ಕೆ ಡಾ.ಹೆಗ್ಗಡೆ ಸಂತಾಪ

ಧರ್ಮಸ್ಥಳ (ದ.ಕ.): ಸಚಿವ ಡಿ.ಸುಧಾಕರ್ ಚಳ್ಳಕೆರೆ ಅವರ ನಿಧನಕ್ಕೆ ಶ್ರೀ ಕ್ಷೇತ್ರ ಧರ್ಮಸ್ಥಳ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ಸಂತಾಪ ಸೂಚಿಸಿದ್ದಾರೆ. ''ರಾಜಕೀಯ, ಸಾಮಾಜಿಕ ಕ್ಷೇತ್ರದಲ್ಲಿ ಅನುಭವ ಗಳಿಸಿದ್ದ ಅವರು ಅನೇಕ ಬಾರಿ ಧರ್ಮಸ್ಥಳಕ್ಕೆ ಬಂದು ಹೋಗುತ್ತಿದ್ದರು. ಇತ್ತೀಚೆಗೆ ನಮ್ಮ ಆನೆ ಮರಿ 'ಶಿವಾನಿ'ಯ ಹುಟ್ಟುಹಬ್ಬದ ಆಚರಣೆಯಲ್ಲಿ ಭಾಗವಹಿಸಿದ್ದರು. ಸುಧಾಕರ್ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತೇನೆ. ಕುಟುಂಬಸ್ಥರಿಗೆ ಶಕ್ತಿ-ತಾಳ್ಮೆಯನ್ನಿತ್ತು ಮಂಜುನಾಥ ಸ್ವಾಮಿ ಹರಸಲೆಂದು ಪ್ರಾರ್ಥಿಸುತ್ತೇನೆ,'' ಎಂದಿದ್ದಾರೆ.

ಧರ್ಮಸ್ಥಳದಲ್ಲಿ ಸಚಿವ ಡಿ. ಸುಧಾಕರ್ ಆನೆ ಮರಿ 'ಶಿವಾನಿ'ಯ ಹುಟ್ಟುಹಬ್ಬ ಸಂಭ್ರಮದಲ್ಲಿ ಭಾಗವಹಿಸಿದ್ದ ಸಂದರ್ಭ.

book TATA Nexon | book TATA Harrier | book TATA Safari | Scan to Book Now | TATA MOTORS SAFETY DOME 360° PROTECTION | BHARAT NCAP

KROPEX AUTO Hosur Road: 7506024016, Koramangala: 9167395364, Sarjapur road: 8291202713, Mahadevapura: 8291052641
PRERANA MOTORS Lalbagh Road: 7506024020; BTM Layout: 7506024118; Rajajinagar: 7506024039; Yelahanka: 9619489334
ADISHAKTI CARS Hebbal: 7506023837; Dasarahalli: 9167982568; Kalyana Nagar: 9167163087
BELLAD ENTERPRISES PVT LTD Bommsandra 8238883535, 9035354160; Sarajpura: 8879932503
CAUVERY MOTORS: Avalahalli: 8879156068; Mekhri Circle: 8422849049; Devanahalli: 8879078454; Singanayakanahalli: 8879263417
KEY MOTORS JP Nagar Kanakapura Road: 7506023980, Mysore Road: 9167395034, Kanakapura City: 8879145649, BG Road: 9167395164, Nelamangala: 9167881890, Sunkadakatte Magadi Road: 9167882027
KHT MOTORS Whitefield: 7506023988; Domlur: 7506024006, Kolar: 9731149668
SREE AUTO Tumkur: 7506024318, Tiptur: 9619050469, Chitradurga: 9619033465, Kunigal: 8879046819, Chikkaballapur: 9167082428, Chintamani: 8291927028

Images and illustrations are indicative and for information purposes only. All features/specifications/colors are not available in all Models / Variants and are subject to change without prior Colours may vary due to printing limitations. The benefits mentioned differ for different Models / Variants. For exact details, please contact your nearest authorized TATA Motors dealership. Additional benefits include consumer offer, exchange offer/ Scrappage, Loyalty, intervention consumer, intervention exchange. Finance at the sole discretion of Financer. *Nexon is available in petrol, diesel, CNG and EV in India. **Nexon BNCAP tested in Oct'24 for Smart. TATA Nexon scored highest adult occupant score as per test conducted by Bharat NCAP in category of SUV less than 4 meter & engine less than 1.5L as per BNCAP test result. ^^Price mentioned is Nexon Smart MT Petrol, ex showroom Delhi local taxes extra. Terms and conditions apply. °Advanced driver assistance system (ADAS) is not a substitute for human eye and driver vigilance, it is a driver assist system that enhances driving experience and safety. The driver shall remain responsible for safe, vigilant and attentive driving. Only available in Nexon petrol fearless+ PS DCA. ~~Nexon is India's highest selling SUV as per FY26 Sales Apr'25 to Mar'26 which includes ICE & EV. *Harrier is available in Petrol, Diesel and EV. *Safari is available in Petrol and Diesel. Harrier & Safari as per Bharat NCAP 2023 score. ^^Prices mentioned are for Harrier Smart Petrol MT Variant and Safari Smart Petrol MT Variant, ex-showroom Delhi, Local taxes extra. *Terms and conditions apply.